ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 18

ರೂ. 5/-

ಮೇ 03, 2009

ಕನ್ನಡ ವಾರಪತ್ರಿಕೆ



ಮೇ ದಿನ - 2009
ಶೋಷಣಾಮುಕ್ತ ಸಮಾಜದ
ಹೊಸ ಆಸೆ ಚಿಗುರಿಸಿದೆ



ಎತ್ತ ಸಾಗುತ್ತಿದ್ದಾರೆ ಕರಾವಳಿಯ ಅಲ್ಪಸಂಖ್ಯಾತರು?



ಯುಪಿಎ ಕೊಡುಗೆ : ಬೆಲೆ ಏರಿಕೆ - ಹಸಿವು ಮತ್ತು ಅಪೌಷ್ಟಿಕತೆ



ಬದಲಾಗದ ದಲಿತರ ಬದುಕು

ಮರೆಯಾದ ಅಹಲ್ಯ ರಂಗ್ಣೇಕರ್





ಸ್ವಾತಂತ್ರ್ಯ ಹೋರಾಟಗಾರ್ತಿ, ಐತಿಹಾಸಿಕ ರಿನ್ ಬಂಡಾಯದಲ್ಲಿ ಪಾಲ್ಗೊಂಡ ಬಂಡಾಯಗಾರ್ತಿ, ದೇಶದ ಪ್ರಗತಿಪರ ಮಹಿಳಾ ಚಳುವಳಿಗೆ ಬುನಾದಿ ಹಾಕಿದ ಮಹಿಳಾ ನಾಯಕಿ, ಕಮ್ಯುನಿಸ್ಟ್ ಚಳುವಳಿಯ ಹಿರಿಯ ಚೇತನ, ಮಾಜಿ ಸಂಸದೆ, ಉನ್ನತ ರಾಜಕೀಯ ಪ್ರಜ್ಞೆಯ ಕಾರ್ಮಿಕ ನಾಯಕಿ ಕಾಂ. ಅಹಲ್ಯಾ ರಂಗ್ಣೇಕರ್ ನಮ್ಮನ್ನು ಅಗಲಿದ್ದಾರೆ.

ರಣರಾಗಿಣಿಗೆ ಇದೋ ನಮ್ಮ ನಮನ

ಮಹಾರಾಷ್ಟ್ರದಲ್ಲೇ 'ರಣರಾಗಿಣಿ' ಎಂಬ ಬಿರುದು ಹೊತ್ತು ಇಡೀ ತಮ್ಮ ಜೀವನವನ್ನು ಮಹಿಳಾ ಚಳುವಳಿ, ಎಡ ಚಳುವಳಿ ಕಟ್ಟಲು ಮುಡುಪಾಗಿಟ್ಟ ಧೀರ ಮಹಿಳೆ ಅಹಲ್ಯಾ ರಂಗ್ಣೇಕರ್. ಧೀಮಂತ ಚೇತನ, ಅಹಲ್ಯಾ ಏಪ್ರಿಲ್ 19 ರಂದು ತಮ್ಮ 87 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದಿದ್ದಾಳೆ. ಅವರು ಇಬ್ಬರು ಪುತ್ರರನ್ನು ಕುಟುಂಬ ವರ್ಗದವರನ್ನು ಚಳುವಳಿಯ ಅಪಾರ ಸಂಗಾತಿಗಳನ್ನು ಅಗಲಿದ್ದಾರೆ.

ಪೂನಾದಲ್ಲಿ ಆದಾಯ ತೆರಿಗೆ ಆಯುಕ್ತರಾಗಿದ್ದ ತ್ರಯಂಬಕ ರಣದಿವೆ ಅವರ ಎಂಟು ಜನ ಮಕ್ಕಳಲ್ಲಿ ಕೊನೆಯವಳಾದ ಅಹಲ್ಯಾ, ಮಹಾರಾಷ್ಟ್ರದ ಪುಣೆಯಲ್ಲಿ 1922 ರಲ್ಲಿ ಜನಿಸಿದರು. 19 ಮತ್ತು 20ನೇ ಶತಮಾನದ ಸಮಾಜ ಸುಧಾರಣಾ ಚಳುವಳಿಗೆ ಪುಣೆ ಕೇಂದ್ರ ಸ್ಥಾನ. ಹಾಗೆಯೇ ಬ್ರಾಹ್ಮಣ ಸನಾತನಿಗಳ ಕೇಂದ್ರವೂ ಹೌದು. ಅಹಲ್ಯಾ ಬೆಳೆದ ಮನೆಯಲ್ಲಿಯೇ ಮಹಾರಾಷ್ಟ್ರದ ಸಮಾಜ ಸುಧಾರಣೆಯ ನೇತಾರರಾದ ಗೋಪಾಲ ಗಣೇಶ ಆಗರ್‌ಕರ್, ಜ್ಯೋತಿ ಬಾಪುಲೆ ಮತ್ತು ಡಿ.ಡಿ.ಕರ್ವೆಯವರ ಪ್ರಗತಿಪರ ಚಿಂತನೆಗಳು ಆಳವಾಗಿ ಬೇರೂರಿದ್ದವು.

1942ರ ಕ್ವಿಟ್ ಇಂಡಿಯಾ ಚಳುವಳಿಯೇ ಬೃಹತ್ ಸಂಖ್ಯೆಯಲ್ಲಿ ಮಹಿಳೆಯರನ್ನು ಸ್ವಾತಂತ್ರ್ಯ ಚಳುವಳಿಗೆ ಸೆಳೆದುಕೊಂಡು ಜನಪ್ರಿಯ ಚಳುವಳಿ ಎನಿಸಿಕೊಂಡಿತು. ಈ ಸಂದರ್ಭದಲ್ಲೇ ಅಹಲ್ಯಾ ಅವರ ಕಾಲೇಜು ವಿದ್ಯಾಭ್ಯಾಸ ಪ್ರಾರಂಭವಾದದ್ದು. ಇಪ್ಪತ್ತರ ಹರೆಯದ ಅಹಲ್ಯಾ ತಮ್ಮ ಗೆಳತಿಯರೊಡಗೂಡಿ ಆಗಾಖಾನ್ ಅರಮನೆಯ ಸೆರೆಮನೆಯಲ್ಲಿ ಚಿಕ್ಕ ಆದರೆ ದಿಟ್ಟ ಹೋರಾಟವನ್ನು ಮಾಡಿ ಯಶಸ್ವಿಯಾದರು. ಅಂದಿನಿಂದ ಪ್ರಾರಂಭವಾಯಿತು ಅಹಲ್ಯಾ ಅವರ ಹೋರಾಟದ ಬದುಕು.

ಜೈಲು ವಾರ್ಡನ್‌ನ ಎದುರಿಗೇ ಜೈಲಿನ ಕಟ್ಟಡದ ಮೇಲೆ ಇಂದು ಕೇರ್‌ಕರ್ ಜೊತೆ ಮಾನವ ಪಿರಮಿಡನ್ನು ರಚಿಸಿ ಅದರ ಮೇಲೆ ಹತ್ತಿ ಜೈಲಿನ ಗೋಡೆಯ ತುದಿಗೆ ಹೋಗಿ ಅಲ್ಲಿ ರಸ್ತೆಯ ಮುಂಭಾಗ ಕಾಣುವಂತಹ ಜಾಗದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದರು. ಇದರಿಂದ ಅವರು ಏಳು ದಿನಗಳ ಕಾಲ ಶಿಕ್ಷೆ ಒಳಪಟ್ಟರು.

ಅಹಲ್ಯಾ ರೂಹಿಯಾ ಕಾಲೇಜಿನಲ್ಲಿ ತಮ್ಮ ಬಿಎಸ್‌ಸಿ ಪದವಿ ಪಡೆದರು, ಹಲವಾರು ಕ್ಷೇತ್ರಗಳಲ್ಲಿ ವಿಶಿಷ್ಟರೆನಿಸಿಕೊಂಡರು. ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿನಿ, ಅದ್ಭುತ ರಂಗ ಕಲಾವಿದೆ. ಒಳ್ಳೆಯ ಈಜುಗಾತಿ ಮತ್ತು ಓಟಗಾರ್ತಿಯಾಗಿದ್ದರು.

ಕಾರ್ಮಿಕ ಚಳುವಳಿಗೆ......

ಮುಂಬೈಯಲ್ಲಿ 1943 ರಲ್ಲಿ ತಮ್ಮ ಕಾಲೇಜು ವಿದ್ಯಾಭ್ಯಾಸ ಮುಗಿಸಿದ ನಂತರ, ಹತ್ತಿ ಗಿರಣಿ ಕಾರ್ಮಿಕರ ಮಧ್ಯೆ ಕೆಲಸ ಮಾಡಲು ಪ್ರಾರಂಭಿಸಿದರು. ಅದೇ ವರ್ಷ ಕಮ್ಯೂನಿಸ್ಟ್ ಪಕ್ಷವನ್ನು ಸೇರಿದರು. ಆ ವೇಳೆಗಾಗಲೇ ಕಮ್ಯೂನಿಸ್ಟ್ ಸಂಘಟಕ ಮತ್ತು ನೇತಾರರಾಗಿದ್ದ ಅವರ ಸೋದರ ಬಿ.ಟಿ.ರಣದಿವೆ ಅವರು ಅಹಲ್ಯಾ ಮೇಲೆ ಗಾಢ ಪರಿಣಾಮ ಬೀರಿದರು.
ಕಮ್ಯೂನಿಸ್ಟ್ ಪಕ್ಷ ಮತ್ತು ಕಾರ್ಮಿಕ ಸಂಘಟನೆಯ ಕೆಲಸದ ಜೊತೆ ಜೊತೆಗೆ ಅಹಲ್ಯಾ ತಮ್ಮ ಸಂಗಾತಿಗಳಾದ ವಿಮಲಾ ರಣದಿವೆ, ಮಾಲತಿ ನಗರ್‌ಕರ್ ಮತ್ತು ಇತರರ ಜೊತೆ ಸೇರಿ ಕ್ರಾಂತಿಕಾರಿ ಮಹಿಳಾ ಚಳುವಳಿಯನ್ನು ಕಟ್ಟಲು ಭದ್ರ ಬುನಾದಿ ಹಾಕಿದರು.

ಕಾರಾಗೃಹ ಶಿಕ್ಷೆ

1945 ಏಪ್ರಿಲ್‌ನಲ್ಲಿ ದಾದರ್‌ನಲ್ಲಿ ಅಹಲ್ಯಾ ಅವರ ವಿವಾಹ ಪಿ.ಟಿ.ರಂಗ್ಣೇಕರ್ ಅವರ ಜೊತೆ ಜರುಗಿತು. 1996 ರಲ್ಲಿ ರಿನ್ ಬಂಡಾಯ ಎಂದೇ ಖ್ಯಾತವಾದ ಬ್ರಿಟಿಷ್ ನೌಕಾದಳದೊಳಗಿನಿಂದ ಸಿಡಿದ ಬಂಡಾಯಕೆ ಬೆಂಬಲವಾಗಿ ಅಹಲ್ಯ ಗಿರಣಿ ಕಾರ್ಮಿಕರ ಯಶಸ್ವಿ ಮುಷ್ಕರಕ್ಕೆ ನೇತೃತ್ವ ನೀಡಿದರು. 1947 ರಲ್ಲಿ ಅವರ ಮೊದಲ ಮಗ ಅಜಿತ್ ಹುಟ್ಟಿದಾಗ ರೈಲ್ವೆ ಮುಷ್ಕರದಲ್ಲಿ ಭಾಗವಹಿಸಿದ್ದಕ್ಕಾಗಿ ಅವರು ಬಂಧಿಸಲ್ಪಟ್ಟು ಒಂದೂವರೆ ವರ್ಷಗಳ ಕಾಲ ಕಾರಾಗ್ರಹದಲ್ಲಿದ್ದರು. ಆ ಸಂದರ್ಭದಲ್ಲಿ ತಮ್ಮ ಎಳೆಯ ಮಗುವಿನ ಜವಾಬ್ದಾರಿ ಹೊತ್ತ ಅವರ ಗಂಡನ ಮನೆಯವರು ರಾಜಕೀಯ ಕೆಲಸದಲ್ಲಿ ನಿಷ್ಕಳಂಕ ಬೆಂಬಲ ನೀಡಿದುದರಿಂದಲೇ ಮುಂದೆ ಅಹಲ್ಯಾ ಅವರಿಗೆ ಪೂರ್ಣಾವಧಿ ರಾಜಕೀಯ ಕೆಲಸವನ್ನು ಮಾಡಲು ಸಾಧ್ಯವಾಯಿತು. ಸ್ವಾತಂತ್ರ್ಯ ಬಂದ ನಂತರ ಅಹಲ್ಯಾರವರ ಬದುಕು ನಿಜವಾದ ಅರ್ಥದ ಸಾರ್ವಜನಿಕ ಕ್ಷೇತ್ರವಾಯಿತು. ನಂತರದ ವರ್ಷಗಳಲ್ಲಿ ಕೃಶ ದೇಹಿಯಾದರೂ ದೃಢವಾಗಿದ್ದ 'ಅಹಲ್ಯಾ ತಾಯಿ' ಜನನಾಯಕಿಯಾಗಿ ಮತ್ತು ಮುಂಬೈ ನಗರದ ಬಹುಮುಖ್ಯ ಸಾರ್ವಜನಿಕ ವ್ಯಕ್ತಿಯಾಗಿ ರೂಪು ತಳೆದರು.

ದುಡಿಯುವ ಜನರ, ಬಡವರ ಮತ್ತು ಸಾಮಾಜಿಕವಾಗಿ ಶೋಷಿತರ ಸಮಸ್ಯೆಗಳನ್ನು ತಮ್ಮದೆಂದೇ ಭಾವಿಸಿಕೊಂಡು ದುಡಿದ ಅಹಲ್ಯಾ ತಾಯಿಯನ್ನು ಜನ ಪ್ರೀತಿಸಿದರು, ಗೌರವಿಸಿದರು. ಅವರಿಗೆ ಸಿಕ್ಕಿದ ಅಪಾರ ಜನಪ್ರಿಯತೆಗೆ ಮುಖ್ಯ ಕಾರಣ, ಎಲ್ಲಾ ತರಹದ ಅನ್ಯಾಯದ ವಿರುದ್ಧ ಅವರು ಸತತವಾಗಿ ನಡೆಸಿದ ಹೋರಾಟ. ಜನರೊಂದಿಗೆ ಜವಾಬ್ದಾರಿಯುತವಾಗಿ ಮತ್ತು ನಿರಂತರವಾಗಿದ್ದ ಅವರ ಸಂಬಂಧ, ಅವರ ವೈಯಕ್ತಿಕ ಮತ್ತು ರಾಜಕೀಯ ಪ್ರಾಮಾಣಿಕತೆಯ ಕಾರಣಗಳಿಗಾಗಿ ಹಾಗೂ ಜನರ ನಡುವೆ ಐಕ್ಯತೆಯನ್ನು ಸಾಧಿಸಬಲ್ಲ ಆಕೆಯ ಸಾಮರ್ಥ್ಯ ಎಲ್ಲವೂ ಮುಖ್ಯ ಅಂಶಗಳಾಗಿದ್ದವು. 'ಯಾವುದೇ ವ್ಯಕ್ತಿಗೆ ಅನ್ಯಾಯವಾಗಿರಲಿ, ಅದಕ್ಕಾಗಿ ತಕ್ಷಣ ಹೋರಾಟಕ್ಕಿಳಿಯಬಲ್ಲ ಪ್ರೇರಣೆಗೆ ಅಹಲ್ಯಾ ಒಳಗಾಗುತ್ತಿದ್ದಳು' ಎನ್ನುವ ಅವರ ಪತಿ ರಂಗ್ಣೇಕರ್, 'ಅತ್ಯಂತ ಪ್ರತಿಭಾನ್ವಿತ ನಟಿ ಮತ್ತು ಒಳ್ಳೆಯ ಕ್ರೀಡಾಪಟು. ಆದರೆ ತುಂಬಾ ತುಂಟಿಯಾಗಿದ್ದಳು. ಅವಳು ಪಕ್ಷಕ್ಕೆ ಸೇರಿದಾಗ



34 ಕಪ್‌ಗಳು ಮತ್ತು ಪದಕಗಳು ಅವಳ ಬಳಿ ಇದ್ದವು' ಎಂಬ ವಿಂಚಿಗೆಯ ಮಾತನಾಡುತ್ತಿದ್ದರು.

ರಣರಾಗಿಣಿ

1950 ರಲ್ಲಿ ಮಹಾರಾಷ್ಟ್ರ ರಾಜ್ಯದ ಪುನರ್‌ವಿಂಗಡಣೆಗಾಗಿ ತೀವ್ರಗೊಂಡ ಸಂಯುಕ್ತ ಮಹಾರಾಷ್ಟ್ರ ಚಳುವಳಿಯಲ್ಲಿ ಮುಖ್ಯ ಪಾತ್ರ ವಹಿಸಿ ಕ್ರಿಯಾಶೀಲರಾಗಿ ಭಾಗವಹಿಸಿದ್ದಕ್ಕೆ ಜೈಲಿಗೆ ಹೋಗಬೇಕಾಯಿತು. ಈ ಚಳುವಳಿಯ ಸಂದರ್ಭದಲ್ಲೇ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸೇನಾಪತಿ ಭಟ್ ಅವರ ತಲೆಗೇ ಪೊಲೀಸನೊಬ್ಬ ಗುರಿಯಿಟ್ಟು ಲಾಠಿ ಹೊಡೆಯಲು ಹೋದಾಗ ಅಹಲ್ಯಾ ಅವನನ್ನು ತಡೆಯಲು ಹೋಗಿ ಅವರೇ ಲಾಠಿ ಏಟನ್ನು ತಿನ್ನಬೇಕಾಯಿತು. ಈ ದೃಶ್ಯವನ್ನು ನೆನಪಿಸಿಕೊಂಡು ನಂತರದ ದಿನಗಳಲ್ಲಿ ಹೆಸರಾಂತ ಮರಾಠಿ ಪ್ರಗತಿಪರ ಕವಿ ಆಚಾರ್ಯ ಆತ್ರೆ ತಮ್ಮ ಕವನ ಒಂದರಲ್ಲಿ ಅಹಲ್ಯಾ ಅವರನ್ನು ಕುರಿತು 'ರಣರಾಗಿಣಿ ಅಹಲ್ಯಾ' ಎಂದು ಕರೆದಿದ್ದಾರೆ.

ಮುಂಬೈ ಕಾರ್ಪೊರೇಟರ್ ಆಗಿ...

1961 ರಲ್ಲಿ ಮುಂಬೈ ಮುನಿಸಿಪಲ್ ಕಾರ್ಪೊರೇಷನ್ ಸದಸ್ಯೆ ಆಗಿ ಚುನಾಯಿತರಾಗಿ 19 ವರ್ಷ ಕಾಲ ಭ್ರಷ್ಟಾಚಾರಕ್ಕೆ ಒಳಗಾಗದ ಜನಪರವಾಗಿ ಕೆಲಸ ನಿರ್ವಹಿಸಿದ್ದರು. 1962 ರಲ್ಲಿ ಭಾರತ ಮತ್ತು ಚೀನಾ ಯುದ್ಧದ ಸಂದರ್ಭದಲ್ಲಿ ಬಂಧಿತರಾದರು. 1972 ರಲ್ಲಿ ಮೃಣಾಲ್ ಘೋರ ಜೊತೆಗೂಡಿ ಮಹಾರಾಷ್ಟ್ರದಲ್ಲಿ ಸುಪ್ರಸಿದ್ಧ ಬೆಲೆ ಏರಿಕೆ ವಿರೋಧಿ ಆಂದೋಲನವನ್ನು ನಡೆಸಿದರು. 1974 ರಲ್ಲಿ ರಾಷ್ಟ್ರದಾದ್ಯಂತ ರೈಲು ಮುಷ್ಕರಕ್ಕೆ ಕೆಲವು ದಿನಗಳ ಮುಂಚೆ ಅಹಲ್ಯಾ ಅವರ ಬಂಧನವಾಯಿತು. 1975 ರಿಂದ 77 ರ ತುರ್ತು ಪರಿಸ್ಥಿತಿಯನ್ನು ಎದುರಿಸಿದ ಸಂದರ್ಭದಲ್ಲಿ ಪುಣೆಯ ಯರವಾಡ ಜೈಲಿನಲ್ಲಿ ಒಂದು ವರ್ಷ ಒಂಬತ್ತು ತಿಂಗಳುಗಳ ಕಾಲ ಸೆರೆಮನೆಯಲ್ಲಿದ್ದರು.

1977 ರಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಮುಂಬೈಯ ನಾರ್ಥ್ ಸೆಂಟ್ರಲ್ ಕ್ಷೇತ್ರ ದಿಂದ ಲೋಕಸಭೆಗೆ ಆಯ್ಕೆಯಾದರು.

1978 ರಲ್ಲಿ ಜಲಂಧರ್‌ನ ಸಿಪಿಐ(ಎಂ) ಪಕ್ಷದ ಕಾಂಗ್ರೆಸ್‌ನಲ್ಲಿ ಕೇಂದ್ರ ಸಮಿತಿ ಸದಸ್ಯೆಯಾಗಿ ಆಯ್ಕೆ ಆದವರು 2005ರವರೆಗೆ ಆ ಜವಾಬ್ದಾರಿಯಲ್ಲಿ ಇದ್ದರು. ಅವರ ವಯಸ್ಸು ಮತ್ತು ಅನಾರೋಗ್ಯದ ಕಾರಣದಿಂದಾಗಿ ಅವರು ಕೇಂದ್ರ ಸಮಿತಿ ಸದಸ್ಯತ್ವದಿಂದ ನಿರ್ಗಮಿಸಬೇಕಾಯಿತು.

ಅಹಲ್ಯಾ ಅವರು 7 ವರ್ಷಕ್ಕಿಂತಲೂ ಹೆಚ್ಚು ಕಾಲ ಜೈಲಿನಲ್ಲೂ, ಎರಡು ವರ್ಷಗಳ ಕಾಲ ಭೂಗತವಾಗಿದ್ದರು. 1983 ರಿಂದ 1986 ರವರೆಗೆ ಮಹಾರಾಷ್ಟ್ರದ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿಗಳಾಗಿದ್ದರು. ಎಐಡಿಡಬ್ಲ್ಯುಎ ದ ಸ್ಥಾಪಕ ಸದಸ್ಯೆಯಾಗಿ ನಂತರ ಅದರ ಕಾರ್ಯಾಧ್ಯಕ್ಷೆಯಾಗಿ, ಉಪಾಧ್ಯಕ್ಷೆಯಾಗಿ ನಂತರ 2001 ರಿಂದ ಸಂಘಟನೆಯ ಪೋಷಕರಾಗಿದ್ದರು.

ಜನರ ನಿಜವಾದ ಪ್ರತಿನಿಧಿಯಾಗಿ, ಅವರ ಹಕ್ಕುಗಳನ್ನು ರಕ್ಷಿಸಲು ಮತ್ತು ತಮ್ಮ ಕರ್ತವ್ಯಗಳನ್ನು ನೆರವೇರಿಸಲು ಯಾರೇ ಆದರೂ ಸರಿ, ಅವರು ಭೂಗತ ಲೋಕದ ಗೂಂಡಾಗಳೇ ಆಗಿದ್ದರೂ ಕೂಡ, ಅವರನ್ನು ಎದುರಿಸಲು ಅಹಲ್ಯಾ ಸಹಾ ಸಿದ್ಧರಿದ್ದರು. ಕಮ್ಯೂನಿಸ್ಟ್ ಚಳುವಳಿಯ ಒಬ್ಬ ಸಮರ್ಥ ಮಹಿಳಾ ನಾಯಕಿ ಇನ್ನಿಲ್ಲವಾಗಿದ್ದಾರೆ.

○ ಶಾರದ.ಕೆ.ಎಸ್

ನೆರವು ನೀಡಲು ಕೋರಿಕೆ

ಜನಶಕ್ತಿ ವಾರಪತ್ರಿಕೆಯ ಸಂಪಾದಕರು, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುವ ಎಸ್.ವೈ.ಗುರುಶಾಂತ್ ರವರು ತೆರೆದ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ಇದಕ್ಕಾಗಿ ಸುಮಾರು ಮೂರೂವರೆ ಲಕ್ಷ ರೂಪಾಯಿಗಳಷ್ಟು ವೆಚ್ಚ ತಗಲುವ ಅಂದಾಜಿದೆ. ಆದ್ದರಿಂದ ಹಿತೈಷಿಗಳು ಧನ ಸಹಾಯ ನೀಡಲು ಕೋರಲಾಗಿದೆ.

- ವಿ.ಜೆ.ಕೆ.ನಾಯರ್,
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ,

ವಿ.ಸೂ.: ನಿಮ್ಮ ನೆರವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಹೆಸರಿಗೆ ಕಳುಹಿಸುವುದು.

23 ಕಡೆ ಮತದಾನ ಬಹಿಷ್ಕಾರ ಬಿಜೆಪಿ ವೈಫಲ್ಯಕ್ಕೆ ಹಿಡಿದ ಕನ್ನಡಿ

ರಾಜ್ಯದ 17 ಲೋಕಸಭಾ ಕ್ಷೇತ್ರಗಳಿಗೆ ಏಪ್ರಿಲ್ 23 ರಂದು ನಡೆದ ಮೊದಲ ಹಂತದ ಚುನಾವಣೆಯಲ್ಲಿ 23 ಮತಗಟ್ಟೆಗಳಲ್ಲಿ ಮತದಾನವೇ ನಡೆಯದೆ ಇರುವುದು ಒಂದು ಗಂಭೀರ ಬೆಳವಣಿಗೆಯಾಗಿದೆ. ಇದು ರಾಜ್ಯದ ಬಿಜೆಪಿ ಸರ್ಕಾರದ ಆಡಳಿತ ವೈಫಲ್ಯಕ್ಕೆ ಜನರ ಮೌನ ಪ್ರತಿಭಟನೆಯಾಗಿದೆ ಎಂದು ವರ್ಣಿಸಲಾಗುತ್ತಿದೆ. ತಮ್ಮ ಗ್ರಾಮಕ್ಕೆ ಮೂಲ ಸೌಕರ್ಯ ಕಲ್ಪಿಸಿಲ್ಲ, ತಮ್ಮ ಗ್ರಾಮದ ಅಭಿವೃದ್ಧಿಯಾಗಿಲ್ಲ ಎಂದು ಇದೇ ಮೊದಲ ಬಾರಿಗೆ ಬಾರೀ ಸಂಖ್ಯೆಯ ಗ್ರಾಮೀಣ ಮತದಾರರು ಮತದಾನ ಬಹಿಷ್ಕರಿಸಿ ಆಳುವ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಮ್ಮ ಕೃಷಿ ಭೂಮಿಯನ್ನು ವಶಪಡಿಸಿಕೊಂಡಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ರಾಮಗೊಂಡನಹಳ್ಳಿಗ್ರಾಮಸ್ಥರು ಮತದಾನ ಬಹಿಷ್ಕರಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವಂತೆ ಆಗ್ರಹಿಸಿದ್ದಾರೆ.

ಉತ್ತರಕನ್ನಡ ಲೋಕಸಭಾ ಕ್ಷೇತ್ರದ ಕಾರವಾರ ತಾಲ್ಲೂಕಿನ ಬರಗಲ್ ಎಂಬ ಗ್ರಾಮದ ಎಲ್ಲಾ 307 ಮತದಾರರು ಮತದಾನ ಬಹಿಷ್ಕರಿಸಿ ಕಳೆದ ಚುನಾವಣೆಯಲ್ಲಿ ಕಾಲುವೆ ಮತ್ತು ಸೇತುವೆ ನಿರ್ಮಾಣಕ್ಕೆ ಧನಸಹಾಯ ನೀಡುವುದಾಗಿ ಮೀನುಗಾರಿಕಾ ಸಚಿವ ಆನಂದ ಅಸ್ನೋಟಿಕರ್ ನೀಡಿದ ಭರವಸೆಯನ್ನು ಈಡೇರಿಸದಿರುವುದನ್ನು ಪ್ರತಿಭಟಿಸಿದ್ದಾರೆ.

ಕೋಲಾರ ಲೋಕಸಭಾ ಕ್ಷೇತ್ರದ ಬಂಗಾರಪೇಟೆ ತಾಲ್ಲೂಕಿನ ಹುನಕುಂದ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಿಟಾಮಾನಹಳ್ಳಿಯ ಗ್ರಾಮಸ್ಥರು ರಸ್ತೆ ಹಾಗೂ ಮೂಲಸೌಕರ್ಯ ಕಲ್ಪಿಸದ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಮತದಾನ ಬಹಿಷ್ಕಾರ ಮಾಡಿದ್ದಾರೆ.

ಮುಳವಾಡ ಏತ ನೀರಾವರಿ ಯೋಜನೆ ಅಡಿಯಲ್ಲಿ ತಮ್ಮ ಗ್ರಾಮಗಳಿಗೆ ನೀರಾವರಿ ಸೌಲಭ್ಯ ವಿಸ್ತರಣೆ ಆಗದಿರುವುದನ್ನು ವಿರೋಧಿಸಿ ಮಲಘಾಣ ಮತ್ತು ಮಲಘಾಣ ತಾಂಡಾದ 2400ಕ್ಕೂ ಹೆಚ್ಚು ಮತದಾರರು ಮತ ಚಲಾಯಿಸದೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿಂಧನೂರಿನ ಬಂಗಾಳಿ ಪುನರ್ವಸತಿ ಕ್ಯಾಂಪ್ ನಿವಾಸಿಗಳಿಗೆ ಜಾತಿ ಪ್ರಮಾಣ ಪತ್ರ ಕೊಡದಿರುವುದನ್ನು ಖಂಡಿಸಿ 6 ಮತಗಟ್ಟೆಗಳಲ್ಲಿ, ನೀರಾವರಿ ಹಾಗೂ ಕುಡಿಯುವ ನೀರಿನ ಸಮಸ್ಯೆ ಮುಂದಿಟ್ಟು 10 ಕ್ಕೂ ಹೆಚ್ಚು ಗ್ರಾಮಗಳಲ್ಲಿ ಮತದಾನ ಬಹಿಷ್ಕರಿಸಿದ್ದು ವರದಿಯಾಗಿದೆ.

ಕೊಪ್ಪಳ ಲೋಕಸಭಾ ಕ್ಷೇತ್ರದ 5 ಮರುವಸತಿ ಕ್ಯಾಂಪುಗಳು ಗುಲ್ಬರ್ಗಾ ಜಿಲ್ಲೆಯ ಸುಂಬಡಗ್ರಾಮ, ಜೇವರ್ಗಿ ತಾಲ್ಲೂಕಿನ ಏಸ್ತಾರೆ ಗ್ರಾಮ, ಬಾಲ್ಕಿ ತಾಲ್ಲೂಕಿನ ಕಟಕ ಚಿಂಚೋಳಿ, ಚನ್ನಪಟ್ಟಣ ತಾಲ್ಲೂಕಿನ ಹೊನ್ನನಾಯಕನಹಳ್ಳಿ, ಲಿಂಗಸಗೂರು ತಾಲ್ಲೂಕಿನ ಗೌಡೂರು ತಾಂಡಾ, ಹಿರಿಯೂರು ತಾಲ್ಲೂಕಿನ ಮತಗಟ್ಟೆ ಸಂಖ್ಯೆ 245, ನೆಲಮಂಗಲದ ದೊಡ್ಡಚನ್ನೋಹಳ್ಳಿ, ಚಿಕ್ಕಬಳ್ಳಾಪುರದ ಆರೂರು ಮತ್ತು ಅಲೀಪುರ ಗ್ರಾಮಗಳ ಮತದಾರರು ಮತದಾನ ಬಹಿಷ್ಕರಿಸಿದ್ದಾರೆ.

ಮತದಾನ ಬಹಿಷ್ಕಾರ ಈ ಹಿಂದೆಯೂ ನಡೆದಿದೆ. ಆದರೆ ಇಷ್ಟೊಂದು ಸಂಖ್ಯೆಯಲ್ಲಿ ಆಗುತ್ತಿರುವುದು ಇದೇ ಮೊದಲು. ಅಭಿವೃದ್ಧಿ ಕಡೆಗಣನೆ ಆರೋಪ, ನೀರಾವರಿಗೆ ಆಗ್ರಹ, ಭೂಸ್ವಾಧೀನಕ್ಕೆ ವಿರೋಧ, ಸೇತುವೆ ಬೇಕು. ಕುಡಿಯುವ ನೀರಿಗೆ ಒತ್ತಾಯ ಮುಂತಾದ ಕಾರಣಗಳಿಗಾಗಿ ಮತದಾನ ಬಹಿಷ್ಕರಿಸಿರುವ ಈ ಬೆಳವಣಿಗೆ ರಾಜ್ಯ ಬಿಜೆಪಿ ಸರ್ಕಾರದ 10 ತಿಂಗಳ ಆಡಳಿತ ವೈಫಲ್ಯವನ್ನು ಎತ್ತಿ ತೋರಿಸುತ್ತಿದೆ. ಹೋದ ಹೋದಲೆಲ್ಲಾ 'ಅಭಿವೃದ್ಧಿ' ಮಂತ್ರವನ್ನೇ ಬಡಬಡಿಸಿರುವ ಮುಖ್ಯಮಂತ್ರಿ ಯಡಿಯೂರಪ್ಪ ಇದಕ್ಕೇನನ್ನುತ್ತಾರೆ? ಮತದಾನ ಬಹಿಷ್ಕಾರ ಆಗಿರುವ ಗ್ರಾಮಗಳಲ್ಲಿ ಮಾತ್ರ ಅಭಿವೃದ್ಧಿ ಕಡೆಗಣಿಸಲಾಗಿದೆ ಎಂದು ಇದರ ಅರ್ಥವಲ್ಲ. ಇಷ್ಟು ಗ್ರಾಮಗಳ ಮತದಾರರು ತಮ್ಮ ಅಸಮಾಧಾನವನ್ನು ಈ ರೀತಿ ವ್ಯಕ್ತಪಡಿಸಿದ್ದಾರಷ್ಟೇ. ಮುಂದಿನ ಹಂತದ ಚುನಾವಣೆಯಲ್ಲಿಯೂ ಇನ್ನೂ ಅನೇಕ ಕಡೆ ಮತದಾನ ಬಹಿಷ್ಕಾರ ನಡೆಯುವ ಸಂಭವ ಇದೆ. ಒಟ್ಟಾರೆಯಾಗಿ ರಾಜ್ಯದ ನಿಜವಾದ ಅಭಿವೃದ್ಧಿ ಕೆಲಸಕ್ಕೆ ಯಡಿಯೂರಪ್ಪ ಸರ್ಕಾರ ಗಮನ ನೀಡುತ್ತಿಲ್ಲ ಎಂಬ ಆರೋಪಕ್ಕೆ ಇಲ್ಲಿ ಈಗ ಪುರಾವೆ ಸಿಕ್ಕಂತಾಗಿದೆ.

ಯಡಿಯೂರಪ್ಪನವರ 10 ತಿಂಗಳ ಅವಧಿಯಲ್ಲಿ ಗಣಿಧಣಿಗಳ ಅಭಿವೃದ್ಧಿಯಾಗಿದೆ. ಭೂಮಾಫಿಯಾಗಳ ಅಭಿವೃದ್ಧಿಯಾಗಿದೆ. ಬಿಜೆಪಿ ಪಕ್ಷದ ಭ್ರಷ್ಟಮಂತ್ರಿಗಳ ಮತ್ತು ಶಾಸಕರ ಅಭಿವೃದ್ಧಿಯಾಗಿದೆ. ಆದರೆ ಗ್ರಾಮೀಣ ಬಡವರು ಮತ್ತು ನಗರ ಪ್ರದೇಶಗಳ ದುಡಿಯುವ ಜನರ ಪರಿಸ್ಥಿತಿ ಮಾತ್ರ ಬದಲಾಗಿಲ್ಲ. ಇದೇ ತರಹದ ಸರ್ಕಾರ ಕೇಂದ್ರದಲ್ಲಿ ಬಂದು ಬಿಟ್ಟರೆ ಗತಿ ಏನು?

ಚುನಾವಣೆಗಳಲ್ಲಿ ಮತದಾನ ಬಹಿಷ್ಕರಿಸುವುದುಸರಿಯಾದ ಕ್ರಮವೇನು ಅಲ್ಲ. ಇದರಿಂದಾಗಿ ದುಷ್ಟರಿಗೆ ಅಧಿಕಾರದ ಗಾದಿಯನ್ನೇರಲು ಅವಕಾಶ ಸಿಕ್ಕಂತಾಗುತ್ತದೆ. ಜನತೆಯ ಹಿತವನ್ನು ಕಡೆಗಣಿಸುತ್ತಿರುವ ರಾಜಕೀಯ ಪಕ್ಷಗಳನ್ನು ಮತ್ತು ಅವುಗಳ ಅಭ್ಯರ್ಥಿಗಳನ್ನು ಮತದಾರರು ಸಾಕಷ್ಟು ದೂರದಿಂದಲೇ ಗುರುತಿಸಲು ಸಾಧ್ಯವಾಗಬೇಕು. ಮತದಾರರೆಲ್ಲರೂ ಒಂದಾಗಿ ಮತದಾನ ಬಹಿಷ್ಕರಿಸುವ ಬದಲು ಅಂತಹ ದುಷ್ಟ ಅಭ್ಯರ್ಥಿಗಳ ವಿರುದ್ಧ ಮತ ಹಾಕುವ ಮೂಲಕ ಅವರನ್ನು ಸೋಲಿಸಲು ಪ್ರಯತ್ನಿಸಬೇಕು ಹಾಗೂ ಸಾಧ್ಯವಾಗದಿದ್ದಾಗ ಗ್ರಾಮ ಗ್ರಾಮಗಳಲ್ಲಿ ನಗರಗಳ ಬಡಾವಣೆಗಳಲ್ಲಿ ಜನಸಂಘಟನೆಗಳನ್ನು ಕಟ್ಟಿ ತಮ್ಮ ಬೇಡಿಕೆಗಳಿಗಾಗಿ ಸಮರಶೀಲವಾದ, ರಾಜಿಯಿಲ್ಲದ ಹೋರಾಟ ನಡೆಸುತ್ತಾ ಮುನ್ನುಗ್ಗಬೇಕು. ದಾರಿ ಸಿಕ್ಕೇ ಸಿಗುತ್ತದೆ.

ಈ ವಾರ

ನೀರಸ ಮತದಾನ - ಜನತೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆಯೇ?

ಏಪ್ರಿಲ್ 23ರಂದು ರಾಜ್ಯದ 17 ಲೋಕಸಭಾ ಕ್ಷೇತ್ರಗಳಿಗೆ ನಡೆದ ಮೊದಲ ಹಂತದ ಚುನಾವಣೆಯಲ್ಲಿ ನೀರಸ ಮತದಾನವಾಗಿದೆ. ಲೋಕಸಭಾ ಚುನಾವಣೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಅತೀ ಕಡಿಮೆ ಅಂದರೆ ಶೇ. 53ರಷ್ಟು ಮತದಾನವಾಗಿದೆ. 2004ರ ಚುನಾವಣೆಯಲ್ಲಿ ಈ 17 ಕ್ಷೇತ್ರಗಳಲ್ಲಿ ಶೇ.61.5ರಷ್ಟು ಮತದಾನವಾಗಿತ್ತು.

ಅಖಿಲ ಭಾರತ ಮಟ್ಟದಲ್ಲಿ ಅಂದು ನಡೆದ 2ನೇ ಹಂತದ ಚುನಾವಣೆಯಲ್ಲಿ 12 ರಾಜ್ಯಗಳ ಒಟ್ಟು 140 ಲೋಕಸಭಾ ಕ್ಷೇತ್ರಗಳಲ್ಲಿ ಶೇ. 55 ರಷ್ಟು ಮತದಾನವಾಗಿದೆ ಎಂದು ವರದಿಯಾಗಿದೆ.

ಕರ್ನಾಟಕದಲ್ಲಿ ಕಂಡು ಬಂದ ಮತದಾನ ಬಹಿಷ್ಕಾರ, ಮತದಾರರ ನಿರುತ್ಸಾಹ ಬೇರೆ ಬೇರೆ ಕಾರಣಗಳಿರಬಹುದು. ರಾಜ್ಯದಲ್ಲಿ ಇಂದು ಪರಸ್ಪರ ಸ್ಪರ್ಧೆಯಲ್ಲಿರುವ ಪ್ರಮುಖ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಯು ನಡುವೆ ಆಯ್ಕೆ ಇಲ್ಲದಿರುವುದು, ಮೂರನೇ ಪರ್ಯಾಯ ರಾಜ್ಯದ ಜನತೆಯ ವಿಶ್ವಾಸ ಇನ್ನೂ ಗಳಿಸದೆ ಇರುವುದು ಈ ನಿರುತ್ಸಾಹಕ್ಕೆ ಕಾರಣವಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು. ಕರ್ನಾಟಕದ ಜನತೆ ಈ ಎರಡು ಪಕ್ಷಗಳ ಆಡಳಿತ ವೈಖರಿಯನ್ನು ಸಾಕಷ್ಟು ನೋಡಿ ಆಗಿದೆ. ಈ ಎರಡು ಪಕ್ಷಗಳ ಚುನಾವಣಾ ಪ್ರಣಾಳಿಕೆಗಳಲ್ಲಿ ಹೆಚ್ಚೇನು ವ್ಯತ್ಯಾಸ ಇರುತ್ತಿರುವುದಿಲ್ಲ. ಈ ಎರಡು ಪಕ್ಷಗಳು ಚುನಾವಣೆಯ ಪೂರ್ವದಲ್ಲಿ ನೀಡುವ ಭರವಸೆಗಳನ್ನು ನಂತರ ಮರೆತುಬಿಡುವ ಸಾಮಾನ್ಯವಾಗಿದೆ. ಹೀಗಾಗಿ ಈ ಎರಡು ಪಕ್ಷಗಳು ರಾಜ್ಯದ ಜನತೆಗೆ ಒಂದೇ ನಾಣ್ಯದ ಎರಡು ಮುಖಗಳಂತೆ ಕಂಡರೆ ಆಶ್ಚರ್ಯವೇನಿಲ್ಲ.

ಎಡ ಪಕ್ಷಗಳ ಪ್ರಾಬಲ್ಯವಿರುವ ರಾಜ್ಯಗಳಲ್ಲಿ ಪರಿಸ್ಥಿತಿ ಭಿನ್ನವಾಗಿರುತ್ತದೆ. ಅಲ್ಲಿ ಜನರನ್ನು ದುಡ್ಡು ಕೊಟ್ಟು ಮತಗಟ್ಟೆಗಳಲ್ಲಿ ಕರೆತರಬೇಕಾಗಿಲ್ಲ. ಮತಗಟ್ಟೆಗಳು ತೆರೆಯುವ ಮೊದಲೇ ಅಲ್ಲಿ ಮತದಾರರು ಸಾಲಿನಲ್ಲಿ ಕಾಯುತ್ತಿರುತ್ತಾರೆ. ಆ ಜನ ಬಡವರೇ ಇರಬಹುದು, ದಲಿತರೇ ಇರಬಹುದು, ಆದಿವಾಸಿಗಳೇ ಇರಬಹುದು, ಅಲ್ಪಸಂಖ್ಯಾತರೇ ಇರಬಹುದು ಮತ ಚಲಾಯಿಸುವ ತಮ್ಮ ಹಕ್ಕನ್ನು ತಪ್ಪದೆ ಚಲಾಯಿಸುವ ಮೂಲಕ ಅವರು ತಮ್ಮ ವರ್ಗ ಶತ್ರುಗಳು ಜಯಶೀಲರಾಗುವುದನ್ನು ತಡೆಯುತ್ತಾರೆ. ಅನೇಕ ಸಲ ನಕ್ಸಲೀಯರು ಮತ್ತು ಇತರ ಛಿದ್ರಕಾರಿ ಬೆದರಿಕೆಯನ್ನು ಎದುರಿಸಿ ಅವರು ಮತದಾನ ಮಾಡುತ್ತಾರೆ.

ಆದರೆ ಬಂಡವಾಳಶಾಹಿ ಮತ್ತು ಕೋಮುವಾದಿ ಪಕ್ಷಗಳ ಪ್ರಾಬಲ್ಯ ಇರುವ ರಾಜ್ಯಗಳಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಇಂತಹ ಪಕ್ಷಗಳು ಮತ ಚಲಾಯಿಸಲಿಕ್ಕೂ ಮತದಾರರಿಗೆ ಆಮಿಷವೊಡ್ಡುತ್ತಾರೆ, ಯಾರಿಗೂ ಮತ ಹಾಕದಿರುವುದಕ್ಕೂ ಆಮಿಷವೊಡ್ಡುತ್ತಾರೆ. ಇಂತಹ ರಾಜಕೀಯ ವ್ಯಭಿಚಾರ ಕ್ರಮೇಣ ಜನತೆಯಲ್ಲಿ ನಿರುತ್ಸಾಹ ಉಂಟು ಮಾಡದೆ ಇರಲಾರದು. ನಾವು ಓಟು ಕೊಟ್ಟು ಗೆಲ್ಲಿಸಿದ ಒಂದು ಪಕ್ಷದ ಅಭ್ಯರ್ಥಿ ಹಣ ಮತ್ತು ಅಧಿಕಾರದ ಆಮಿಷಕ್ಕೆ ಒಳಗಾಗಿ ಪಕ್ಷಾಂತರ ಮಾಡುವುದನ್ನೂ ನೋಡಿ ನೋಡಿ ಮತದಾರರು ಮತದಾನ ಪಾವಿತ್ರ್ಯತೆಯ ಬಗ್ಗೆ, ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ವಿಶ್ವಾಸವನ್ನೇ ಕಳೆದುಕೊಳ್ಳುವ ಅಪಾಯವೂ ಇದೆ.

ಮತದಾರರು ಮತದಾನ ಮಾಡದೆ ಇರುವುದಕ್ಕೆ ಬೇರೆ ಕಾರಣಗಳು ಇರಬಹುದು, ಮತದಾರರು ಪಟ್ಟಿಯಲ್ಲಿ ಮತದಾರರ ಹೆಸರುಗಳು ಇಲ್ಲದಿರುವುದು, ಮತದಾರರು ಹೊಟ್ಟೆಪಾಡಿಗಾಗಿ ವಲಸೆ ಹೋಗಿರುವುದು ಸಹ ಕಡಿಮೆ ಮತದಾನಕ್ಕೆ ಕಾರಣಗಳಾಗಿರಬಹುದು. ಈ ಸಲ ಮತದಾನ ಕಡಿಮೆಯಾಗಿರುವುದರಿಂದ ಯಾವ ಪಕ್ಷಕ್ಕೆ ನಷ್ಟ ಎಂದು ನಿಖರವಾಗಿ ಹೇಳುವುದು ಸಾಧ್ಯವಾಗದಿರಬಹುದು. ಆದರೆ ಪ್ರಜಾಪ್ರಭುತ್ವದ ಬೆಳವಣಿಗೆಯ ದೃಷ್ಟಿಯಿಂದ ಇದೊಂದು ಆರೋಗ್ಯಕರ ಬೆಳವಣಿಗೆ ಆಗಲಾರದು.

ಮತದಾನಕ್ಕೆ ಉತ್ಸಾಹವೇ ಇಲ್ಲದ ಜನ



ಗುಲಬರ್ಗಾ : ಜರ್ಜರಿತ ಜನರ ಬದುಕು

ಗುಲಬರ್ಗಾ ನಗರದ ಜೀವನಾಡಿಯಾಗಿದ್ದ ಸುಮಾರು 6 ಸಾವಿರ ಕಾರ್ಮಿಕರಿಗೆ ಉದ್ಯೋಗ ನೀಡಿದ್ದ ಎಂ.ಎಸ್.ಕೆ.ಮಿಲ್ ಬಟ್ಟೆ ಗಿರಣಿ ಈಗ ಇತಿಹಾಸವಷ್ಟೇ. 1990ರ ನಂತರ ಜಾರಿಗೆ ಬಂದ ಜಾಗತೀಕರಣ- ಉದಾರೀಕರಣ-ಖಾಸಗೀಕರಣದಿಂದ ಹೊಸ ಅತ್ಯಾಧುನಿಕ ಯಂತ್ರೋಪಕರಣಗಳಿಂದ ಸುಸಜ್ಜಿತ ಬಟ್ಟೆ ಗಿರಣಿಗಳಿಗೆ ಪೈಪೋಟಿ ನೀಡಲಾಗದೆ ಎಂ.ಎಸ್.ಕೆ.ಮಿಲ್ ಬಟ್ಟೆ ಗಿರಣಿ ಸೋತು ಸೊರಗಿ ನೆಲಕಚ್ಚಿತು. 6 ಸಾವಿರ ಕುಟುಂಬಗಳು ಬೀದಿಪಾಲಾದವು.

ರಾಜೇಶ್ರೀ-ವಾಸವದತ್ತಾನಂಥ ಬೃಹತ್ ಸಿಮೆಂಟ್ ಕಾರ್ಖಾನೆಗಳು ಗುಲಬರ್ಗಾ ಜಿಲ್ಲೆಯಲ್ಲಿ ಸ್ಥಾಪನೆಯಾಗಿದ್ದರಿಂದ 13 ಸಣ್ಣ ಸಿಮೆಂಟ್ ಕಾರ್ಖಾನೆಗಳು ಮುಚ್ಚಲ್ಪಟ್ಟವು. ಕೇಂದ್ರ ಸರ್ಕಾರಿ ಸೌಮ್ಯದ ಕುರಕುಂಟಾ ಸಿಮೆಂಟ್ ಕಾರ್ಖಾನೆ ಎಂ.ಎಸ್.ಕೆ.ಮಿಲ್ ನಂತೆ ಪೈಪೋಟಿ ನೀಡಲಾಗದೆ ಮುಚ್ಚಲ್ಪಟ್ಟಿದೆ.

ಗುಲಬರ್ಗಾ ಜಿಲ್ಲೆ ತೊಗರಿ ಕಣಜವೆಂದೇ ಖ್ಯಾತಿ ಪಡೆದಿದೆ. ವಿಪರ್ಯಾಸವೆಂದರೆ ಇದೇ ತೊಗರಿ ರೈತರ ಆತ್ಮಹತ್ಯೆಗೂ ಕಾರಣವಾಗುತ್ತಿದೆ. ನೈಸರ್ಗಿಕ ವೈಪರೀತ್ಯ, ಕೀಟ ಬಾಧೆ, ನಕಲಿ ಬೀಜ ಹಾಗೂ ಕೀಟನಾಶಕ ಎಲ್ಲಕ್ಕಿಂತ ಹೆಚ್ಚಾಗಿ ಸಮರ್ಪಕವಾದ ಬೆಂಬಲ ಬೆಲೆ ನಿಗದಿಯಾಗದಿರುವುದು ತೊಗರಿ ಬೆಳೆದ ರೈತರು ಸಂಕಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಜಾಗತೀಕರಣದ ಪ್ರಭಾವದಿಂದಾಗಿ ಸಣ್ಣ ರೈತರಿಗೆ ಸಾಲ, ಸಬ್ಸಿಡಿ ದರದಲ್ಲಿ ಬೀಜ ಹಾಗೂ ಗೊಬ್ಬರ ಸಿಗದಿರುವುದು ಹಾಗೂ ರಿಯಾಯಿತಿ ದರದಲ್ಲಿ ವಿದ್ಯುತ್ ದೊರಕದಿರುವುದು ರೈತ ಜರ್ಜರಿತನಾಗಲು ಮತ್ತೊಂದು ಕಾರಣವಾಗಿದೆ.

ಕುಂಬಾರ, ಚಮ್ಮಾರ, ಬಡಿಗ, ಕಮ್ಮಾರ, ಕುಲಕಸಬು ಕಣ್ಮರೆಯಾಗುತ್ತಿವೆ. ಜಾಗತೀಕರಣದ ಪ್ರಭಾವದಿಂದಾಗಿ ಬಳಕೆಯಿಂದಾಗಿ ಕುಲ ಕಸುಬುಗಳು ನೆಪಥ್ಯಕ್ಕೆ ಸರಿದಿವೆ.

ಬಿಗ್ ಬಜಾರ್‌ದಿಂದಾಗಿ ಸಣ್ಣಮಟ್ಟ ಕಿರಾಣಿ ವ್ಯಾಪಾರಸ್ಥರು ಕಂಗಾಲಾಗಿದ್ದಾರೆ. ಜಿಲ್ಲೆಯಾದ್ಯಂತ ಮೆಡಿಜೋನ್ ಕಂಪನಿ ವಿಸ್ತೃತವಾಗಿ ಬೆಳೆಯುತ್ತಿರುವುದರಿಂದ ಸಣ್ಣಮಟ್ಟ ಔಷಧ ವ್ಯಾಪಾರಿಗಳು ಹೌಹಾರಿದ್ದಾರೆ. ಅತ್ಯಾಧುನಿಕ ಮುದ್ರಣ ಯಂತ್ರ ಬಂದಿದ್ದರಿಂದ ಜಿಲ್ಲೆಯಾದ್ಯಂತ 600ಕ್ಕೂ ಹೆಚ್ಚು ಸಣ್ಣಮಟ್ಟ ಮುದ್ರಣಾಲಯಗಳು (ಲೆಟರ್‌ಪ್ರೆಸ್) ನಾಮಾವಶೇಷವಾಗಿವೆ. ಲೆಟರ್ ಪ್ರೆಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಕ್ಷರ ಮೊಳೆ ಸಂಯೋಜಕರು-ಪರ್ಯಾಯ ಉದ್ಯೋಗ ಅರಿಸಿಕೊಂಡಿದ್ದಾರೆ.

ವಿಶ್ವಬ್ಯಾಂಕ್ ನಿರ್ದೇಶನದ ಮೇರೆಗೆ ಕೇಂದ್ರ-ರಾಜ್ಯ ಸರ್ಕಾರಗಳು ಉದ್ಯೋಗ ಕಡಿತಗೊಳಿಸಿದ್ದು, ಗುತ್ತಿಗೆ-ಹೊರಗುತ್ತಿಗೆ ಕೆಲಸಗಳಿಗೆ ಸೀಮಿತವಾಗಿದೆ. ಬಿಎಸ್‌ಎನ್‌ಎಲ್, ಜೆಸ್ಕಾಂ, ಸಾರಿಗೆ ಸಂಸ್ಥೆ, ಸರ್ಕಾರಿ ಮುದ್ರಣಾಲಯ ಹಾಗೂ ಸರ್ಕಾರಿ ಆಸ್ಪತ್ರೆ ಗುತ್ತಿಗೆ ಕಾರ್ಮಿಕರ ಶೋಷಣೆ ಅವ್ಯಾಹತವಾಗಿ ನಡೆದಿದೆ. ಸರ್ಕಾರಿ ಆಸ್ಪತ್ರೆಯ ಗುತ್ತಿಗೆ ವೈದ್ಯರು-ಶುಶ್ರೂಕಿಯರು ಇದಕ್ಕೆ ಹೊರತಾಗಿಲ್ಲ. ಜಿಲ್ಲೆಯಾದ್ಯಂತ ನಿರುದ್ಯೋಗ ತಾಂಡವವಾಡುತ್ತಿದೆ. ದುಡಿಯುವ ಕೈಗಳಿಗೆ ಕೆಲಸವಿಲ್ಲದೆ ಉದ್ಯೋಗ ಅರಿಸಿ ಬೃಹತ್ ನಗರಗಳಿಗೆ ನಿರುದ್ಯೋಗಿಗಳು ಹೋಗುತ್ತಿದ್ದಾರೆ.

ಇತ್ತೀಚೆಗೆ ಉದ್ಯೋಗ ಮೇಳದಂಥ ಕಾರ್ಯಕ್ರಮ ನಡೆಸಿ ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ನಗೆಪಾಟಲಿಗೆ ಗುರಿಯಾಗಿದೆ. ಸರ್ಕಾರಿ-ಅರೆ ಸರ್ಕಾರಿ- ನಿಗಮ-ಮಂಡಳಿ-ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಸಿಗುವುದೆಂಬ ಮಹಾದಾಸೆಯಿಂದ ಜನವರಿ 31, ಫೆ.1 ರಂದು ಗುಲಬರ್ಗಾ ನಗರದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಸುಮಾರು 30 ಸಾವಿರಕ್ಕೂ ಹೆಚ್ಚು ನಿರುದ್ಯೋಗಿಗಳು ಭ್ರಮನಿರಸನಗೊಂಡರು.

ಹೋಟೇಲ್ ಮಾಲೀಕರ ಸಂಘ-ಲಾಡ್ಜ್ ಮಾಲೀಕರ ಸಂಘ-ಸೆಕ್ಯೂರಿಟಿ ಸರ್ವಿಸಸ್‌ನಂಥ ಖಾಸಗಿ ವಲಯದಲ್ಲಿನ ರೂಂ ಬಾಯ್, ವಾಚ್‌ಮನ್, ಸಪ್ಲೈಯರ್, ಅಡಿಗೆ ಭಟ್ಟರಂತಹ ಉದ್ಯೋಗಗಳು ಮಾತ್ರ ಪಟ್ಟಿ ರಾರಾಜಿಸುತ್ತಿರುವುದನ್ನು ನೋಡಿ ದಂಗಾದರು. ಇಂಥ ಕೆಲಸಗಳನ್ನು ಕೊಡಲು ಕಾರ್ಮಿಕ ಸಚಿವ ಬಚ್ಚೆಗೌಡ ಬೆಂಗಳೂರಿನಿಂದ ಗುಲಬರ್ಗಾಕ್ಕೆ ಬಂದು ಅದ್ದೂರಿ ಸಮಾರಂಭ ನಡೆಸಬೇಕಾಗಿತ್ತೇ/ ಇದಕ್ಕಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಬಜೆಟ್‌ನಲ್ಲಿ 50 ಕೋಟಿ ರೂ. ಮೀಸಲಿಡಬೇಕಾಗಿತ್ತೇ? ಎಂಬ ಜಿಜ್ಞಾ[...] ನಿರುದ್ಯೋಗಿಗಳಲ್ಲಿ ಒಡಮೂಡಿತ್ತು.

ಉದ್ಯೋಗ ಸೃಷ್ಟಿಸುವಲ್ಲಿ ರಾಜ್ಯ ಸರ್ಕಾ[ರ] ಸಂಪೂರ್ಣವಾಗಿ ಎಡವಿದೆ ಎಂಬುದು ಇದರಿಂ[ದ] ಸ್ಪಷ್ಟವಾಗಿತ್ತು. ಜಾಗತಿಕ ಮಟ್ಟದಲ್ಲಿ ಉಂಟಾ[ದ] ಆರ್ಥಿಕ ಮುಗ್ಗಟ್ಟಿನಿಂದ ಉದ್ಯೋಗಗಳ ಕಡಿತಗೊಂಡಿದ್ದು, ಉದ್ಯೋಗ ಮೇಳದಂ[ಥ] ಪೊಳ್ಳುಯೋಜನೆಗಳು ಜಾರಿಗೆ ತಂದ ಯಡಿಯೂರಪ್ಪ ನಿರುದ್ಯೋಗಿಗಳ ಕೆಂಗಣ್ಣಿ[ಗೆ] ಗುರಿಯಾಗಿದ್ದಾರೆ.

ಜಿಲ್ಲೆಯಾದ್ಯಂತ ಧರ್ಮದ ಹೆಸರಿನಲ್ಲಿ ತ[...] ಎತ್ತಿಕೊಂಡಿರುವ ಖಾಸಗಿ ಶಿಕ್ಷಣ ಸಂಸ್ಥೆಗ[ಳ] ಹಾವಳಿ ಹೆಚ್ಚಾಗಿದೆ. 'ಉಳ್ಳವರಿಗೆ ಮಾತ್ರ ಉನ್ನ[ತ] ಶಿಕ್ಷಣ' ಎಂಬ ಮಾತು ಸತ್ಯವಾಗಿದೆ. ಬಡವ[ರ] ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಸುಲಭ ಕಂತುಗಳಿಗೆ ಹೆಸರುವಾಸಿಯಾಗಿದ್ದ ಕರ್ನಾಟಕ ಗೃಹ ಮಂಡಳಿ ಜಾಗತೀಕರಣದ ಈ ಯುಗದಲ್ಲಿ ಖಾಸಗಿ ಬಿಲ್ಡರ್‌ನಂತೆ ವರ್ತಿಸುತ್ತಿದೆ. ಅಫಜಲಪುರ ರಸ್ತೆಯಲ್ಲಿ 1.90 ಲಕ್ಷ ರೂ.[...] ಒಂದು ಎಕರೆ ಭೂ ಖರೀದಿಸಿ ಒಂದು [...] ಎಲ್‌ಐಜಿ ನಿವೇಶನಕ್ಕೆ 2.90 ಲಕ್ಷ ರೂ.[...] ಮಾರಾಟ ಮಾಡುತ್ತಿದೆ. ಗುಲಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ ಎಂ.ಎಸ್.ಕೆ. ಮಿಲ್ ಜಾಗ 30 ಕೋಟಿಗೆ ಖರೀದಿಸಿ ಅದನ್ನು 3 ಸಾವಿ[ರ] ಕೋಟಿ ರೂ. ಮಾಡಲು ಹೊರಟಿದೆ. ಕಾರ್ಮಿಕರು-ಬಡವರು-ಮಧ್ಯಮವರ್ಗದವರು-ಮನೆ/ನಿವೇಶನಗಳಿಂದ ವಂಚಿತರಾಗಿದ್ದಾರೆ. ಗೃಹಮಂಡಳಿ ಹಾಗೂ ಗುಲಬರ್ಗಾ

ಪುಟ 14 ನೋಡಿ

ನೋಡು ಅವರಿಗೆ ಮಗನ ಮೇಲೆಂಥಾ ಪ್ರೀತಿ !

➡ ಮತದಾನ ಮಾಡದ ಬೆಂಗಳೂರಿನ ಹೈಟೆಕ್ ಮಂದಿ.-ವರದಿ.

▶ ವೆಬ್ ಸೈಟ್ ಗಳಲ್ಲಿ ಓಟ್ ಫಾರ್ ಅನ್ನುವುದಕ್ಕೆ ಕ್ಲಿಕ್ ಮಾಡಿದ್ದನ್ನೇ ಓಟ್ ಮಾಡಿ ಆಯ್ತು ಅಂತ ತಿಳ್ಕಂಡ್ರೇನೋ ಬುದ್ಧಿವಂತ ಟೆಕ್ಕರು.

✣ ✣ ✣

➡ ಮೊದಲಬಾರಿಗೆ ಮತದಾನ ಮಾಡಿದ ಪುಟ್ಟಪರ್ತಿಯ ಸಾಯಿಬಾಬ.

▶ ಈಗಿನ್ನೂ ಹದಿನೆಂಟು ವರ್ಷ ತುಂಬಿರಬೇಕು?

▶ ಅಭ್ಯರ್ಥಿ ಗೆಲ್ಲಿಸಲು ಪವಾಡ ನಡೆಯುವುದಿಲ್ಲ. ಮತದಾನ ಮಾಡುವುದೊಂದೇ ದಾರಿ ಎಂದು ಅರಿವಾಗಿರಬಹುದು.

✣ ✣ ✣

➡ ಯಡಿಯೂರಪ್ಪ 'ತಮ್ಮಅಧಿಕಾರಾವದಿ'? ಪೂರ್ಣ ಗೊಳಿಸುತ್ತಾರೆ.- ಅನಂತಕುಮಾರ್.

▶ ಎಂಥ ಬುದ್ಧಿವಂತ ನೋಡಿ ಈ ಅನಂತು. ಐದು ವರ್ಷ ಅಂತ ಹೇಳಿಲ್ಲ, 'ತಮ್ಮ ಅವದಿ'(?) ಅಂತ ಹೇಳಿದ್ದಾರೆ. ಅವರ ಅವಧಿ ಎಷ್ಟು?.

▶ ಸಾಯೋತನಕ ಖಂಡಿತ ಬದುಕಿರುತ್ತಾರೆ ಅಂತ ಹೇಳಿದ ಹಾಗಾಯ್ತು.

✣ ✣ ✣

➡ ಬಿಜೆಪಿಯಿಂದ ಸಪ್ಲಿಮೆಂಟರಿ ಪ್ರಣಾಳಿಕೆ.

▶ ಏಪ್ರಿಲ್ ಪರೀಕ್ಷೆಯಲ್ಲಿ ಫೇಲಾದರೆ ಸಪ್ಲಿಮೆಂಟರಿಯೇ ಗತಿ. ಆದರೆ ಫೇಲಾಗ್ತೀವಿ

ಕ್ಯಾತೆ
ಶ್ರೀ

ಅಂತ ಖಚಿತವಾಗಿ ಏಪ್ರಿಲ್ ಪರೀಕ್ಷೇಲೇ ಸಪ್ಲಿಮೆಂಟರಿ ಪರೀಕ್ಷೆಯನ್ನೂ ಬರೆದ ಹಾಗಿದೆ ಈ ಬುದ್ದಿವಂತರು.

✣ ✣ ✣

➡ ಕಾಂಗ್ರೆಸ್ - ಹೇಳಿಹೋಗು ಕಾರಣ. ಹೋಗುವುದು ಖಚಿತವಾದಾಗ ನಿಜ ಹೇಳಿ ಹೋಗುವುದೇ ಉಚಿತ. - ಬಿಜೇಪಿ ಜಾಹಿರಾತು.

▶ 2004 ರಲ್ಲಿ ನೀವು ಹೋಗೋದಿಲ್ಲ ಅಂತ ಖಚಿತವಾಗಿ ನಂಬಿಕೊಂಡು, ಯಾವ ನಿಜವನ್ನೂ ಹೇಳದೇ 'ಭಾರತ ಪ್ರಕಾಶಿಸುತ್ತಿದೆ' ಅಂತ ಸುಳ್ಳುಹೇಳಿ ಸುಟ್ಟುಕೊಂಡ ಅನುಭವದಿಂದ ಹೇಳುತ್ತಿರುವುದೇ ಈ ಮಾತು?

✣ ✣ ✣

➡ 108 ಆಂಬುಲೆನ್ಸ್‌ಗಳಲ್ಲಿ ಬಿಜೆಪಿ ಹಣ, ಹೆಂಡ, ಸೀರೆ, ಹೆಂಡ ರವಾನೆ.- ಕಾಂಗ್ರೆಸ್ ಆರೋಪ.

▶ ಪರಿಸ್ಥಿತಿ ಚಿಂತಾಜನಕ.

✣ ✣ ✣

➡ ಚುನಾವಣಾ ಗುರುತಿನ ಚೀಟಿಗೆ (ಎಪಿಕ್) ಬದಲಾಗಿ ಇತರ 21 ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ತೋರಿಸಿ ಮತದಾನ ಮಾಡಬಹುದು. - ಚುನಾವಣಾ ಆಯೋಗ.

▶ ಚುನಾವಣಾ ಗುರುತಿನ ಚೀಟಿ ಕಡ್ಡಾಯ ಅಂತ ಹೇಳಿದ್ರಿಂದ ನಾವು ನೋಟು ನೀಡಿ ವಿರೋಧಿ ಮತದಾರರ ಗುರುತಿನ ಚೀಟಿ ಖರಿದಿಸಿ ಇಟ್ಟುಕೊಂಡಿದ್ವಿ. ಈಗ ನೋಡಿದ್ರೆ, ಚುನಾವಣಾ ಆಯೋಗವೇ ಹೀಗೆ ನೀತಿಸಂಹಿತೆ ಉಲ್ಲಂಘನೆ ಮಾಡಬಹುದೇ ಅಂತ ಪೇಚಾಡುತ್ತಿದ್ದಾರಂತೆ ಹಣದ ಮಳೆ ಸುರಿಸಿ ಹೆಂಡದ ಹೊಳೆ ಹರಿಸುತ್ತಿರುವ ಅಭ್ಯರ್ಥಿಗಳು.

✣ ✣ ✣

➡ ನನಗೆ ವಯಸ್ಸಾಗಿದೆ ರಾಜಕೀಯದ ಕೊನೆ ಘಟ್ಟದಲ್ಲಿದ್ದೀನಿ. ಇದು ನನ್ನ ಕೊನೆ ಚುನಾವಣೆ ದಯವಿಟ್ಟು ನನಗೆ ಮತ ನೀಡಿ ಗೆಲ್ಲಿಸಿ- ಜಾರ್ಜ ಫರ್ನಾಂಡಿಸ್ ಪ್ರಚಾರ ವೈಖರಿ.

▶ ಅದ್ವಾನಿ ಪರಿಸ್ಥಿತಿನೂ ಹೆಚ್ಚೂ ಕಡಿಮೆ ಹೀಗೇ ಆಗಿದೆ. ಆದರೆ ತಾನು 'ಸಮರ್ಥ ನಾಯಕ' ಅಂತ ಪೋಸ್ ಕೊಡ್ತಿರೋದ್ರಿಂದ ಜಾರ್ಜ ಫರ್ನಾಂಡಿಸ್ ಥರ ನೇರವಾಗಿ ಹೇಳಕ್ಕಾಗ್ತಿಲ್ಲ ಪಾಪ!

✣ ✣ ✣

ಮಗ: ನೂರು ರೂಪಾಯಿ ಕೊಡೋಕೆ ಅಳ್ತೀಯಲ್ಲೋ ನಮ್ಮಪ್ಪ! ನೂರಾರು ಕೋಟಿ ರೂಪಾಯಿ ಚೆಲ್ತಿದಾರೆ ಯಡಿಯೂರಪ್ಪ. ನೋಡು ಅವರಿಗೆ ಮಗನ ಮೇಲೆಂಥಾ ಪ್ರೀತಿ. ನೀನೂ ಪಾಲಿಸಬಾರದೇ ಅವರ ಆದರ್ಶ ನೀತಿ.


ಅಪ್ಪ: ಚೆಲ್ಲದೇ ಏನಾಡ್ತಾರೆ ಯಾರಪ್ಪನ ಮನೆ ಗಂಟು? ನೂರು ಚೆಲ್ಲಿ, ಸಾವಿರ ಎತ್ತುವ ತಾಕತ್ತವರಿಗುಂಟು. ನಾ ಅವರಂತಲ್ಲ, ದುಡಿದು ತಿನ್ನುವ ಬಡಪಾಯಿ, ನಿನ್ನ ಮೋಜಿಗೆಲ್ಲಿಂದ ತರಲಿ ನೂರು ರುಪಾಯಿ?.

✣

ಮೇ ದಿನ-2009

ಜಗತ್ತಿನಾದ್ಯಂತ ಜನರು ತಮ್ಮ ಜೀವನ ಪರಿಸ್ಥಿತಿಗಳನ್ನು ನಿರ್ಧರಿಸಿಕೊಳ್ಳಲು ಹೋರಾಟ ನಡೆಸಲೇಬೇಕಾಗಿ ಬಂದಿದೆ. ಬಂಡವಾಳಶಾಹಿ ಇನ್ನು ಮುಂದೆ ನಮ್ಮನ್ನು ಉಳಿಸುವುದಿಲ್ಲ, ಅದು ಸಮಾಜಕ್ಕೆ ಪ್ರಯೋಜನಕಾರಿಯೂ ಆಗಿರುವುದಿಲ್ಲ ಎಂದು ಜನರು ಖಂಡಿತ ಕಲಿಯುತ್ತಾರೆ. ಶೋಷಣೆಯಿಂದ ಮುಕ್ತವಾದ ಒಂದು ಸಮಾಜವನ್ನು ತರುವ ಗುರಿಸಾಧನೆಗೆ ಮತ್ತೆ ನಮ್ಮನ್ನು ಸಮರ್ಪಿಸಿಕೊಳ್ಳುವ, ಹೋರಾಟ ನಡೆಸುವ ಆಸೆಯನ್ನು ಚಿಗುರಿದೆ. ಆ ನಿಟ್ಟಿನಲ್ಲಿ, ಸಮಾಜವಾದದ ಗುರಿಸಾದನೆಗೆ ನಮ್ಮನ್ನು ಮತ್ತೊಮ್ಮೆ ಸಮರ್ಪಿಸಿಕೊಳ್ಳೋಣ, ನಮ್ಮ ಜನಗಳಿಗಾಗಿ ಇದನ್ನು ಈಡೇರಿಸಿಕೊಳ್ಳಲು ಅವಿಶ್ರಾಂತವಾಗಿ ದುಡಿಯೋಣ. ಇದು ಈ ವರ್ಷದ ಮೇದಿನದ ಸಂದರ್ಭದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ **ಕಾಂ. ವಿ.ಜೆ.ಕೆ.** ಯವರ ಈ ವಿಶೇಷ ಲೇಖನದ ಸಂದೇಶ.

ಶೋಷಣಾಮುಕ್ತ ಸಮಾಜದ ಹೊಸ ಆಸೆ ಚಿಗುರಿಸಿದೆ



ಇಪ್ಪತ್ತನೇ ಶತಮಾನವನ್ನು ಜನತೆಯ ಶತಮಾನ ಎನ್ನಲಾಗುತ್ತದೆ. ಇದು ನಿಜ. ಏಕೆಂದರೆ ಆ ಅವಧಿಯಲ್ಲಿ ಶ್ರಮಜೀವಿಗಳ ಕ್ರಾಂತಿಗಳು ನಡೆದವು, ರಾಷ್ಟ್ರೀಯ ವಿಮೋಚನಾ ಹೋರಾಟಗಳು ಎದ್ದು.ಬಂದವು. ಮಾನವಕುಲದ ಇತಿಹಾಸದಲ್ಲಿಯೇ ಹೊಸ ಯುಗವನ್ನು ಆರಂಭಿಸಿದ ಮಹಾನ್ ಅಕ್ಟೋಬರ್ ಕ್ರಾಂತಿ 1917ರ ನವಂಬರ್ 7ರಂದು ನಡೆಯಿತು. ಹತ್ತು ತಿಂಗಳ ಹಿಂದೆ ಫೆಬ್ರುವರಿಯಲ್ಲಿ ಅಲ್ಲಿ ಝಾರಶಾಹಿ ಕೊನೆಗೊಂಡಿತ್ತು. ಮಹಾನ್ ಅಕ್ಟೋಬರ್ ಕ್ರಾಂತಿ ಅಲ್ಲಿ "ಸಮಾಜವಾದಿ ಕ್ರಾಂತಿಕಾರಿಗಳು" ಎಂಬ ಹೆಸರಿನ ಪಕ್ಷದ ಕೆರೆನ್ಸ್ಕಿ ಸರಕಾರವನ್ನು ಕಿತ್ತೆಸೆದು ಕಾರ್ಮಿಕ ವರ್ಗದ ನೇತೃತ್ವದ ಪಕ್ಷವನ್ನು ಅಧಿಕಾರದಲ್ಲಿ ಪ್ರತಿಷ್ಠಾಪಿಸಿತು.

ಇದು ನಡೆದದ್ದು ಮೊದಲ ಮಹಾಯುದ್ಧದ ನಡುವೆ. 1939ರಲ್ಲಿ ಆರಂಭವಾದ ಎರಡನೇ ಮಹಾಯುದ್ಧ ಪ್ರಧಾನವಾಗಿ ಸೋವಿಯೆತ್ ಒಕ್ಕೂಟದ ಪ್ರದೇಶದಲ್ಲಿಯೇ ನಡೆಯಿತು. ಅಂತಿಮವಾಗಿ ಸೋವಿಯೆತ್ ಕೆಂಪು ಸೇನೆ ಫ್ಯಾಸಿಸ್ಟರನ್ನು ಸೋಲಿಸಿತು. ಈ ಮಹಾಯುದ್ಧದ ಅವಧಿಯಲ್ಲಿ ಹಲವಾರು ಯುರೋಪಿಯನ್ ದೇಶಗಳು ಕೆಂಪು ಸೇನೆಯ ಸಕ್ರಿಯ ಸಹಾಯದೊಂದಿಗೆ ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸಿ ಜನತಾ ಪ್ರಜಾಪ್ರಭುತ್ವಗಳಾದವು.

ಪೂರ್ವದ ರಣರಂಗದಲ್ಲಿ ಎರಡನೇ ಮಹಾಯುದ್ಧದ ಅಂತ್ಯದೊಂದಿಗೆ ಚೀನಾದ ವಿಮೋಚನೆಯಾಗಿ 1949ರಲ್ಲಿ ಚೀನಾ ಜನತಾ ಗಣತಂತ್ರ ಸ್ಥಾಪನೆಯಾಯಿತು. ಕೊರಿಯಾ ಪರ್ಯಾಯ ದ್ವೀಪ ಸಮಾಜವಾದೀ ಶಕ್ತಿಗಳ ಬೆಂಬಲದ ಕೊರಿಯಾ ಪ್ರಜಾಸತ್ತಾತ್ಮಕ ಗಣರಾಜ್ಯ ಮತ್ತು ಇನ್ನೂ ಅಮೆರಿಕನ್ ಸೇನೆ ನಡೆಸುತ್ತಿದ್ದ ದಕ್ಷಿಣ ಕೊರಿಯಾದ ನಡುವೆ ತಿಕ್ಕಾಟಗಳ ಕ್ಷೇತ್ರವಾಗಿತ್ತು. ಇಂಡೋ-ಚೀನಾದಲ್ಲಿನ ಯುದ್ಧ ಹಲವು ತಿರುವುಗಳನ್ನು ಪಡೆದು 1975ರಲ್ಲಿ ವಿಯೆಟ್ನಾಂನಲ್ಲಿ ವಿಶ್ವದ ಅತಿ ದೊಡ್ಡ ಮಿಲಿಟರಿ ಶಕ್ತಿ ಅಮೆರಿಕಾ ಸೋಲುಂಡಿತು. ಈ ಮೊದಲು 1947ರಲ್ಲಿ ಬ್ರಿಟಿಶರು ಭಾರತ/ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ನೀಡಲೇಬೇಕಾಗಿ ಬಂದಿತ್ತು. ಈ ವಸಾಹತುಶಾಹೀ-ವಿರೋಧಿ ಪ್ರಕ್ರಿಯೆ ಇಪ್ಪತ್ತನೇ ಶತಮಾನದಾದ್ಯಂತ ಮುಂದುವರೆಯಿತು. ಇಪ್ಪತ್ತನೇ ಶತಮಾನದ ಅಂತ್ಯದ ಬೇಳೆಗೆ ಪೂರ್ವ ಯುರೋಪಿನ ಜನತಾ ಪ್ರಜಾಪ್ರಭುತ್ವಗಳು ಕಳಚಿ ಬೀಳುವುದನ್ನು ಕಾಣಬೇಕಾಯಿತು. ಅಂತಿಮವಾಗಿ ಸೋವಿಯೆತ್ ಒಕ್ಕೂಟವನ್ನೂ ಕಳಚಿ ಹಾಕಲಾಯಿತು. ಹೀಗೆ ಜನತೆಯ ಶತಮಾನ ಸುಮಾರಾಗಿ ಇಪ್ಪತ್ತನೆಯ ಶತಮಾನದ ಎರಡನೇ ದಶಕದಿಂದ ಕೊನೆಯ ದಶಕದ ವರೆಗೂ ಇತ್ತು.

ಶ್ರೀಮಂತರಿಗೆ ಸಂಪತ್ತು

ಈಗ ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ಬಂಡವಾಳಶಾಹಿ ಶಕ್ತಿಗಳು "ಇತಿಹಾಸದ ಅಂತ್ಯ", "ಸಮಾಜವಾದದ ಸಾವು" ಎಂದಿತ್ಯಾದಿ ಪ್ರಚಾರ ನಡೆಸಲಾರಂಭಿಸಿದರು. 1991ರಿಂದ ಅವರು ತಂದ ಹೊಸ ವಿಶ್ವ ವ್ಯವಸ್ಥೆ ವಿಶ್ವಾದ್ಯಂತ ಬಹುಪಾಲು ಜನಗಳಿಗೆ ವಿನಾಶವನ್ನೇ ತಂದೊಡ್ಡಿತು, ಕೆಲವೇ ಭಾರೀ ಶ್ರೀಮಂತರಿಗೆ ಇನ್ನಷ್ಟು ಶ್ರೀಮಂತಿಕೆ ತಂದಿತು. ಆದರೆ ಈ ಗುಳ್ಳೆಯೂ ಸಪ್ಟಂಬರ್ 2008ರಲ್ಲಿ ಒಡೆಯಿತು. ವಿಶ್ವಾದ್ಯಂತ ಬಂಡವಾಳ ಶಾಹಿಯ ನಿಜ ಸ್ವರೂಪ ಬಯಲಾಯಿತು.

ಮೇದಿನ ಹಾಕಿದ ನಾಂದಿ

ವಾಸ್ತವವಾಗಿ, ಹತ್ತೊಂಭತ್ತನೇ ಶತಮಾನದ ಒಂಭತ್ತನೇ ದಶಕದಲ್ಲಿ ಆರಂಭವಾದ ಮೇದಿನ ಆಂದೋಲನ ಝಾರಶಾಹೀ ರಷ್ಯಾದಲ್ಲಿನ ಬೆಳವಣಿಗೆಗಳು, ಸೋವಿಯೆತ್ ಒಕ್ಕೂಟದ ಸ್ಥಾಪನೆ ಮತ್ತು ಇಪ್ಪತ್ತನೇ ಶತಮಾನದಾದ್ಯಂತ ನಡೆದ ಬೆಳವಣಿಗೆಗಳಿಗೆ ನಾಂದಿಯಾಯಿತು.

ಈಗ ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ಬಂಡವಾಳಶಾಹಿ ಶಕ್ತಿಗಳು "ಇತಿಹಾಸದ ಅಂತ್ಯ", "ಸಮಾಜವಾದದ ಸಾವು" ಎಂದಿತ್ಯಾದಿ ಪ್ರಚಾರ ನಡೆಸಲಾರಂಭಿಸಿದರು. 1991ರಿಂದ ಅವರು ತಂದ ಹೊಸ ವಿಶ್ವ ವ್ಯವಸ್ಥೆ ವಿಶ್ವಾದ್ಯಂತ ಬಹುಪಾಲು ಜನಗಳಿಗೆ ವಿನಾಶವನ್ನೇ ತಂದೊಡ್ಡಿತು, ಕೆಲವೇ ಭಾರೀ ಶ್ರೀಮಂತರಿಗೆ ಇನ್ನಷ್ಟು ಶ್ರೀಮಂತಿಕೆ ತಂದಿತು. ಆದರೆ ಈ ಗುಳ್ಳೆಯೂ ಸಪ್ಟಂಬರ್ 2008ರಲ್ಲಿ ಒಡೆಯಿತು. ವಿಶ್ವಾದ್ಯಂತ ಬಂಡವಾಳಶಾಹಿಯ ನಿಜ ಸ್ವರೂಪ ಬಯಲಾಯಿತು.

ಬಂಡವಾಳಶಾಹಿಯ ಅಂತ್ಯದ ಶತಮಾನ


ಇಪ್ಪತ್ತೊಂದನೇ ಶತಮಾನ ಜಾಗತಿಕ ಮಟ್ಟದಲ್ಲಿ ಜನತೆಯ ಶತಮಾನ ಮತ್ತು ಬಂಡವಾಳಶಾಹಿಯ ಅಂತ್ಯದ ಶತಮಾನವಾಗಲಿದೆ. ಕಾರ್ಮಿಕ ವರ್ಗ ಮಾತ್ರವೇ ಇದನ್ನು ಮಾಡಬಲ್ಲುದು. ಅವರು ಬಂಡವಾಳಶಾಹಿಯನ್ನು ಸಮಾಧಿ ಮಾಡಲೆಂದೇ ಜನ್ಮ ತಾಳಿದವರು. ಕಾರ್ಮಿಕರು. ಹೊಂಡ ಅಗೆದು ಬಂಡವಾಳಶಾಹಿಯನ್ನು ಹೂತು ಹಾಕದಿದ್ದರೆ ಅವರೇ ಸಮಾಧಿ ವಾಸಿಗಳಾಗ ಬೇಕಾಗುತ್ತದೆ. "ಎಂಟು ಗಂಟೆಗಳ ಕೆಲಸದ ದಿನ" ಎಂಬುದು ಈ ಹಿಂದೆ 1886ರಲ್ಲಿ ಕಾರ್ಖಾನೆಗಳ ಗೇಟುಗಳಲ್ಲಿ, ಹೇಮಾರ್ಕೆಟ್ ಚೌಕದಲ್ಲಿ ಬಿತ್ತರಗೊಂಡ ಮೇದಿನದ ಸಂದೇಶ. 123ವರ್ಷಗಳ ನಂತರವೂ ಬಹಳಷ್ಟು ಕಾರ್ಮಿಕರಿಗೆ, ಭಾರತೀಯ ರೈಲ್ವೇಯ ಲೋಕೋ ಚಾಲಕ ಸಿಬ್ಬಂದಿಗೆ ಕೂಡಾ ಈ ಗುರಿ ಈಡೇರಿಲ್ಲ. ಇಂದೂ ಕೂಡಾ ಲಕ್ಷ-ಲಕ್ಷ ಕಾರ್ಮಿಕರ ದುಡಿಮೆಯ ಅವಧಿಯನ್ನು ಭಾರತದಲ್ಲಿ ಆಳುವ ಮಂದಿ ಬಲವಂತದಿಂದ ದೀರ್ಘ ಎಳೆಯಲು ಕಾರಣವೇನು? ಇದು ಕಾರ್ಮಿಕರು ಸೃಷ್ಟಿಸುವ ಮಿಗುತಾಯ ಮೌಲ್ಯವನ್ನು ಸೂರೆಗೊಳ್ಳುವ ಹುನ್ನಾರವಲ್ಲದೆ ಬೇರೇನು? ಲೋಕೊ ಚಾಲಕ ಸಿಬ್ಬಂದಿಯಷ್ಟೇ ಅಲ್ಲ, ಸಾಫ್ಟ್‌ವೇರ್ ವೃತ್ತಿಪರರು, ಆಧುನಿಕ ಉದ್ದಿಮೆಗಳ ಇಂಜಿನಿಯರುಗಳು ಮತ್ತು "ಅಧಿಕಾರಿ"ಗಳು ಕೂಡಾ ದುಡಿಮೆಯ ದಿನ ದೀರ್ಘಗೊಳ್ಳುತ್ತಿರುವ ಅಪಾಯದ ದವಡೆಯಲ್ಲಿ ಸಿಲುಕಿ ಕೊಂಡಿದ್ದಾರೆ.

ಸೋವಿಯೆತ್ ಒಕ್ಕೂಟದ ಅಸ್ತಿತ್ವ ಮತ್ತು ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ)ಯಲ್ಲಿ ಅದರ ಪ್ರಭಾವದಿಂದಾಗಿ ಇಪ್ಪತ್ತನೇ ಶತಮಾನದಲ್ಲಿ ವಿಶ್ವಾದ್ಯಂತ ಭಾರೀ ಬದಲಾವಣೆಗಳಾದವು, ದುಡಿಮೆಯ ದಿನವನ್ನು ಎಂಟು ಗಂಟೆಗಳಿಗೆ ಸೀಮಿತಗೊಳಿಸುವ ಕಾನೂನುಗಳು ಬಂದವು. ಆದರೆ ಸೋವಿಯೆತ್ ಒಕ್ಕೂಟವನ್ನು ಕಳಚಿ ಹಾಕಿದ್ದು ಮತ್ತು ಉದಾರೀಕರಣವಾದಿ ಶಕ್ತಿಗಳ ಯಶಸ್ಸಿನಿಂದಾಗಿ ಕಾರ್ಮಿಕ ಕಾನೂನುಗಳ ನಿಯಂತ್ರಣವನ್ನು ಸತತವಾಗಿ ಕಳಚಿ ಹಾಕುವ ಪ್ರಯತ್ನ ನಡೆಯಿತು. ಹತ್ತೊಂಭತ್ತನೇ ಶತಮಾನದ ಒಂಭತ್ತನೇ ದಶಕದಲ್ಲಿ ಆರಂಭಗೊಂಡ ಮೇದಿನ ಆಂದೋಲನ, 1990ರ ನಂತರ ಎರಡನೇ ಅಂತರ್‌ರಾಷ್ಟ್ರೀಯದ ಕರೆಯಿಂದ ಇನ್ನಷ್ಟು ಪ್ರಜ್ವಲಿತವಾಗಿ, ನಂತರ ಹತ್ತೊಂಭತ್ತನೇ ಶತಮಾನದ ಕೊನೆಯ ದಶಕದಲ್ಲಿ ಝಾರಶಾಹಿ ರಷ್ಯಾದ ರಾಸ್ತೊಕ್‌ನಿಂದ ಲೆನಿನ್ ಅದನ್ನು ಬೆಳೆಸಿ, ಪೋಷಿಸಿ, 1917ರ ಅಕ್ಟೋಬರ್ ಕ್ರಾಂತಿಯ ಸಾಧನೆಯಿಂದ ಪುಷ್ಟಿಗೊಂಡು ಕ್ರಮೇಣ ಜಗತ್ತಿನಲ್ಲೆಲ್ಲಾ ವ್ಯಾಪಿಸಿತು. ಭಾರತದಲ್ಲಿ ಅದು 1927ರಲ್ಲಿ ಆರಂಭವಾಯಿತು. 1975ರ

ಪುಟ 10 ನೋಡಿ

ಶ್ರಮದ ಸೂರೆ

"ಎಂಟು ಗಂಟೆಗಳ ಕೆಲಸದ ದಿನ" ಎಂಬುದು ಈ ಹಿಂದೆ 1886ರಲ್ಲಿ ಕಾರ್ಖಾನೆಗಳ ಗೇಟುಗಳಲ್ಲಿ, ಹೇಮಾರ್ಕೆಟ್ ಚೌಕದಲ್ಲಿ ಬಿತ್ತರಗೊಂಡ ಮೇದಿನದ ಸಂದೇಶ. 123ವರ್ಷಗಳ ನಂತರವೂ ಬಹಳಷ್ಟು ಕಾರ್ಮಿಕರಿಗೆ, ಭಾರತೀಯ ರೈಲ್ವೇಯ ಲೋಕೋ ಚಾಲಕ ಸಿಬ್ಬಂದಿಗೆ ಕೂಡಾ ಈ ಗುರಿ ಈಡೇರಿಲ್ಲ. ಇಂದೂ ಕೂಡಾ ಲಕ್ಷ-ಲಕ್ಷ ಕಾರ್ಮಿಕರ ದುಡಿಮೆಯ ಅವಧಿಯನ್ನು ಭಾರತದಲ್ಲಿ ಆಳುವ ಮಂದಿ ಬಲವಂತದಿಂದ ದೀರ್ಘ ಎಳೆಯಲು ಕಾರಣವೇನು? ಇದು ಕಾರ್ಮಿಕರು ಸೃಷ್ಟಿಸುವ ಮಿಗುತಾಯ ಮೌಲ್ಯವನ್ನು ಸೂರೆಗೊಳ್ಳುವ ಹುನ್ನಾರವಲ್ಲದೆ ಬೇರೇನು?



ಉಡುಪಿ - ಚಿಕ್ಕಮಗಳೂರು ಕ್ಷೇತ್ರ :

ವೈವಿಧ್ಯಮಯ ಸಮಸ್ಯೆಗಳನ್ನು ಹೊತ್ತು ನಿಂತಿರುವ ಉಡುಪಿ-ಚಿಕ್ಕಮಗಳೂರು ಜನತೆ ಮೂರನೇ ಪರ್ಯಾಯದ ಅಭ್ಯರ್ಥಿ, ಸಿಪಿಐ ನಾಯಕಿ, ಜನ ಚಳುವಳಿಗಳ ಪ್ರತಿನಿಧಿ ರಾಧಾ ಸುಂದರೇಶ್ ಅವರನ್ನು ಆರಿಸಬೇಕಾದ ಅಗತ್ಯವಿದೆ.

ತೃತೀಯ ಪರ್ಯಾಯ ಗೆಲ್ಲಲಿ

ವಿ. ಸುಕುಮಾರ್

ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿಯ ಚುನಾವಣೆ ಹಲವು ಕಾರಣಗಳಿಂದ ಮಹತ್ವ ಪಡೆದುಕೊಂಡಿದೆ. ಕಾಂಗ್ರೆಸ್, ಬಿಜೆಪಿ, ಸಿಪಿಐ, ಬಿಎಸ್.ಪಿ. ಸೇರಿದಂತೆ 9 ಜನ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದರೂ ಸಹ ಕಾಂಗ್ರೆಸ್, ಬಿಜೆಪಿ ಹಾಗೂ ತೃತೀಯ ರಂಗದ ಸಿಪಿಐ ಅಭ್ಯರ್ಥಿಗಳ ನಡುವೆ ತ್ರಿಕೋನ ಸ್ಪರ್ಧೆ ಏರ್ಪಡುವ ಲಕ್ಷಣಗಳು ಗೋಚರಿಸುತ್ತಿವೆ. ಬಿಜೆಪಿಯಿಂದ ಆ ಪಕ್ಷದ ರಾಜ್ಯ ಅಧ್ಯಕ್ಷ ಡಿ.ವಿ.ಸದಾನಂದಗೌಡ ಸ್ಪರ್ಧಿಸಿದ್ದರೆ, ಕಾಂಗ್ರೆಸ್‌ನಿಂದ ಜಯಪ್ರಕಾಶ್ ಹೆಗ್ಡೆ ಹಾಗೂ ತೃತೀಯ ರಂಗದ ಅಭ್ಯರ್ಥಿಯಾಗಿ ರಾಧಾಸುಂದರೇಶ್ ಸ್ಪರ್ಧಾಕಣದಲ್ಲಿದ್ದಾರೆ. ಕ್ಷೇತ್ರ ಪುನರ್ ವಿಂಗಡನಾ ಪ್ರಕ್ರಿಯೆಯಿಂದ ಬಹಳಷ್ಟು ಬದಲಾಗಿರುವ ಕ್ಷೇತ್ರ ಈ ಹಿಂದೆ ಇದ್ದಂತಹ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ ಮರೆಯಾಗಿ ಉಡುಪಿ-ಚಿಕ್ಕಮಗಳೂರು ಕ್ಷೇತ್ರವಾಗಿ ಮಾರ್ಪಡಿಸಲಾಗಿದೆ. ಈ ಹಿಂದೆ ದ.ಕನ್ನಡದ ಬೆಳ್ತಂಗಡಿ, ಕಾರ್ಕಳ ಸೇರಿದಂತೆ ಚಿಕ್ಕಮಗಳೂರಿನ ಏಳು ತಾಲ್ಲೂಕುಗಳು ಸೇರಿ ಒಂದು ಕ್ಷೇತ್ರವಾಗಿತ್ತು. ಆದರೆ ಈ ಇದು ಹರಿದು ಹಂಚಿಹೋಗಿದ್ದು, ಚಿಕ್ಕಮಳೂರು ಜಿಲ್ಲೆಯ ಕಡೂರು ಹಾಸನ ಕ್ಷೇತ್ರದ ಪಾಲಾಗಿದೆ ಅಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅಭ್ಯರ್ಥಿಯಾಗಿದ್ದಾರೆ. ಇನ್ನೂ ಉಳಿದಂತೆ ಚಿಕ್ಕಮಗಳೂರು, ಮೂಡಿಗೆರೆ, ತರೀಕೆರೆ, ಶೃಂಗೇರಿ ವಿಧಾನಸಭಾ ಕ್ಷೇತ್ರಗಳು ಹಾಗೂ ಉಡುಪಿಯ ಕಾರ್ಕಳ, ಉಡುಪಿ, ಕಾಪು, ಕುಂದಾಪುರ, ಸೇರಿ ಕ್ಷೇತ್ರ ಮಾರ್ಪಾಟು ಮಾಡಲಾಗಿದೆ. ಸರಿಸುಮಾರು 12.5 ಲಕ್ಷ ಮತದಾರರಿರುವ ಎರಡು ಜಿಲ್ಲೆಗಳನ್ನೊಳಗೊಂಡ ಈ ಕ್ಷೇತ್ರದಲ್ಲಿ ಶ್ರಮಿಕ ವರ್ಗದ ಸಂಖ್ಯೆಯೇ ಹೆಚ್ಚು. ಉಡುಪಿ ಕರಾವಳಿ ಸಮೀಪವಿರುವುದರಿಂದ ಮೀನುಗಾರ ಕಾರ್ಮಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ. ಮೀನುಗಾರಿಕೆಯು ವಿದೇಶಿ ಕಂಪನಿಗಳ ಹಿಡಿತದಲ್ಲಿದ್ದು, ಆಳ ಮೀನುಗಾರಿಕೆ ಅವಕಾಶ ನೀಡಿರುವುದರಿಂದ ಲಕ್ಷದಷ್ಟಿರುವ ಸ್ಥಳೀಯ ಮೀನುಗಾರರಿಗೆ ಜೀವನ ನಿರ್ವಹಣೆಗೆ ಬೇಕಾದಷ್ಟು ಮೀನು ಸಿಗದೆ ಸಂಕಷ್ಟಮಯ ಬದುಕು ಸವೆಸುತ್ತಿದ್ದಾರೆ. ಇನ್ನೂ ಹೆಂಚಿನ ಕೈಗಾರಿಕೆಗಳು ಮುಚ್ಚುವ ಭೀತಿಯಿಂದ ಅದರ ಮೇಲೆಯೇ ಅವಲಂಬಿತರಾದ ಕಾರ್ಮಿಕರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಬೀಡಿ ಕಾರ್ಮಿಕರು, ಕೃಷಿ-ಕೂಲಿಕಾರರು ಅಡಿಕೆ-ತೆಂಗು ಬೆಳೆಗಾರರು, ಗೋಡಂಬಿ ಕಾರ್ಮಿಕರು ಇತ್ಯಾದಿ ವಿವಿಧ ಕೃಷಿ-ಕೈಗಾರಿಕೆಗಳಲ್ಲಿನ ಸಮಸ್ಯೆಗಳ ಸಂಕೋಲೆಯಲ್ಲಿ ಸಿಲುಕಿ ನರಳುವಂತಾಗಿದೆ.

ಇಲ್ಲೂ ಸಾಕಷ್ಟು ಸಮಸ್ಯೆಗಳು

ಚಿಕ್ಕಮಗಳೂರು ಜಿಲ್ಲೆಯ ಪರಿಸ್ಥಿತಿಯು ಇದಕ್ಕಿಂತ ಭಿನ್ನವಾಗಿಯೇನಿಲ್ಲ. ಕೆಲವು ಪ್ರದೇಶ ಹೊರತು ಪಡಿಸಿದರೆ ಮಲೆನಾಡಿನಿಂದ ಕೂಡಿದ ಪ್ರದೇಶವಾಗಿದ್ದು, ಸಮಸ್ಯೆಗಳೂ ಸಾಕಷ್ಟಿವೆ. ಜಿಲ್ಲೆಯ ಕೊಪ್ಪ, ಎನ್.ಆರ್.ಪುರ, ಶೃಂಗೇರಿ ಭಾಗಗಳಲ್ಲಿ ಅಡಿಕೆ ಬೆಳೆ ಹೆಚ್ಚಾಗಿದ್ದು, ಕೆಲವೆಡೆ ಬತ್ತ ಬೆಳೆಯಲಾಗುತ್ತಿದೆ. ಅಡಿಕೆ ಬೆಳೆಗೆ ಕೊಳೆ ರೋಗ, ಹಳದಿರೋಗ ತಗುಲಿರುವುದರಿಂದ ಬೆಳೆ ನಷ್ಟಕ್ಕೊಳಗಾಗಿ ರೈತ ಸಮೂಹ ಕಂಗಾಲಾಗಿದೆ. ರಸ್ತೆ, ನೀರು ವಿದ್ಯುತ್‌ನಂತಹ ಮೂಲಭೂತ ಸಮಸ್ಯೆಗಳು ಮಲೆನಾಡು ಭಾಗದಲ್ಲಿ ವಿಪರೀತವಿದ್ದು, ಕೃಷಿ-ಕೂಲಿ ಕಾರ್ಮಿಕರಿಗೆ ಸಮರ್ಪಕ ಕೆಲಸ-ವೇತನ ಇಲ್ಲದೇ ಜನರ ಬದುಕು ದುಸ್ಥರಗೊಂಡಿದೆ. ಗಿರಿಜನರ ಸಮಸ್ಯೆಗಳು ಬಗೆಹರಿಯದಂತಾಗಿದ್ದು, ಬಹುತೇಕ ಗಿರಿಜನ ವಿದ್ಯಾವಂತ ಯುವಕರಿಗೆ ಉದ್ಯೋಗ ದೊರೆಯದೇ ನಕ್ಸಲ್ ಚಟುವಟಿಕೆಗಳು ಹೆಚ್ಚುತ್ತಿವೆ. ಅಲ್ಲಿನ ಜನರ ಬದುಕು ಅಡಕತ್ತರಿಯಂತಾಗಿದ್ದು, ಒಂದೆಡೆ ನಕ್ಸಲ್‌ರ ಭೀತಿ ಇನ್ನೊಂದೆಡೆ ಪೋಲೀಸರ ಕಿರುಕುಳದಿಂದ ಜನ ತತ್ತರಿಸಿಹೋಗಿದ್ದಾರೆ. ಉಳಿದಂತೆ ಚಿಕ್ಕಮಗಳೂರು, ಎನ್.ಆರ್.ಪುರ, ಮೂಡಿಗೆರೆ, ಕೇಪು, ತರೀಕೆರೆಗಳಲ್ಲಿ ಕಾಫಿ ಬೆಳೆ ಪ್ರಮುಖವಾಗಿದ್ದು, ಹೆಚ್ಚು ಕಾಫಿ ಬೆಳೆಯುವ ಪ್ರದೇಶವೆಂಬ ಖ್ಯಾತಿ ಪಡೆದಿದೆ. ಈ ಕಾಫಿ ಪ್ಲಾಂಟೇಷನ್ ಉದ್ಯಮದಲ್ಲಿ ಸುಮಾರು 2 ಲಕ್ಷ



ಕಾರ್ಮಿಕರು ದುಡಿಯುತ್ತಿದ್ದು, ಇವರ ಪೈಕಿ ತಮಿಳುನಾಡು ಹಾಗೂ ದ.ಕನ್ನಡದಿಂದ ಬಂದು ನೆಲೆಸಿರುವ ಕಾರ್ಮಿಕರೇ ಹೆಚ್ಚು. ಕಾಫಿ-ಚಹಾ ತೋಟಗಳಲ್ಲಿ ದುಡಿಯುವ ಕಾರ್ಮಿಕರ ಬವಣೆಗಳು ಸಹ ಹೆಚ್ಚಿದ್ದು, ನಿರಂತರ ಕಾರ್ಮಿಕ ಸಮೂಹ ಹೋರಾಟ ನಡೆಸಿಕೊಂಡು ಬಂದಿರುವ ಪರಂಪರೆ ಈ ಜಿಲ್ಲೆಗಿದೆ. ಆದರೆ 1992ರ ನಂತ[ರ] ಕೇಂದ್ರ ಸರ್ಕಾರ ಅನುಸರಿಸಿದ ಖಾಸಗೀಕರಣ[-] ಜಾಗತೀಕರಣ-ಉದಾರೀಕರಣದ ಪರಿಣಾ[ಮ] ಕಾಫಿ ವಹಿವಾಟು ಸಕಾರದ ನಿಯಂತ್ರಣ[ದ] ಬದಲಿಗೆ ಖಾಸಗೀ ಮುಕ್ತ ವಹಿವಾಟಿಗೆ ಅವಕಾ[ಶ] ನೀಡಿದ ಪರಿಣಾಮ ಕಾರ್ಪೋರೇಷನ್ ಹಾಗೂ ಕೆಲವು ಶ್ರೀಮಂತರು ಖಾಯಂ ಉದ್ಯೋ[ಗ] ಕಡಿಮೆ ಮಾಡುತ್ತಿದ್ದು, ಹಂಗಾಮಿ, ಚಿಂಗೂ[…] ಕಾಂಟ್ರಾಕ್ಟ್ ಪದ್ದತಿಯಲ್ಲಿ ಕಾರ್ಮಿಕರನ್ನು ಬಳ[…] ದುಡಿಸಿಕೊಳ್ಳಲಾಗುತ್ತಿದೆ. ಕಾರ್ಮಿ[ಕ] ಕಾನೂನುಗಳು ದಿನನಿತ್ಯ ಉಲ್ಲಂಘ[ನೆ] ಯಾಗುತ್ತಿದ್ದು, ಭವಿಷ್ಯನಿಧಿ, ವೈದ್ಯಕೀಯ ಸೌಲಭ್ಯ, ಗ್ರಾಚ್ಯೂಟಿ, ರಜಾ ಸೌಲಭ್ಯಗಳ[ು] ದೊರಕದೆ ಕಾರ್ಮಿಕರ ಶೋಷಣ[ೆ] ಅವ್ಯಾಹತವಾಗಿದೆ. ದುಡಿಯುವ ಕಾರ್ಮಿಕರ[…] ಜೀವನ ಭದ್ರತೆ ಮರಿಚಿಕೆಯಾಗುತ್ತಿದ್ದು, ಕಾನೂ[ನು] ಮಾಲೀಕರ ಪರವಾಗಿ ಕಾರ್ಮಿಕರ ಅನ್ಯಾಯ[…] ಶೋಷಣೆ, ದಬ್ಬಾಳಿಕೆಗೊಳಗಾಗುವಂತ[…] ಗಂಭೀರ ಸಮಸ್ಯೆಗಳ ಕ್ಷೇತ್ರದಲ್ಲಿವೆ. ಉದ್ಯೋ[ಗ] ಅರಸಿ ದಿನನಿತ್ಯ ಬೇರೆ ಊರುಗಳಿಗೆ ವ[…] ಹೋಗುವ ಪ್ರವೃತ್ತಿ ಬೆಳೆಯುತ್ತಿದೆ.

ಕಳೆದ 50 ವರ್ಷಗಳಿಂದ ನೆನಗುದಿ[ಗೆ] ಬಿದ್ದಿರುವ ರೈಲ್ವೆ ಸಂಪರ್ಕ ಕನಸಾಗಿ ಉಳಿದಿದೆ[.] ಆಯ್ಕೆಗೊಂಡು ಹೋದ ಸಂಸದರು ಕ್ಷೇತ್ರವನ್[ನು] ಕಡೆಗಣಿಸಿದ್ದು, ಕಳೆದ 12 ವರ್ಷಗಳ ಹಿಂದ[ೆ] ಶಂಕುಸ್ಥಾಪನೆ ನೆರವೇರಿಸಿದ್[ದ] ಕಡೂರು-ಚಿಕ್ಕಮಗಳೂರು-ಸಕಲೇಶಪುರ ರೈಲ್ವ[ೆ] ಲೈನಿನ ಕಾಮಗಾರಿ ಆಮೆಗತಿಯಲ್ಲಿ ಕುಂಟುತ್ತಾ ಸಾಗಿದೆ.

ಕೈಗಾರಿಕೆ ಕೃಷಿ ಸೇರಿದಂತೆ ಎಲ್ಲಾ ರಂಗಗಳ[…] ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಈ ಕ್ಷೇತ್ರ ಸಮಸ್ಯೆಗಳ ಆಗರವಾಗಿದೆ. ಒಂದೆಡ[ೆ] ಬಗೆಹರಿಯದ ಸಮಸ್ಯೆಗಳಿಂದ ಜನ ಬೇಸತ್ತು ಹೋಗಿದ್ದಾರೆ. ಮತ್ತೊಂದೆಡೆ ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿ ಸಮಸ್ಯೆ ಜಿಲ್ಲೆಯ ಸೌಹಾರ್ದ[…] ಬದುಕಿಗೆ ಸಂಚಾಕಾರ ತರುತ್ತಿ[…]

ಪುಟ 15 ನೋಡಿ

ರಾಧಾ ಸುಂದರೇಶ್ : ಗೆಲುವಿಗೆ ಅರ್ಹ ಅಭ್ಯರ್ಥಿ

ರಾಧಾ ಸುಂದರೇಶ್ ಚಿಕ್ಕಮಗಳೂರು ಉಡುಪಿ ಲೋಕಸಭಾ ಕ್ಷೇತ್ರದಿಂದ ಸಿಪಿಐ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಮೂರನೇ ಪರ್ಯಾಯದ ಅಭ್ಯರ್ಥಿಯಾದ ಇವರನ್ನು ಜನತಾದಳ(ಜಾತ್ಯಾತೀತ) ಹಾಗೂ ಸಿಪಿಐ(ಎಂ)ಗಳು ಬೆಂಬಲಿಸುತ್ತಿವೆ. ಬಿಜೆಪಿ ಅಭ್ಯರ್ಥಿ ಸದಾನಂದಗೌಡ ಸೋಲುವ ಹೆದರಿಕೆಯಿಂದ ಮಂಗಳೂರು ಕ್ಷೇತ್ರ ಬಿಟ್ಟು ಬಂದವರು. ಜಯಪ್ರಕಾಶ್ ಹೆಗಡೆಯವರು ಇತ್ತೀಚೆಗೆ ಕಾಂಗ್ರೆಸ್ ಸೇರಿದವರು. ರಾಧಾ ಸುಂದರೇಶ್‌ರವರು ಕಳೆದ 30 ವರ್ಷಗಳಿಂದ ಜಿಲ್ಲೆಯಲ್ಲಿ ಜನಪರ ಚಳುವಳಿಯಲ್ಲಿ ತೊಡಗಿರುವವರು. 1983 ರಿಂದ ಸತತ ಮೂರು ಬಾರಿ ಚಿಕ್ಕಮಗಳೂರು ನಗರಸಭಾ ಸದಸ್ಯರಾಗಿ ದುಡಿದ ಅನುಭವವುಳ್ಳವರು. ಈಗಲೂ ಅವರು ಜಾಗರ ಕ್ಷೇತ್ರದಿಂದ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಗೆ ಚುನಾಯಿತ ಸದಸ್ಯರಾಗಿರುತ್ತಾರೆ. ಸಿಪಿಐ ಪಕ್ಷದ



ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ರಾಧಾ ಸುಂದರೇಶ್‌ರವರು 90ರ ದಶಕದಲ್ಲಿ ರೈಲ್ವೆ ಅಪಘಾತದಲ್ಲಿ ಮೃತರಾದ ಪತಿ, ಸಿಪಿಐ ಮುಖಂಡ ಸುಂದರೇಶ್‌ರವರ ಒಡನಾಡಿಯಾಗಿ ವಿದ್ಯಾರ್ಥಿ ದೆಸೆಯಿಂದಲೇ ಜನ ಚಳುವಳಿಗೆ ಕಾಲಿಟ್ಟವರು.

ಸುಮಾರು 50 ವರ್ಷ ವಯೋಮಾನದ ರಾಧಾ ಸುಂದರೇಶ್‌ರವರು ಪ್ರಸ್ತುತ ಎಐಟಿಯುಸಿ ನೇತೃತ್ವದ ರಾಜ್ಯ ಅಂಗನವಾಡಿ ನೌಕರರ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಅವರು ಭಾರತೀಯ ಮಹಿಳಾ ಒಕ್ಕೂಟ(ಎನ್‌ಎಫ್‌ಐಡಬ್ಲ್ಯೂ)ದ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿದ್ದಾರೆ. 2000 ರಿಂದ 3 ವರ್ಷಗಳ ಕಾಲ ಕಾಫಿ ಬೋರ್ಡ್‌ನ ಸದಸ್ಯರಾಗಿಯೂ ದುಡಿದಿದ್ದಾರೆ. ಕಾಫಿತೋಟ ಕಾರ್ಮಿಕರ ಸಂಘದ ಉಪಾಧ್ಯಕ್ಷರೂ ಆಗಿರುವ ರಾಧಾ ಸುಂದರೇಶ್ ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸುಮಾರು 80 ಸಾವಿರ ಮತಗಳನ್ನು ಪಡೆದಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಷ್ಟೆಲ್ಲಾ ಅರ್ಹತೆ ಇರುವ ರಾಧಾ ಸುಂದರೇಶ್ ಕ್ಷೇತ್ರದಿಂದ ಗೆಲ್ಲಲೇಬೇಕಾದ ಅಭ್ಯರ್ಥಿ ಎಂದು ಬೇರೆ ಹೇಳಬೇಕಾಗಿಲ್ಲ ಅಲ್ಲವೇ?

ಕಂತುಗಳಲ್ಲಿ 'ಕಣ್ಣೋಟಗಳು' ಈಗ ಈ ಪರಿಯ ಬಿಜೆಪಿ ವಂಚನೆ

ಮೂಲರಚನೆ ಅಭಿವೃದ್ಧಿ ಕುರಿತಂತೆ ಬಿಜೆಪಿಯ ಹೊಸ 'ಕಣ್ಣೋಟ'ದಲ್ಲಿ ಹೊಸತು ಏನಾದರೂ ಇದ್ದರೆ ಅದು ಭಾರತದ ಸಾರ್ವಜನಿಕ ವಲಯ ನಮ್ಮ 'ರಾಷ್ಟ್ರೀಯ ಹೆಮ್ಮೆ' ಎಂಬ ಒಂದು ವರ್ಣನೆ! ಒಂದು ಪ್ರತ್ಯೇಕ 'ಡಿಸ್‌ಇನ್ವೆಸ್ಟ್‌ಮೆಂಟ್' ಖಾತೆಯನ್ನೇ ತೆರೆದು ತನ್ನ ಆರು ವರ್ಷಗಳ ಆಡಳಿತದಲ್ಲಿ ಸಾರ್ವಜನಿಕ ವಲಯದ ಘಟಕಗಳನ್ನು ಒಂದೊಂದಾಗಿ ಮಾರಾಟ ಮಾಡಲು ಮುಂದಾದವರಿಂದ, ಅದರಲ್ಲಿ ಹಗರಣಗಳ ಸರಮಾಲೆಯನ್ನೇ ಸೃಷ್ಟಿಸಿದವರಿಂದ ಈಗ ಇಂತಹ ವರ್ಣನೆ! ಬಿಜೆಪಿಯೆಂಬುದು ವಿಶ್ವಾಸಘಾತದ ಸಾಕಾರ ಮೂರ್ತಿ ಎಂದರೆ ತಪ್ಪಾದೀತೇ?

15ನೇ ಲೋಕಸಭಾ ಚುನಾವಣೆಗಳು ಆಗಲೇ ಆರಂಭವಾಗಿವೆ. ಆದರೆ ಬಿಜೆಪಿಯ ಭರವಸೆಗಳ ಮಹಾಪೂರ ಇನ್ನೂ ಹರಿದು ಬರುತ್ತಿವೆ, ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸುವ ಮೊದಲು ಅದರ ಇಲೆಕ್ಟ್ರಾನಿಕ್ 'ಕಣ್ಣೋಟ' ಬಂದಿತ್ತು. ಅದರಲ್ಲಿ ಎಲ್ಲರನ್ನೂ ಸೈಬರ್ ಲೋಕಕ್ಕೆ ಒಯ್ಯುವ ಭರವಸೆ ಇತ್ತು. ಚುನಾವಣಾ ಪ್ರಣಾಳಿಕೆಯೆಂದರೆ ಅಕಸ್ಮಾತ್ ಅಧಿಕಾರಕ್ಕೆ ಬಂದರೆ ಏನೆಲ್ಲಾ ಮಾಡುತ್ತೇವೆ ಎಂಬುದರ ವಿವರವಾದ ಪ್ರಸ್ತಾವಗಳು ಎಂದೇ ಅರ್ಥವಲ್ಲವೇ? ಆದರೆ ಬಿಜೆಪಿ ಮುಖಂಡರಿಗೆ ಇಷ್ಟು ಸಾಲದು ಎಂದನಿಸಿರಬೇಕು. ಈಗ ಅವರ ಇನ್ನೊಂದು 'ಕಣ್ಣೋಟ' ಪ್ರಕಟವಾಗಿದೆ. ಇಷ್ಟೇ ಅಲ್ಲ, ಇನ್ನಷ್ಟು ಇಂತಹ ಕಣ್ಣೋಟಗಳನ್ನು ಮತದಾರರ ಮೇಲೆ ಸುರಿಯುವ ಬೆದರಿಕೆಯೂ ಇದೆ!

ಪಾವತಿಗಳನ್ನು ಮುಂದೂಡುವುದು ಅಥವಾ ಕಂತುಗಳಲ್ಲಿ ಪಾವತಿ ಮಾಡುವುದು ಆರ್ಥಿಕ ಹಿಂಜರಿತದ ಅವಧಿಯಲ್ಲಿ ವ್ಯವಹಾರ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಕಾಣಬರುವ ಸಂಗತಿ. ಬಿಜೆಪಿ ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಅನುಗುಣವಾಗಿ ಈ ವಿಧಾನವನ್ನು ಅಂಗೀಕರಿಸಿದಂತಿದೆ; ತನ್ನ 'ಕಣ್ಣೋಟ'ಗಳನ್ನು ಕೂಡಾ ಕಂತುಗಳಲ್ಲಿ ಬಿಡುಗಡೆ ಮಾಡುತ್ತಿದೆ. ಅಥವಾ ಕಣ್ಣೋಟದಲ್ಲಿ ಸ್ಪಷ್ಟತೆಯಿಲ್ಲವಾದ್ದರಿಂದ ಅದು ಈ ದಾರಿ ಹಿಡಿಯಬೇಕಾಗಿ ಬಂದಿದೆಯೇ? ಅಥವಾ ತಮ್ಮ ಹಿಂದಿನ ಭರವಸೆಗಳಿಗೆ ಕೈಕೊಟ್ಟು ಸಂಪೂರ್ಣವಾಗಿ ತದ್ವಿರುದ್ಧ ಭರವಸೆಗಳನ್ನು ಕೊಡಲು ಇದೊಂದು ಅನುಕೂಲ ಸಾಧನ ಎಂದೂ ಅನಿಸಿರಬಹುದೇ!

'ಒಂದು ಖರೀದಿಸಿ, ಎರಡು ಪುಕ್ಕಟೆ - ಪಡೆಯಿರಿ'!

ಅದರ ಇತ್ತೀಚಿನ 'ಕಣ್ಣೋಟ' ನೋಡಿದರೆ ಈ ಮೂರೂ ಸಂದೇಹಗಳು ಬರದಿರದು. ಇದು ಮೂಲರಚನೆ ಅಭಿವೃದ್ಧಿ ಕುರಿತಾದ 'ಕಣ್ಣೋಟ'. ಇಲ್ಲಿ ಸ್ಪಷ್ಟತೆಯ ಅಭಾವವನ್ನು ಕಂತುಗಳಲ್ಲಿ ಅನಾವರಣಗೊಳಿಸುವುದಕ್ಕಿಂತ ಹೆಚ್ಚಾಗಿ 'ಭಾರೀ ಮಾರಾಟ', 'ಮೆಗಾ ಮಾರಾಟ'ಗಳ ಹಿಂದಿರುವ ಹತಾಶೆ ಕಾಣಬರುತ್ತಿದೆ: 'ಒಂದು ಖರೀದಿಸಿ, ಎರಡು ಪುಕ್ಕಟೆ ಪಡೆಯಿರಿ'!

ಈ 'ಕಣ್ಣೋಟ' ದಸ್ತಾವೇಜಿನಲ್ಲಿ ರಾಷ್ಟ್ರೀಯ ಮಹತ್ವದ ಒಂದುನೂರು ಪ್ರಾಜೆಕ್ಟುಗಳನ್ನು ಅಂಗೀಕರಿಸುವ ಭರವಸೆ ಕೊಡಲಾಗಿದೆ. ಆದರೆ ಇದರಲ್ಲಿ ಇದುವರೆಗೆ ಈ ಬಗ್ಗೆ ಎಲ್ಲರೂ, ಸ್ವತಃ ಬಿಜೆಪಿ ಕೂಡಾ ಹೇಳಿರುವ ಸಂಗತಿಗಳೇ ಇವೆಯೇ ಹೊರತು ಬೇರೇನೂ ಇಲ್ಲ. ಆದರೆ ಎರಡು ವಿಷಯಗಳ ಬಗ್ಗೆ ಟಿಪ್ಪಣಿ ಅಗತ್ಯ.

ಮೊದಲನೆಯದು, ಸಾರ್ವಜನಿಕ ವಲಯದ ಬಗ್ಗೆ ಈಗ ಬಿಜೆಪಿಯ ವ್ಯತಿರಿಕ್ತ ನಿಲುವು. 1998ರಿಂದ 2004ರವರೆಗೆ ಕೇಂದ್ರದಲ್ಲಿ ಸರಕಾರದ ನೇತೃತ್ವ ವಹಿಸಿದ್ದಾಗ ಇವರು ಒಂದು ಪ್ರತ್ಯೇಕ ಹೂಡಿಕೆ ಹಿಂತೆಗೆದ (ಡಿಸ್-ಇನ್‌ವೆಸ್ಟ್‌ಮೆಂಟ್) ಖಾತೆಯನ್ನೇ ತೆರೆದಿದ್ದರು1 ಒಬ್ಬ ಪ್ರತ್ಯೇಕ ಮಂತ್ರಿಯನ್ನೆ ಸಾರ್ವಜನಿಕ ವಲಯವನ್ನು ವ್ಯವಸ್ಥಿತವಾಗಿ ನಿರ್ನಾಮ ಮಾಡಲು ನೇಮಿಸಲಾಗಿತ್ತು! ಆ ಆರು ವರ್ಷಗಳ ಕಾಲ ಸಾರ್ವಜನಿಕ ವಲಯದ ಘಟಕಗಳ ಮಾರಾಟದ ಪ್ರಕ್ರಿಯೆಯಲ್ಲಿ ಸಂಭವಿಸಿದ ಹಗರಣಗಳ ಸರಮಾಲೆಯನ್ನು ನೆನಪಿಸಿಕೊಳ್ಳಿ. 2004ರಲ್ಲಿ ಯುಪಿಎ ಸರಕಾರ ಬಂದ ಕೂಡಲೇ ಎಡಪಕ್ಷಗಳ ಒತ್ತಡದಿಂದ ಕೈಗೊಂಡ ಮೊದಲ ನಿರ್ಣಯವೆಂದರೆ ಈ ಖಾತೆಯನ್ನು ವಿಸರ್ಜಿಸಿದ್ದು.

ಪಿಪಿಪಿ ಮಾದರಿ ಯಾರಿಗಾಗಿ?

ಆದರೆ ಈಗ ಅವರು ತಮ್ಮ ಈ 'ಕಣ್ಣೋಟ' ದಸ್ತಾವೇಜಿನಲ್ಲಿ ಏನು ಹೇಳುತ್ತಾರೆ ನೋಡಿ! 'ಭಾರತದ ಸಾರ್ವಜನಿಕ ವಲಯ ಈ ಹಲವು ದಶಕಗಳಲ್ಲಿ ಮೂಲರಚನೆಯ ಅನುಷ್ಠಾನದಲ್ಲಿ ಅಪಾರ ಅನುಭವಗಳನ್ನು ಪೇರಿಸಿಕೊಂಡಿದೆ. ಇದು ನಮ್ಮ ರಾಷ್ಟ್ರೀಯ ಹೆಮ್ಮೆ(!). ಎನ್‌ಡಿಎ ಸರಕಾರ ಸಾರ್ವಜನಿಕ ವಲಯವನ್ನು ಬಲಪಡಿಸುತ್ತದೆ, ಮತ್ತು ಭಾರತದಲ್ಲಿ ಮೂಲರಚನೆಯ ವಿಸ್ತರಣೆಯಲ್ಲಿ ಅದು ಸಂಪೂರ್ಣ ಕೊಡುಗೆ ನೀಡುವಂತೆ ಮಾಡಲಾಗುತ್ತದೆ. ಅದೇ ವೇಳೆಗೆ ಆಕಾರದಲ್ಲಿಯೂ, ಪ್ರಾಜೆಕ್ಟುಗಳ ಅನುಷ್ಠಾನ ಸಾಮರ್ಥ್ಯದಲ್ಲಿಯೂ ಅಗಾಧವಾಗಿ ಬೆಳೆದಿರುವ ಭಾರತದ ಖಾಸಗೀ ವಲಯವೂ ಪೂರ್ಣವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಲಾಗುವುದು. ಸಾರ್ವಜನಿಕ/ಖಾಸಗಿ ಪಾಲುದಾರಿಕೆಯ ಹರಹನ್ನು ವಿಸ್ತರಿಸಲು ಸರಕಾರ ಖಾಸಗೀ ವಲಯದ ಸಂಪನ್ಮೂಲಗಳನ್ನು, ಸಾಮರ್ಥ್ಯಗಳನ್ನು ಪೂರ್ಣವಾಗಿ ಬಳಸಿಕೊಳ್ಳುತ್ತದೆ.' ನಿಜಕ್ಕೂ ಇದು, ಮೇಲೆ ಹೇಳಿದಂತೆ, ಅದಕ್ಕೆ ತನ್ನ ಹಿಂದಿನ ನಿಲುವಿನಿಂದ ಹಿಂದೆ ಸರಿಯಲು ಒಂದು ಬಹಳ ಅನುಕೂಲಕರ ವಿಧಾನ! ಅಲ್ಲದೆ ಅದಕ್ಕಿಂತ ಮುಖ್ಯವಾಗಿ, ಭಾರತದ ಸಾರ್ವಜನಿಕ ವಲಯವನ್ನು ಬೆಂಬಲಿಸುವ, ಅದರ ಮೇಲೆ ಅವಲಂಬಿಸಿರುವ ಭಾರತೀಯರ ವಿಶಾಲ ವಿಭಾಗಗಳ ಮತಗಳನ್ನು ಪಡೆಯುವ ಒಂದು ಮೂಢ ಸಿನಿಕ ಪ್ರಯತ್ನ ಕೂಡಾ.

ಈಗ ಎರಡನೇ ಅಂಶವನ್ನು ನೋಡೋಣ. ಅಂದರೆ ಸಾರ್ವಜನಿಕ-ಖಾಸಗಿ ಪಾಲುದಾರಿಕೆ (ಪಿಪಿಪಿ)ಯ ಅಂಶವನ್ನು. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಈ ಪರಿಕಲ್ಪನೆಯ ಮೇಲೆ ಒತ್ತು ನೀಡುತ್ತಿವೆ. ಆದರೆ ಈ ನಿಟ್ಟಿನಲ್ಲಿ ನಮ್ಮ ಹಿಂದಿನ ಅನುಭವವೇನು? ವಿಮಾನ ನಿಲ್ದಾಣಗಳ ಆಧುನೀಕರಣದಲ್ಲಿ ಈ ಪಿಪಿಪಿ ಮಾದರಿಯ ಉದಾಹರಣೆಯನ್ನು ನೋಡೋಣ. ಇದರಲ್ಲಿ ಖಾಸಗೀ ಪಾಲುದಾರರು ತಮ್ಮದೇ ತಪ್ಪು ಲೆಕ್ಕಾಚಾರಗಳಿಂದ ಮತ್ತು ಜಾಗತಿಕ ಹಿಂಜರಿತದಿಂದ ವಿಮಾನಪ್ರಯಾಣದ ಪ್ರಮಾಣ ಕಡಿಮೆಯಾಗಿ ಈಗ ನಷ್ಟ ಅನುಭವಿಸುತ್ತಿರುವುದರಿಂದ ಬೆಂಗಳೂರು ಮತ್ತು ಹೈದರಾಬಾದ್ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರ ಮೇಲೆ ಬಳಕೆದಾರ ಅಭಿವೃದ್ಧಿ ಶುಲ್ಕ ಎಂದು ದೊಡ್ಡ ಮೊತ್ತವನ್ನು ಸಂಗ್ರಹಿಸಲು ಅನುಮತಿ ಕೊಡಲಾಗಿದೆ. ಅಂದರೆ ಈ ಮಾದರಿಯಲ್ಲಿ ಖಾಸಗಿಯವರ ತಪ್ಪು ಲೆಕ್ಕಾಚಾರಗಳಿಗೆ ಸಾರ್ವಜನಿಕರು ದಂಡ ತೆರಬೇಕು. ಇದು ಈ ಪಿಪಿಪಿಯ ತರ್ಕ. ಸರಕಾರ ನಡೆಸುತ್ತಿರುವ ವಿಮಾನ ನಿಲ್ದಾಣಗಳು ನಷ್ಟ ಅನುಭವಿಸುತ್ತಿದ್ದರೂ ಅವು ಈ ರೀತಿ ಶುಲ್ಕಗಳನ್ನು ವಿಧಿಸುವಂತಿಲ್ಲ, ಏಕೆಂದರೆ ಅವು ಸಾರ್ವಜನಿಕ ಉಪಯೋಗದ ಸೇವೆಗಳು! ಬಿಜೆಪಿಯ ಈ 'ಕಣ್ಣೋಟ' ಜನಗಳ ಮೇಲೆ ಇನ್ನಷ್ಟು ಹೊರೆಗಳನ್ನು ಹೇರಲಿಕ್ಕಾಗಿ ಎಂಬುದು ಸ್ಪಷ್ಟ.

ವಿಶ್ವಾಸಘಾತದ ಆಟಗಳು

ಹೀಗಿದೆ ಬಿಜೆಪಿಯವರು ಆಡುತ್ತಿರುವ ವಿಶ್ವಾಸಘಾತದ ಆಟಗಳು. ಬಹುಶಃ ಬಿಜೆಪಿ ಅಂದರೆ ವಿಶ್ವಾಸಘಾತಕ್ಕೆ ಇನ್ನೊಂದು ಹೆಸರು! ಸಾರ್ವಜನಿಕರಿಗಾಗಿ ಅವರು ಹೇಳುವ ಮಾತುಗಳು ಅವರ ನಿಜವಾದ ಅಜೆಂಡಾ ಮತ್ತು ಆಶಯಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿವೆ. ಕೆಲವೊಮ್ಮೆ ಸಂಪೂರ್ಣ ತದ್ವಿರುದ್ಧವೂ ಆಗಿರುತ್ತವೆ.

ಇದರ ಅತ್ಯಂತ ನಗ್ನ ಅಭಿವ್ಯಕ್ತಿಯೆಂದರೆ ಆಧುನಿಕ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಒಪ್ಪುತ್ತೇವೆ ಎಂದಿರುವುದು. ಈ ಗಣತಂತ್ರವನ್ನು ಒಂದು ಅತ್ಯಂತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸಲು ಆರೆಸ್ಸೆಸ್‌ನ ರಾಜಕೀಯ ಅಂಗವಾಗಿರುವ ಅವರು ಕೆಲಸ ಮಾಡುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಅವರು ಪ್ರಭುತ್ವ ಅಧಿಕಾರದ ಲಗಾಮನ್ನು ಪಡೆಯದಂತೆ ತಡೆಯಬೇಕು. ಭಾರತದ ಜನತೆ ಒಂದು ಉತ್ತಮ ಭಾರತಕ್ಕಾಗಿ ಮತ್ತು ಭಾರತದ ಜನತೆಗೆ ಒಂದು ಉತ್ತಮ ಭವಿಷ್ಯಕ್ಕಾಗಿ, ಒಂದು ಕಾಂಗ್ರೆಸೇತರ ಮತ್ತು ಬಿಜೆಪಿಯೇತರ ಜಾತ್ಯಾತೀತ ಪರ್ಯಾಯವು 2009ರ ಸಾರ್ವತ್ರಿಕ ಚುನಾವಣೆಗಳ ನಂತರ ಸರಕಾರ ರಚಿಸುವಂತಾಗಬೇಕು.

ಇಬ್ಬಂದಿತನ!

ಬಿಜೆಪಿಯಿಂದ ಪ್ರಧಾನ ಮಂತ್ರಿಗಳಾಗ ಬೇಕೆನ್ನುವ ಎಲ್ ಕೆ ಅಡ್ವಾಣಿಯವರು ಈ ದಸ್ತಾವೇಜನ್ನು ಬಿಡುಗಡೆ ಮಾಡುವಾಗ ಭಾರತ- ಅಮೆರಿಕಾ ಪರಮಾಣು ಒಪ್ಪಂದ ಕುರಿತಂತೆ ಬಿಜೆಪಿ ನಿಲುವನ್ನು ತಲೆಕೆಳಗೆ ಮಾಡಿದ್ದು ಈ ಇಬ್ಬಂದಿತನದ ವಿಧಾನವನ್ನು ಬಯಲು ಮಾಡಿದೆ. ನವೆಂಬರ್ 28, 2007ರಂದು ಲೋಕಸಭೆಯಲ್ಲಿ ಈ ವ್ಯವಹಾರ ಕುರಿತಂತೆ ಚರ್ಚೆಯಲ್ಲಿ ಅಡ್ವಾಣಿಯವರ ಈ ಕೊನೆಯ ಮಾತುಗಳನ್ನು ನೆನಪಿಸಿಕೊಳ್ಳಿ: 'ನನ್ನ ಟಿಪ್ಪಣಿಗಳಲ್ಲಿ ಕೊನೆಯದಾಗಿ ನಾನು, ಈಗಿರುವಂತೆ 123 ಒಪ್ಪಂದ ದೇಶಕ್ಕೆ ಸ್ವೀಕಾರಾರ್ಹವಲ್ಲ ಎಂದು ಹೇಳುತ್ತೇನೆ. ಏಕೆಂದರೆ ಇದು ಭಾರತದ ಪ್ರಮುಖ ಮತ್ತು ದೀರ್ಘಕಾಲೀನ ಹಿತಾಸಕ್ತಿಗಳಿಗೆ ಬಹಳ ಹಾನಿಕಾರಕ. ಇನ್ನು ಮೇಲೆ ಎನ್‌ಡಿಎ ಗೆ ಒಂದು ಜನಾದೇಶ ಸಿಕ್ಕರೆ, ನಾವು ಈ ವ್ಯವಹಾರದ ಬಗ್ಗೆ ಮರು ಮಾತುಕತೆ ನಡೆಸಿ ಅದರಲ್ಲಿನ ಪ್ರತಿಕೂಲ ಅಂಶಗಳನ್ನು ತೆಗೆಸುತ್ತೇವೆ ಅಥವಾ ಈ ಸಂಧಿಯನ್ನು ಪೂರ್ಣವಾಗಿ ತಿರಸ್ಕರಿಸುತ್ತೇವೆ.'

ಆದರೆ ಈಗ ಅವರೇನು ಹೇಳುತ್ತಿದ್ದಾರೆ 'ನಾನು ಸರಕಾರ ಎಂಬುದು ಒಂದು ಮುಂದುವರೆಯುತ್ತಿರುವ ಸಂಗತಿ ಎಂಬ ಅಂಶವನ್ನು ಗಮನಕ್ಕೆ ತಗೊಳ್ಳುತ್ತೇನೆ. ಹಿಂದಿನ ಸರಕಾರ ಸಹಿ ಹಾಕಿದ ಸಂಧಿಯನ್ನು ಸುಲಭವಾಗಿ ನಿರ್ಲಕ್ಷಿಸಲು ಸಾಧ್ಯವಿಲ್ಲ.' ಈ ಸಂಧಿಯನ್ನು 'ಪೂರ್ಣವಾಗಿ' ತಿರಸ್ಕರಿಸುವ ಮಾತಿರಲಿ, ಅದರ ಬಗ್ಗೆ 'ಮರು ಮಾತುಕತೆ' ನಡೆಸುವ ಪ್ರಯತ್ನದ ಪ್ರಸ್ತಾಪ ಕೂಡಾ ಇಲ್ಲ. ಅದೇ ರೀತಿ, ಬಿಜೆಪಿ ಈ ಮೊದಲು ಬಿಡುಗಡೆ ಮಾಡಿದ ಭಾರೀ ಗಾತ್ರದ ಪ್ರಣಾಳಿಕೆಯಲ್ಲೂ 'ಮರು ಮಾತುಕತೆ' ಎಂಬ ಪದ ಎಲ್ಲಿಯೂ ಕಾಣಸಿಗುವುದಿಲ್ಲ.

ಬಿಜೆಪಿ ತನ್ನ ನಿಜವಾದ ಅಮೆರಿಕನ್ ಸಾಮ್ರಾಜ್ಯಶಾಹಿಯ ಪರವಾದ ನಿಲುವಿಗೆ ಮುಖವಾಡ ತೊಡಿಸುವ ಪ್ರಯತ್ನದಲ್ಲಿ ಭಾರತ-ಅಮೆರಿಕ ಪರಮಾಣು ವ್ಯವಹಾರದಲ್ಲಿ ದೇಶವನ್ನು ತಪ್ಪು ದಾರಿಗೆಳೆಯುತ್ತಿದೆ ಎಂಬುದಂತೂ ಸ್ಪಷ್ಟ. ಭಾರತವು ಅಮೆರಿಕಾದೊಂದಿಗೆ ಒಂದು ಸಾಮರಿಕ ಸಂಬಂಧವನ್ನು ಯುದ್ಧ ಮೈತ್ರಿ ಬೆಳೆಸುವ ಪ್ರಕ್ರಿಯೆಯನ್ನು ಆರಂಭಿಸಿದ್ದು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವೇ ತಾನೇ? ಇಸ್ರೇಲಿನೊಂದಿಗೆ ಸಂಬಂಧಗಳನ್ನು ಇನ್ನಷ್ಟು ಬಲಗೊಳಿಸಿದ್ದು ಅವರೇ. ಅಮೆರಿಕನ್ ಸಾಮ್ರಾಜ್ಯಶಾಹಿಗೆ ಅಡಿಯಾಳುತನದ ಈ ಪ್ರಕ್ರಿಯೆಯನ್ನು ಡಾ. ಮನಮೋಹನ್ ಸಿಂಗ್‌ರವರ ಯುಪಿಎ ಸರಕಾರ ಅವರಿಗೆ ತಕ್ಕುದಾಗಿ ಮುಂದೊಯ್ದಿತು. ಬಿಜೆಪಿಯೇನಾದರೂ ಅಧಿಕಾರಕ್ಕೆ ಬಂದರೆ ಈ ಪ್ರಕ್ರಿಯೆಯನ್ನು ಮುಂದೊಯ್ಯುತ್ತದೆ ಮತ್ತು ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಒಬ್ಬ ಕಿರಿಯ ಅಧೀನ ಮಿತ್ರನಾಗಿ ಮಾಡುತ್ತದೆ ಎಂದೀಗ ಅಡ್ವಾಣಿಯವರು ಭರವಸೆ ಕೊಡುತ್ತಿದ್ದಾರೆ.

ರಾಜ್ಯದಲ್ಲಿ, ಆದರಲ್ಲೂ ಕರಾವಳಿಯಲ್ಲಿ ಅಲ್ಪಸಂಖ್ಯಾತರಿಗೆ ಸಂಘ ಪರಿವಾರದಿಂದ ಬದುಕಿಗೇ ಬೆದರಿಕೆ ಬಂದಿದೆ. ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವಲ್ಲಿ ದಯನೀಯವಾಗಿ ವಿಫಲವಾಗಿದೆ ಎಂಬುದು ಅಲ್ಪಸಂಖ್ಯಾತರಿಗೂ ಅರ್ಥವಾಗಿದೆ. ಹಾಗಿದ್ದರೆ ಅಲ್ಪಸಂಖ್ಯಾತರ ಮುಂದಿನ ದಾರಿ ಏನು? ಅವರು ಎತ್ತ ಸಾಗುತ್ತಿದ್ದಾರೆ?

ಎತ್ತ ಸಾಗುತ್ತಿದ್ದಾರೆ ಕರಾವಳಿಯ ಅಲ್ಪಸಂಖ್ಯಾತರು ?

ನಿತ್ಯಾನಂದಸ್ವಾಮಿ

ಕರ್ನಾಟಕದ ಕರಾವಳಿ ಜಿಲ್ಲೆಗಳ ಧಾರ್ಮಿಕ ಅಲ್ಪಸಂಖ್ಯಾತರು ಮುಖ್ಯವಾಗಿ ಮುಸಲ್ಮಾನರು ಮತ್ತು ಕ್ರೈಸ್ತರು ಆತಂಕದಲ್ಲಿದ್ದಾರೆ. ಈ ಚುನಾವಣೆಗಳು ಅವರ ಆತಂಕವನ್ನು ಇನ್ನಷ್ಟು ಹೆಚ್ಚಿಸಿವೆ. ಯಾರಿಗೆ ಮತ ಹಾಕಬೇಕು, ಯಾವ ರಾಜಕೀಯ ಪಕ್ಷವನ್ನು ಬೆಂಬಲಿಸಬೇಕು ಎಂಬ ಆತಂಕ ಈಗ ಅವರನ್ನು ಕಾಡುತ್ತಿದೆ. ಇದು ಸಹಜವೂ ಹೌದು.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮೊದಲೇ ಕರಾವಳಿಯ ಮುಸಲ್ಮಾನರ ಮತ್ತು ಕ್ರೈಸ್ತರ ವಿರುದ್ಧ ಸಂಘ ಪರಿವಾರದ ಭಯೋತ್ಪಾದನಾ ಪರ್ವ ಆರಂಭವಾಗಿತ್ತು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದರೊಂದಿಗೆಯಂತೂ ಕರಾವಳಿಯ ಧಾರ್ಮಿಕ ಅಲ್ಪಸಂಖ್ಯಾತರ ಯಾತನೆಗಳಿಗೆ ಎಲ್ಲೆ ಇಲ್ಲದಾಯಿತು. ಆರ್.ಎಸ್.ಎಸ್. ನಿರ್ದೇಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುತ್ವ ಸಂಘಟನೆಗಳಿಗೆ ತಮ್ಮ ಆಕ್ರಮಣಕಾರಿ ದಾರಿಯಲ್ಲಿ ಮುನ್ನುಗ್ಗಲು ಎಲ್ಲಿಲ್ಲದ ಕುಮ್ಮಕ್ಕು ಸಿಕ್ಕಂತಾಯಿತು. ಕರಾವಳಿಯ ಮುಸಲ್ಮಾನರು ಮತ್ತು ಕ್ರೈಸ್ತರು ಭೀತಿಯ ನೆರಳಲ್ಲಿ ಬದುಕುವಂತಾಯಿತು.

ಆದಿ ಉಡುಪಿ ಬೆತ್ತಲೆ ಪ್ರಕರಣ

ಸಂಘ ಪರಿವಾರದ ರಾಕ್ಷಸೀ ಪ್ರವೃತ್ತಿಯ ಪ್ರಕರಣಗಳನ್ನು ನೆನಪು ಮಾಡಿಕೊಳ್ಳುವಾಗ ಆದಿ ಉಡುಪಿ ಬೆತ್ತಲೆ ಪ್ರಕರಣ ತಟ್ಟನೆ ನೆನಪಿಗೆ ಬರುತ್ತದೆ. ಇಡೀ ದೇಶವನ್ನು ದಿಗ್ಭ್ರಮೆಗೊಳಿಸಿದ ಘಟನೆಯದು. ದನಗಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದಾರೆ ಎಂಬ ಆರೋಪ ಹೊರಿಸಿ, ದನಗಳ ವ್ಯಾಪಾರ ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದ ಮುಸಲ್ಮಾನ ವಯೋವೃದ್ಧ ತಂದೆ ಮತ್ತು ಆತನ ಮಗನ ಮೇಲೆ ಎರಗಿದ ಈ 'ಹಿಂದೂ ಧರ್ಮ ರಕ್ಷಕರು' ಅವರಿಬ್ಬರನ್ನು ಬೆತ್ತಲೆ ಮಾಡಿ ಸಂಭ್ರಮಿಸಿದ್ದರು! ರಾಜ್ಯದಲ್ಲಿ ಕೋಲಾಹಲಕ್ಕೆ ಕಾರಣವಾದ ಈ ಪ್ರಕರಣದ ಎಲ್ಲ ಪ್ರತ್ಯಕ್ಷ ಸಾಕ್ಷಿಗಳ ಬಾಯಿ ಮುಚ್ಚಿಸಿ, ದೌರ್ಜನ್ಯಕ್ಕೆ ಒಳಗಾದ ತಂದೆ ಮತ್ತು ಮಗನ ನಗ್ನ ಫೋಟೋಗಳನ್ನು ತೆಗೆದಿದ್ದ ಫೋಟೋಗ್ರಾಫರ್ ಮೇಲೆ ಒತ್ತಡ ಹೇರಿ ಆ ಫೋಟೋಗಳ ನೆಗೆಟಿವ್ ಪತ್ತೆಯಾಗದಂತೆ ಮಾಡಲಾಯಿತು. ಬಿಜೆಪಿ ಕೃಪಾಪೋಷಿತ ಪೊಲೀಸರು, ಸಿಓಡಿ ಅಧಿಕಾರಿಗಳು, ಪಬ್ಲಿಕ್ ಪ್ರಾಸಿಕ್ಯೂಟರ್ ಎಲ್ಲರೂ ಶಾಮೀಲಾಗಿ ಅಪರಾಧಿಗಳನ್ನು ರಕ್ಷಿಸುವಲ್ಲಿ ಯಶಸ್ವಿಯಾದರು. ವಿಚಾರಣೆ ನಡೆಸಿದ ಉಡುಪಿ ತ್ವರಿತ ನ್ಯಾಯಾಲಯವು ಎಲ್ಲ 12 ಅಪರಾಧಿಗಳನ್ನು ಸಾಕ್ಷ್ಯಾಧಾರಗಳ ಕೊರತೆಯ ಹೆಸರಿನಲ್ಲಿ ಖುಲಾಸೆಗೊಳಿಸಿ ತೀರ್ಪು ನೀಡಿತು. ಹಿಂದೂ ಯುವಸೇನೆಯವರು ಅಂದು ಉಡುಪಿಯಲ್ಲಿ ಮಳೆ ಬೀಳುತ್ತಿರುವುದನ್ನು ಲೆಕ್ಕಿಸದೆ, ಮೆರವಣಿಗೆ ಮಾಡಿ, ಪಟಾಕ್ಷಿ ಸಿಡಿಸಿ ವಿಜಯೋತ್ಸವ ಆಚರಿಸಿದ್ದಾರೆ. ಹಿಂದೂ ಯುವಸೇನೆಯ ಜಿಲ್ಲಾ ಕಾರ್ಯದರ್ಶಿ ಮಾತನಾಡಿ 'ಗೋಹತ್ಯೆ ಮುಂದುವರೆದರೆ ಗಲ್ಲಿಗಲ್ಲಿಗಳಲ್ಲಿ ಬೆತ್ತಲೆ ಪ್ರಕರಣಗಳು ನಡೆಯಲಿವೆ' ಎಂದು ಬಹಿರಂಗ ಬೆದರಿಕೆ ಹಾಕಿದ್ದಾರೆ.


ಚರ್ಚುಗಳ ಮೇಲೆ ದಾಳಿ

ಈ ಬೆದರಿಕೆಗೆ ಅನುಗುಣವಾಗಿ, ನಂತರ ಕರಾವಳಿಯ ಜಿಲ್ಲೆಗಳಲ್ಲಿ ದನಗಳ ಸಾಗಾಟದ ಹೆಸರಿನಲ್ಲಿ ಮುಸಲ್ಮಾನರ ಮೇಲೆ ಅನೇಕ ಕಡೆ ದಾಳಿಗಳಾಗಿವೆ. ಕೆಲವು ಕಡೆ ಹಿಂದೂ ಸೇನೆಯ ಪುಂಡರೇ ದನದ ವ್ಯಾಪಾರಿಗಳಿಗೆ ದನಗಳ ಮಾರಾಟ ಮಾಡಿಸಿ ಆನಂತರ ಅವರನ್ನು ಆಕಸ್ಮಿಕವಾಗಿ ದನಗಳೊಂದಿಗೆ ಹಿಡಿದವರಂತೆ ನಟಿಸಿ ದಾಳಿ ಮಾಡಿ, ದನಗಳನ್ನು ಕೊಂಡೊಯ್ದು ಪ್ರಕರಣಗಳೂ ನಡೆದಿವೆ. ಇಂತಹ ಸಂದರ್ಭಗಳಲ್ಲಿ ಪೊಲೀಸರು ಈ ಹಿಂದುತ್ವದ ಪುಂಡರೊಂದಿಗೆ ಕೈಜೋಡಿಸಿದ್ದೇ ಹೆಚ್ಚು.

ದನಗಳ ಮಾಂಸವನ್ನು ಆಹಾರಕ್ಕಾಗಿ ಬಳಸುವುದನ್ನು ವಿರೋಧಿಸುವ ಮೂಲಕ ಜನಗಳ ಆಹಾರದ ಹಕ್ಕಿನ ಮೇಲೆ ಒಂದು ಕಡೆ ದಾಳಿ ಮಾಡಲಾಗುತ್ತಿದ್ದರೆ ಇನ್ನೊಂದೆಡೆ ಅದರ ಹೆಸರಿನಲ್ಲಿ ಮುಸಲ್ಮಾನರ ಮೇಲೆ ದೌರ್ಜನ್ಯವೆಸಗಲಾಗುತ್ತಿದೆ. ದನಗಳ ಮಾಂಸವನ್ನು ಆಹಾರವಾಗಿ ಬಳಸುವ ಮುಸಲ್ಮಾನರು ಮತ್ತು ಕ್ರೈಸ್ತರು ಭಾರತಕ್ಕೆ ಆಗಮಿಸುವ ಎಷ್ಟೋ ವರ್ಷಗಳ ಮೊದಲೇ ಇಲ್ಲಿಯ ಜನ ದನದ ಮಾಂಸವನ್ನು ತಿನ್ನುತ್ತಿದ್ದರು. ಯಜ್ಞಯಾಗಾದಿಗಳಲ್ಲಿ ಅಗೋಚರ(?) ಶಕ್ತಿಗಳನ್ನು ತೃಪ್ತಿಪಡಿಸಲು ದನಗಳನ್ನು ಬಲಿ ಕೊಡುತ್ತಿದ್ದರು. ಬಲಿಕೊಟ್ಟ ದನಗಳ ಮಾಂಸವನ್ನು ಪ್ರಸಾದವಾಗಿ ಭಕ್ಷಿಸುತ್ತಿದ್ದರು. ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಕಟ್ಟಕಡೆಯ ಸ್ಥಾನದಲ್ಲಿದ್ದ ಶೂದ್ರರು ಮತ್ತು ಅತಿ ಶೂದ್ರರು ಸತ್ತ ದನಗಳ ಮಾಂಸವನ್ನು ಮಾತ್ರ ತಿನ್ನಬಹುದಾಗಿತ್ತು. ಹೀಗೆ ದನದ ಮಾಂಸ ತಿನ್ನುವುದು ಹಿಂದು ಸಮಾಜದ ಸಂಸ್ಕೃತಿಯ ಭಾಗವಾಗಿಯೇ ಬೆಳೆದು ಬಂದಿರುವುದನ್ನು ಮರೆಮಾಚಿ ಇಂದು ದನಗಳ ಹತ್ಯೆಯ ಹೆಸರಿನಲ್ಲಿ ಅಲ್ಪಸಂಖ್ಯಾತ ಮುಸಲ್ಮಾನರ ಆಹಾರ ಮತ್ತು ಜೀವನ ನಿರ್ವಹಣೆಯ ಮೇಲೆ ದಾಳಿ ಮಾಡಲಾಗುತ್ತಿದೆ. ಕರಾವಳಿ ಜಿಲ್ಲೆಗಳಲ್ಲಂತೂ ದನಗಳ ವ್ಯಾಪಾರವನ್ನು ಒಂದು ವೃತ್ತಿಯಾಗಿಸಿಕೊಂಡು ಬದುಕುತ್ತಿದ್ದ ಬಡ ಮುಸಲ್ಮಾನ ಕುಟುಂಬಗಳು ಯಾರಿಂದಲೂ ರಕ್ಷಣೆ ಸಿಗದಂತಾಗಿ ಪರದಾಡುವಂತಾಗಿದೆ.



ಕ್ರೈಸ್ತ ಶಿಕ್ಷಣ ಸಂಸ್ಥೆಗಳಿಗೆ ಬೆದರಿಕೆ :

ಒರಿಸ್ಸಾದ ಕಂಧಮಲ್‌ನಲ್ಲಿ ಸ್ವಾಮಿ ಲಕ್ಷ್ಮಣಾನಂದರನ್ನು ಅಲ್ಲಿನ ಕ್ರೈಸ್ತರೇ ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಬಜರಂಗದಳದ ಕೊಲೆಗಡುಕರು ಅಲ್ಲಿನ ಕ್ರೈಸ್ತ ಸಮುದಾಯದ ಜನರ ಮೇಲೆ ಸಾಮೂಹಿಕವಾಗಿ ದಾಳಿ ಮಾಡಿ, ಅವರ ಮನೆಗಳಿಗೆ ಬೆಂಕಿಯಿಟ್ಟು ಅವರನ್ನು ನಿರಾಶ್ರಿತರನ್ನಾಗಿ ಮಾಡಿದ್ದಲ್ಲದೆ ನೂರಾರು ಅಮಾಯಕರನ್ನು ಕೊಲೆ ಮಾಡಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ಭಜರಂಗದಳದ ಪುಂಡರು ಸಾಮೂಹಿಕ ಅತ್ಯಾಚಾರ ಮಾಡಿದ ಘಟನೆಯನ್ನು ವಿಶ್ವದಾದ್ಯಂತ ಎಲ್ಲ ಶಾಂತಿಪ್ರಿಯ ಜನ ಖಂಡಿಸಿದರು. ಭಾರತ ತಲೆ ತಗ್ಗಿಸಿ ಅಪರಾಧಿ ಸ್ಥಾನದಲ್ಲಿ ನಿಲ್ಲುವಂತಾಯಿತು. ಈ ಘಟನೆ ಸಹಜವಾಗಿ ಭಾರತದ ಕ್ರೈಸ್ತ ಅಲ್ಪಸಂಖ್ಯಾತರಲ್ಲಿ ತೀವ್ರ ಅಭದ್ರತೆಯನ್ನು ಉಂಟುಮಾಡಿತು. ತಮಗೆ ರಕ್ಷಣೆ ಬೇಕು ಎಂದು ಸರ್ಕಾರದ ಗಮನ ಸೆಳೆಯಲು ಅವರು ದೇಶಾದ್ಯಂತ ಶಿಕ್ಷಣ ಸಂಸ್ಥೆಗಳ 'ಬಂದ್' ಆಚರಿಸಲು ನಿರ್ಧರಿಸಿದರು. ಕರ್ನಾಟಕದಲ್ಲಿ ಈ ಬಂದ್ ಯಶಸ್ವಿಯಾಯಿತು.

ತೀವ್ರ ಆಘಾತಕ್ಕೆ ಒಳಗಾಗಿದ್ದ ಕ್ರೈ ಸಮುದಾಯಕ್ಕೆ ಆಗ ಸಮಾಜದ ಸಹಾನುಭೂ ಬೇಕಾಗಿತ್ತು. ಅಧಿಕಾರದಲ್ಲಿರುವ ಸರ್ಕಾರ ಒಂದ ನಾಗರಿಕ ಸರ್ಕಾರವೇ ಆಗಿದ್ದರೆ ನೊಂದ ಕ್ರೈಸ್ ನೋವಿಗೆ ಸ್ಪಂಧಿಸಿ ಅವರಲ್ಲಿ ಧೈರ್ಯ ತುಂಬು ಕೆಲಸ ಮಾಡುತ್ತಿತ್ತು. ಆದರೆ ರಾಜ್ಯದ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ಶಿಕ್ಷ ಮಂತ್ರಿ ಕ್ರೈಸ್ತರಿಗೆ ಸಹಾನುಭೂತಿ ವ್ಯಕ್ತಪಡಿಸು ಬದಲು ಅವರ ಶಿಕ್ಷಣ ಸಂಸ್ಥೆಗಳು ಸರ್ಕಾರದಿಂ ಅನುದಾನ ಪಡೆಯುತ್ತಿದ್ದು, ಸರ್ಕಾರದ ಅನುಮ ಇಲ್ಲದೆ ಮುಷ್ಕರದಲ್ಲಿ ಭಾಗವಹಿಸಿದಕ್ಕೆ ಏಕೆ ಕ್ರಮ ಜರುಗಿಸಬಾರದು ಎಂದು ನೋಟೀಸ್ ನೀಡಿತು ಇದು ಗಾಯದ ಮೇಲೆ ಬರೆ ಎಳೆಯುವ ಕ್ರಮವಾಗಿತ್ತು.

ಕರಾವಳಿ ಜಿಲ್ಲೆಗಳಲ್ಲಿನ ಕ್ರೈಸ್ತ ಶಿಕ್ಷಣ ಸಂಸ್ಥೆಗಳ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ ಹೆಚ್ಚಾಗಿ ಎಲ್ಲರೂ ತಮ್ಮ ಮಕ್ಕಳನ್ನು ಕ್ರೈಸ್ ಶಾಲೆಗಳಿಗೆ ಸೇರಿಸಲು ಬಯಸುತ್ತಾರೆ. ಕ್ರೈಸ್ತರು ನಡೆಸುವ ಆಸ್ಪತ್ರೆಗಳ ಬಗ್ಗೆಯೂ ಕರಾವಳಿ ಜಿಲ್ಲೆಗಳ ಜನರಲ್ಲಿ ಒಳ್ಳೆಯ ಅಭಿಪ್ರಾಯವಿ ಇತ್ತೀಚಿನ ದಿನಗಳವರೆಗೂ ಕ್ರೈಸ್ತರು ಉಳಿ ಸಮುದಾಯಗಳ ಜನರ ನಡುವೆ ಯಾವುದೇ ಆತಂಕವಿಲ್ಲದೆ ಓಡಾಡಿಕೊಂಡಿದ್ದರು. ಆದರೆ ಈಗ ಆ ಪರಿಸ್ಥಿತಿಯಿಲ್ಲ.

ಕರಾವಳಿಯ ಮಠಾಧೀಶರ ಕುಮ್ಮಕ್ಕು

ವಿವಿಧ ಸಮುದಾಯಗಳ ನಡುವೆ ಶಾಂತಿ ನೆಲೆಸುವಂತೆ ಮಾಡಲು ಶ್ರಮಿಸುವುದು ಧರ್ಮಾಧಿಕಾರಿಗಳು, ಮಠಾಧೀಶರುಗಳ ಕರ್ತವ್ಯ. ಆದರೆ ಕರಾವಳಿಯಲ್ಲಿರುವ ಕೆಲವು ಮಠಾಧೀಶರು ಮೌನವಾಗಿದ್ದು ಇನ್ನು ಕೆಲವರು ಅಪ್ಪಣೆಯನ್ನೇ ಹೊರಡಿಸಿ ಗಲಭೆಗಳಿಗೆ ಕುಮ್ಮಕ್ಕು ಕೊಡುತ್ತಾ ಬಂದಿದ್ದಾರೆ. ಮತಾಂತರದ ಹೆಸರಿನಲ್ಲಿ ಕ್ರೈಸ್ತರ ಮೇಲಿನ, ಅವರ ಚರ್ಚುಗಳ ಮೇಲಿನ ದಾಳಿಯನ್ನು ಅವರು ಸಮರ್ಥಿಸಿದ್ದಾರೆ. ಭಯೋತ್ಪಾದನೆಯ ಹೆಸರಿನಲ್ಲಿ ಮುಸಲ್ಮಾನರ ಮೇಲಿನ ಹಲ್ಲೆಗಳನ್ನು ಹಿಂಸಾಚಾರವನ್ನು ಅವರು ಸಮರ್ಥಿಸಿದ್ದಾರೆ.

ನಮ್ಮ ದೇಶಕ್ಕೊಂದು ಆಧುನಿಕ ಸಂವಿಧಾನ ದೊರೆಯುವ ಮೊದಲೇ ಕ್ರೈಸ್ತರು ಇಲ್ಲಿ ತಮ್ಮ ಮತ ಪ್ರಚಾರ ಮಾಡಿದ್ದಾರೆ. ಹಿಂದುಗಳನ್ನು, ವಿಶೇಷವಾಗಿ ದಲಿತ, ಹಿಂದುಳಿದ ಜಾತಿಗಳ ಹಿಂದುಗಳನ್ನು ಮತಾಂತರ ಮಾಡಿದ್ದಾರೆ. ಸಂವಿಧಾನ ಪ್ರಾಪ್ತವಾದ ಬಳಿಕವಂತೂ ಮತಾಂತರ ಎಂಬುದು ಒಂದು ಮೂಲಭೂತ ಹಕ್ಕಾಗಿದೆ. ಯಾವುದೇ ಒಬ್ಬ ಭಾರತೀಯ ಪ್ರಜೆ

ಪುಟ 14 ನೋಡಿ


ಕೋಮುವಾದಕ್ಕೆ ವಿರೋಧ - ಜನಪರ ಧೋರಣೆಗಳಿಗಾಗಿ ಹೋರಾಟಗಳ ನೀತಿ ವಿವರಿಸುತ್ತಿರುವ ಸಿಪಿಐ(ಎಂ) ಅಭ್ಯರ್ಥಿ ಬಿ.ಮಾಧವ

ಕಾಂಗ್ರೆಸ್ ನೇತೃತ್ವದ ಸರ್ಕಾರದ ಕೊಡುಗೆ

ಬೆಲೆಯೇರಿಕೆ, ಹಸಿವು ಮತ್ತು ಅಪೌಷ್ಟಿಕತೆ

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳೆರಡೂ 'ಭಾರತ ಪ್ರಕಾಶಿಸುತ್ತಿದೆ', 'ಜೈ ಹೋ', 'ಭಾರತ್ ನಿರ್ಮಾಣ', ಇತ್ಯಾದಿ ಘೋಷಣೆಗಳ ಮೂಲಕ ಜನತೆಯ ಕಣ್ಣಿಗೆ ಮಣ್ಣೆರೆಚಲು ಯತ್ನಿಸುತ್ತಿವೆ. ಇಂಥಹ ನಕಲಿ ಘೋಷಣೆಗಳೊಂದಿಗೆ ತಮ್ಮ ಅಧಿಕಾರವಧಿಯಲ್ಲಿ ದೇಶದ ಅಭಿವೃದ್ಧಿಯು ಬೃಹತ್ ಸ್ವರೂಪದಲ್ಲಿ ಮುನ್ನಡೆಯುತ್ತಿದೆಯೆಂದು ಜೈಘೋಷ ಹಾಕುತ್ತಿವೆಯಾದರೂ ದಿನವೊಂದಕ್ಕೆ ಎರಡು ಹೊತ್ತು ಕೂಳಿಗೂ ಗತಿಯಿಲ್ಲದ ಜನತೆಯ ಸಂಖ್ಯೆ ಮಾತ್ರ ಏರುತ್ತಲಿದೆ.

ಸರ್ಕಾರದ ಅಂಕಿ ಅಂಶಗಳೇ ತಿಳಿಸುವಂತೆ ನಮ್ಮ ದೇಶದ ಶೇ. 77 ರಷ್ಟು ಜನತೆ ದಿನವೊಂದಕ್ಕೆ ಕೇವಲ ರೂ. 20/- ಕ್ಕಿಂತಲೂ ಕಡಿಮೆ ಆದಾಯದ ಮೇಲೆ ಬದುಕುತ್ತಿದ್ದಾರೆ. ಅವರ ಶೇ. 90ಕ್ಕಿಂತಲೂ ಹೆಚ್ಚು ಆದಾಯ ಹೊಟ್ಟೆ ತುಂಬಿಸುವುದಕ್ಕೂ ಸಾಕಾಗುತ್ತಿಲ್ಲ. ಸರ್ಕಾರ ಹಣದುಬ್ಬರ ಇಳಿದಿದೆಯೆಂದು ಗ್ರಾಹಕ ಸೂಚ್ಯಂಕದೆಡೆ ಬೊಟ್ಟು ತೋರುತ್ತಿದ್ದರೂ ಹಲವಾರು ಅತ್ಯಗತ್ಯ ವಸ್ತುಗಳ ಬೆಲೆ ಮಾತ್ರ ಏರುತ್ತಲೇ ಇದೆ. ಹಲವು ಆಹಾರ ಧಾನ್ಯಗಳ ಬೆಲೆ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 11ರಷ್ಟು ಹೆಚ್ಚಿದೆ. ಅಂತರಾಷ್ಟ್ರೀಯ ತೈಲ ಬೆಲೆ ಬ್ಯಾರೆಲ್‌ವೊಂದಕ್ಕೆ 135 ಡಾಲರ್ ಇದ್ದಾಗ ಪೆಟ್ರೋಲ್, ಡೀಸೆಲ್ ಮತ್ತು ಅನಿಲ ಬೆಲೆಯನ್ನು ಏರಿಸಿದ್ದ ಸರ್ಕಾರ ಈಗ ಅದರ ಬೆಲೆ 40 ಡಾಲರಿಗೆ ಇಳಿದಿದ್ದರೂ ಪೆಟ್ರೋಲ್ ಮತ್ತು ಇತರೆ ತೈಲ ಬೆಲೆಗಳು ಮಾತ್ರ ಇನ್ನೂ 2004ನೇ ವರ್ಷದ ಮಟ್ಟಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿವೆ.

ಅಂತರಾಷ್ಟ್ರೀಯ ಆಹಾರ ನೀತಿ ಮತ್ತು ಸಂಶೋಧನಾ ಸಂಸ್ಥೆಯು ತನ್ನ ವರದಿಯಲ್ಲಿ ತಿಳಿಸಿರುವಂತೆ ಜಾಗತಿಕ ಹಸಿವು ಸೂಚ್ಯಂಕ ಪಟ್ಟಿಯಲ್ಲಿರುವ 88 ರಾಷ್ಟ್ರಗಳ ಪೈಕಿ ಭಾರತ 66 ನೇ ಸ್ಥಾನದಲ್ಲಿದ್ದು ತನಗಿಂತ ಕಡಿಮೆ ಜಿಡಿಪಿ (ಆಂತರಿಕ ದೇಶೀಯ ಉತ್ಪನ್ನ) ಹೊಂದಿರುವ ರಾಷ್ಟ್ರಗಳಿಗಿಂತ ಕಳಪೆ ಮಟ್ಟದಲ್ಲಿದೆ. ಆಘಾತಕಾರಿ ಅಂಶವೆಂದರೆ, ಆರ್ಥಿಕವಾಗಿ ಒಳ್ಳೆಯ ಸಾಧನೆ ಮಾಡುತ್ತಿರುವ ಮಧ್ಯಪ್ರದೇಶ, ಗುಜರಾತ್, ಕರ್ನಾಟಕ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳೂ ಕೂಡ ಅತಿ ಹೆಚ್ಚಿನ ಮಟ್ಟದ ಹಸಿವಿನ ಮಟ್ಟವನ್ನು ಹೊಂದಿರುವುದು. ಅತ್ಯಂತ ಕೆಟ್ಟ ಸ್ಥಾನದಲ್ಲಿರುವ ಇತರೆ ರಾಜ್ಯಗಳೆಂದರೆ ಈಶಾನ್ಯ ಮತ್ತು ಕೇಂದ್ರೀಯ ಪ್ರದೇಶಗಳಾದ ಛತ್ತೀಸ್‌ಗಢ, ಬಿಹಾರ, ಜಾರ್ಖಂಡ್ ಮತ್ತು ಮಧ್ಯಪ್ರದೇಶ.

ಗ್ರಾಮೀಣ ಪ್ರದೇಶದ ಶೇ. 80 ರಷ್ಟು, ಮತ್ತು ನಗರ ಪ್ರದೇಶದ ಶೇ. 64ರಷ್ಟು ಜನತೆಗೆ ಅಗತ್ಯ ಕ್ಯಾಲರಿ ಹೊಂದಿರುವ ಆಹಾರ ದೊರೆಯುತ್ತಿಲ್ಲ. ರಕ್ತಹೀನತೆಯಿಂದ ಬಳಲುತ್ತಿರುವ ಭಾರತದ ಅರ್ಧಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಮಹಿಳೆಯರು ಮತ್ತು ಮುಕ್ಕಾಲು ಪಾಲು ಮಕ್ಕಳ ಸಂಖ್ಯೆ ಮಾತ್ರ ಕಳೆದ 8 ವರ್ಷಗಳಿಂದ ಕಡಿಮೆಯೇನೂ ಆಗಿಲ್ಲ. ಕಡಿಮೆ ತೂಕ ಹೊಂದಿರುವ ಮಕ್ಕಳ ಪ್ರಮಾಣ ಶೇ. 48ರಷ್ಟಿದ್ದು ಅದು ಕಳೆದ 20 ವರ್ಷಗಳಿಂದ ಏನೇನೂ ಕಮ್ಮಿಯಾಗಿಲ್ಲ. 2006ರಲ್ಲಿ ಶೇ. 30ರಷ್ಟು ಹಸುಳೆಗಳ ದೇಹ ತೂಕ ಬಹಳ ಕಮ್ಮಿಯಿತ್ತು. ಪ್ರತಿ ಮೂವರು ಯುವಜನತೆಯಲ್ಲಿ ಒಬ್ಬರ ದೇಹ ತೂಕ ಪ್ರಮಾಣ ಶೇ. 18.5ಕ್ಕಿಂತಲೂ ಕಡಿಮೆಯಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತಿಳಿಸುತ್ತದೆ.

ಕ್ಷಿಪ್ರ ಕ್ರಮಬೇಕಿತ್ತು

ಇದಕ್ಕೆ ಪರಿಹಾರವೆಂದರೆ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದು ಮತ್ತು ಆಹಾರ ಧಾನ್ಯಗಳನ್ನು ಲಾಭಗಳಿಸುವುದಕ್ಕಾಗಿ ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸಿಡುವ ಕಂಪನಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು. ಆದರೆ ಯುಪಿಎ ಸರ್ಕಾರ ಇದಕ್ಕೆ ತದ್ವಿರುದ್ಧವಾಗಿ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಹಾಳುಗೆಡವುತ್ತಾ ಕೃಷಿಯಲ್ಲಿ ವ್ಯಾಪಾರ ಮಾಡಲು ಮತ್ತು ಖಾಸಗಿ ಮಾರಾಟಗಾರರು ಬೆಳೆಯಲು ಅವಕಾಶ ಮಾಡಿಕೊಟ್ಟಿತು.

ಹೀಗೆ ಒಂದೆಡೆ ತನ್ನ ಬಂಡವಾಳಶಾಹಿ ಪರ ನೀತಿಗಳ ಮೂಲಕ ಜನತೆಯ ಮೇಲೆ ಯುಪಿಎ ಸರ್ಕಾರ ಧಾಳಿ ನಡೆಸುತ್ತಿದ್ದರೆ, ರಾಜ್ಯದಲ್ಲಿನ ಬಿಜೆಪಿ ಸರ್ಕಾರ ಜನರ ಸಮಸ್ಯೆಗಳತ್ತ ಕಿಂಚಿತ್ತೂ ತಲೆ ಕೆಡಿಸಿಕೊಳ್ಳದೆ ಆಪರೇಷನ್ ಕಮಲ ಜಾರಿ ಮಾಡುತ್ತಾ ಕುಳಿತಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ರಾಜ್ಯ ತೆರಿಗೆಯನ್ನು ಕಡಿತಗೊಳಿಸಿದ್ದಲ್ಲಿ ಜನತೆ ಒಂದಷ್ಟು ಉಸಿರಾಡಬಹುದಿತ್ತು. ಆದರೆ, ಅದು ಖಂಡತುಂಡವಾಗಿ ಇದನ್ನು ತಿರಸ್ಕರಿಸಿತು. ಕರ್ನಾಟಕ ಸಾರಿಗೆ ದರವನ್ನು ನೆಪ ಮಾತ್ರಕ್ಕೆ ಕಡಿತಗೊಳಿಸಿದ್ದರಿಂದ ಜನತೆಯ ಸಂಕಷ್ಟ ಶಮನ ಮಾಡುವಲ್ಲಿ ಅದೂ ಕೂಡ ಏನೇನೂ ಪರಿಣಾಮ ಬೀರದಾಯಿತು.



ಭರವಸೆ ನೀಡಲಾಗಿತ್ತು ಆದರೆ...

ಕಾಂಗ್ರೆಸ್ ಸರ್ಕಾರವು ಎಡಪಕ್ಷಗಳ ಒತ್ತಡಕ್ಕೆ ಮಣಿದು ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಆಹಾರ ಭದ್ರತೆಯ ಖಾತರಿಗಾಗಿ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದಾಗಿ ತಿಳಿಸಿತ್ತು. ಆದರೆ ಸಾರ್ವಜನಿಕ ಪಡಿತರ ವ್ಯವಸ್ಥೆ ಸಾರ್ವತ್ರಿಕಗೊಳಿಸಲು ಮತ್ತು ಅಂತ್ಯೋದಯ ಯೋಜನೆಯನ್ನು ವಿಸ್ತರಿಸಲು ತಗಲುವ ವೆಚ್ಚ ಒಟ್ಟಾರೆ ಜಿಡಿಪಿಯ ಶೇ. 1.6ರಷ್ಟನ್ನು ಮೀರುವುದಿಲ್ಲವಾದರೂ ಕಳೆದ ಐದು ವರ್ಷಗಳ ತನ್ನ ಅಧಿಕಾರವಧಿಯಲ್ಲಿ ಯುಪಿಎ ಸರ್ಕಾರವು ಅದನ್ನು ಜಾರಿಗೊಳಿಸಲೇ ಇಲ್ಲ. ಆದರೆ ಇದೇ ಸರ್ಕಾರ ಕಾಳಸಂತೆಕೋರರು, ಖಾಸಗಿ ಧಾನ್ಯ ಮಾರಾಟಗಾರರು, ಬಹುರಾಷ್ಟ್ರೀಯ ಕೃಷಿವ್ಯಾಪಾರಿ ಕಂಪನಿಗಳಿಗೆ ಎಲ್ಲ ರೀತಿಯ ಲಾಭಗಳಿಸಲು ಮತ್ತು ಕಾರ್ಪೋರೇಟ್ ಹಾಗೂ ನಗರದ ಶ್ರೀಮಂತರಿಗೆ ತೆರಿಗೆ ವಿನಾಯಿತಿಗಳನ್ನು ತಡಮಾಡದೆ ನೀಡಿತು.

ಗುರಿನಿಗದಿತ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಜಾರಿಗೆ ತರಲಾಗಿ ಎಪಿಎಲ್, ಬಿಪಿಎಲ್ ಮತ್ತು ಅಂತ್ಯೋದಯ ಎಂಬ ಮೂರು ವಿಂಗಡನೆಗಳನ್ನು ಮಾಡಲಾಯಿತು. ಇದೆಷ್ಟು ಹೊಣೆಗೇಡಿ ವಿಧಾನವೆಂದರೆ, ಪಡಿತರ ವ್ಯವಸ್ಥೆಯಿಂದ ಹಲವು ಕೋಟಿ ಬಡಜನತೆಯನ್ನು ಹೊರಗಿಡುವಲ್ಲಿ ಇದು ಯಶಸ್ವಿಯಾಯಿತು. ಉದಾಹರಣೆಗೆ, ಒಂದು ಕುಟುಂಬದಲ್ಲಿ ದಿನಕ್ಕೆ ಎರಡು ಹೊತ್ತು ಊಟ ಮಾಡಬಲ್ಲವರನ್ನು, ಒಂದು ಕುಟುಂಬದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದರೆ ಅಂತಹವರನ್ನು ಬಡವರಲ್ಲವೆಂದು ತೀರ್ಮಾನಿಸಲಾಗುತ್ತಿದೆ. ಪ್ರಸ್ತುತದಲ್ಲಿ, ಯೋಜನಾ ಆಯೋಗದ ಪ್ರಕಾರ ದಿನವೊಂದಕ್ಕೆ ಗ್ರಾಮೀಣ ಪ್ರದೇಶದಲ್ಲಿ ರೂ. 11.80 ಮತ್ತು ನಗರ ಪ್ರದೇಶದಲ್ಲಿ ರೂ. 17.80 ಗಳಿಸುತ್ತಿದ್ದರೆ ಅಂತಹ ಕುಟುಂಬವನ್ನು ಮಾತ್ರವೇ ಬಡತನ ರೇಖೆಯಿಂದ ಕೆಳಗಿರುವವರು ಎಂದು ಪರಿಗಣಿಸಲಾಗುತ್ತದೆ.

ಯುಪಿಎ ಸರ್ಕಾರ ಜನತೆಗೆ ನೀಡಿದ ಅತ್ಯಂತ ಮಹತ್ವದ ಕೊಡುಗೆಯೆಂದರೆ ರಾಜ್ಯಗಳಿಗೆ ತಾನು ವಿತರಿಸುತ್ತಿದ್ದ ಆಹಾರ ಧಾನ್ಯಗಳ ಹಂಚಿಕೆಯನ್ನು ಸುಮಾರು ಶೇ. 73.4 ರಷ್ಟು ಅಂದರೆ 325 ಲಕ್ಷ ಟನ್‌ಗಳನ್ನು ಕಡಿತಗೊಳಿಸಿದ್ದು! ಅಲ್ಲದೆ ಪ್ರತಿ ಕುಟುಂಬಕ್ಕೆ ತಿಂಗಳೊಂದಕ್ಕೆ ನೀಡುತ್ತಿದ್ದ 35 ಕೆಜಿ ಧಾನ್ಯಕ್ಕೆ ಬದಲಾಗಿ ಕೇವಲ 20 ಕೆಜಿ ನೀಡಲಾರಂಭಿಸಿತು.

ಕೇಂದ್ರ ಸರ್ಕಾರ ರೈತರು ಬೆಳೆದ ಆಹಾರ ಧಾನ್ಯಗಳನ್ನು ಕಾಲಕಾಲಕ್ಕೆ ಸರಿಯಾಗಿ ಕನಿಷ್ಟ ಬೆಂಬಲ ಬೆಲೆ ನೀಡಿ ಖರೀದಿಸಿ ಅದನ್ನು ಪಡಿತರ ವ್ಯವಸ್ಥೆ ಮೂಲಕ ಜನತೆಗೆ ವಿತರಿಸಿದ್ದಲ್ಲಿ ಸಮಸ್ಯೆ ಇಷ್ಟೊಂದು ಉಲ್ಬಣಿಸುತ್ತಿರಲಿಲ್ಲ. ಬದಲಿಗೆ ಅದು ರೈತರು ಬೆಳೆದ ಆಹಾರ ಧಾನ್ಯಗಳಿಗೆ ಬೆಂಬಲ ಬೆಲೆ ನೀಡದ್ದರಿಂದ ಒಂದೆಡೆ ರೈತರು ತಾವು ಬೆಳೆದ ಫಸಲನ್ನು ಕಳಪೆ ಬೆಲೆಗೆ ಮಾರುತ್ತಾ ದಿವಾಳಿಯಾಗುತ್ತಿದ್ದಾರೆ, ಮತ್ತೊಂದೆಡೆ ಪಡಿತರ ವ್ಯವಸ್ಥೆಯಲ್ಲಿ ಸಂಗ್ರಹಿಸಿಟ್ಟ ಕಳಪೆ ಗುಣಮಟ್ಟದ ಆಹಾರಧಾನ್ಯ ಮಾತ್ರ ಗ್ರಾಹಕರಿಗೆ ದೊರೆಯುವಂತಾಗಿದೆ.

2005ರಿಂದ 2007-08ರವರೆಗೆ ಭಾರತದ ಆಹಾರಧಾನ್ಯ ಸಂಗ್ರಹಣೆಯು ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. ಜಾಗತಿಕ ಮುಂಗಡ ಮಾರುಕಟ್ಟೆಯಲ್ಲಿ ಗೋಧಿಯು ಬಹಳ ಆಕರ್ಷಣೆಯಿಂದ ಜೂಜಾಡುವ ಧಾನ್ಯವಾಗಿದೆ. ಗೋಧಿಸಂಗ್ರಹಣೆ ಪ್ರಮಾಣ ಭಾರತದಲ್ಲಿ ಕಡಿಮೆಯಿದ್ದರಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಗೋಧಿ ಬೆಲೆ ಏರಿತ್ತು. ಈ ಹಿನ್ನಲೆಯಲ್ಲಿ ಗೋಧಿಯನ್ನು ಇನ್ನಷ್ಟು ಸಂಗ್ರಹಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿರಬೇಕಿತ್ತು. ಆದರೆ, ಭತ್ತ ಮತ್ತು ಗೋಧಿಯ ಉತ್ಪನ್ನ ಪ್ರಮಾಣ ಏರಿಕೆಗೊಂಡರೂ ಶೇ. 22.5 ರಷ್ಟು ಹೆಚ್ಚಿಗೆ ಭತ್ತವನ್ನು ಖರೀದಿಸಿದ ಸರ್ಕಾರ ಗೋಧಿ ಖರೀದಿಯನ್ನು ಶೇ. 46ರಷ್ಟು ಕಡಿತಗೊಳಿಸಿತು.

ಪರ್ಯಾಯಗಳು:

1. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಣಗೊಳಿಸಿ, ಬಲಪಡಿಸಬೇಕು. ಕಾಳುಗಳು, ತೈಲ ಮತ್ತು ಸಕ್ಕರೆ ಸೇರಿದಂತೆ 14 ಅತ್ಯವಶ್ಯ ವಸ್ತುಗಳನ್ನು ಪಡಿತರ ವ್ಯವಸ್ಥೆ ಮೂಲಕ ವಿತರಿಸಬೇಕು.
2. ಖಾಸಗಿ ಕಂಪನಿಗಳು ಆಹಾರ ಧಾನ್ಯ ಖರೀದಿಸುವುದನ್ನು ನಿಷೇಧಿಸಬೇಕು, ಪಾರ್ಲಿಮೆಂಟ್ ಸ್ಥಾಯಿ ಸಮಿತಿಯ ಶಿಫಾರಸ್ಸಿನ ಅನ್ವಯ ಅತ್ಯವಶ್ಯ ವಸ್ತುಗಳನ್ನು ಲಾಭಕ್ಕಾಗಿ ನಡೆಸುವ ಮುಂಗಡ ಮಾರುಕಟ್ಟೆಯಿಂದ ನಿಷೇಧಿಸಬೇಕು. ಖಾಸಗಿ ಕಂಪನಿಗಳು ಮತ್ತು ವ್ಯಾಪಾರಗಾರರು ಹಾಗೂ ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.
3. ತಪ್ಪು ಲೆಕ್ಕಾಚಾರದ ಬಡತನ ಮಟ್ಟವನ್ನು ರದ್ದುಗೊಳಿಸಿ, ಪ್ರಸ್ತುತ ಬಡತನ ಆಧಾರದ ಮೇಲೆ ಅದನ್ನು ಪರಿಷ್ಕರಿಸಬೇಕು.
4. ಏರುತ್ತಿರುವ ಅಂತರಾಷ್ಟ್ರೀಯ ಬೆಲೆಗಳು ಭಾರತೀಯ ಗ್ರಾಹಕರ ಮೇಲೆ ದುಷ್ಪರಿಣಾಮ ಬೀರದಂತೆ ತಡೆಗಟ್ಟಬೇಕು; ಪೆಟ್ರೋಲ್ ಉತ್ಪನ್ನಗಳ ಮೇಲಿನ ಅಬಕಾರಿ ಮತ್ತು ಸೀಮಾ ಸುಂಕವನ್ನು ಇಳಿಸಬೇಕು. ಖಾಸಗಿ ತೈಲ ಕಂಪನಿಗಳು ಮತ್ತು ದೈತ್ಯಾಕಾರದ? ಆಟೋಮೋಬೈಲ್ ಕಂಪನಿಗಳ ಲಾಭದ ಮೇಲೆ ತೆರಿಗೆ ವಿಧಿಸಬೇಕು.



ರಾಜ್ಯಗಳ ಸುತ್ತು

ರಾಷ್ಟ್ರ ರಾಜಕಾರಣಕ್ಕೆ ಮಹತ್ವದ ತಿರುವು ನೀಡಬಲ್ಲ ಫಲಿತಾಂಶವನ್ನು ಆಂಧ್ರದಿಂದ ನಿರೀಕ್ಷಿಸಲಾಗಿದೆ.

ಕಾಂಗ್ರೆಸ್ ಮತ್ತು ಬಿಜೆಪಿಗಳ 'ರಾಷ್ಟ್ರೀಯ ಕೂಟ'ಗಳು ಒಡೆದು ಹೋದ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದಲ್ಲಿ ಮೂಡಿ ಬಂದ ಮೈತ್ರಿಕೂಟಗಳು, ಹಲವು ಪ್ರಾಂತೀಯ ಪಕ್ಷಗಳು ಈ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಪ್ರತೀ ರಾಜ್ಯದ ವಿಶಿಷ್ಟ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸೇತರ ಜಾತ್ಯತೀತ ಮೈತ್ರಿಕೂಟಗಳು ಮೂಡಿ ಬಂದಿರುವುದು ಈ ಬಾರಿಯ ವಿಶೇಷ. ಕೆಲವು ರಾಜ್ಯಗಳಲ್ಲಿ ಕೆಲವು ಕ್ಷೇತ್ರಗಳನ್ನು ಬಿಟ್ಟರೆ ಬಿಜೆಪಿ ಕಾಂಗ್ರೆಸ್‌ಗಳ ನೇರ 'ದ್ವಿಮುಖ ಸ್ಪರ್ಧೆ' ಅಪರೂಪವಾಗಿರುವುದು ಇನ್ನೊಂದು ವಿಶೇಷ. ಈ ಬಾರಿ ಚುನಾವಣೆ ಚಿತ್ರವನ್ನೇ ಬದಲಾಯಿಸಿದ ಆಂಧ್ರ ಪ್ರದೇಶದ ಒಂದು ಸುತ್ತು.

ಆಂಧ್ರ ಪ್ರದೇಶ – ಒಂಟಿಯಾದ ಕಾಂಗ್ರೆಸ್, ಐಕ್ಯ ವಿರೋಧಿ ರಂಗ

ಆಂಧ್ರ ಪ್ರದೇಶದಲ್ಲಿ ಮೂಡಿ ಬಂದ ವಿರೋಧ ಪಕ್ಷಗಳ ಕೂಟವೇ ಒಂದು ರೀತಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲೂ ಮೂರನೇ ಬದಲಿ ಮೂಡಿಸಿ ಕಾಂಗ್ರೆಸ್ ಮತ್ತು ಬಿಜೆಪಿಗಳ 'ರಾಷ್ಟ್ರೀಯ ಕೂಟ'ಗಳಿಗೆ ಸವಾಲು ಎಸೆಯಿತು. ನಾಲ್ಕು ಪಕ್ಷಗಳ-ತೆಲುಗು ದೇಶಂ, ಸಿ.ಪಿ.ಐ.(ಎಂ.), ಸಿ.ಪಿ.ಐ. ಮತ್ತು ಟಿ.ಆರ್.ಎಸ್. (ತೆಲಂಗಾಣಾ ರಾಷ್ಟ್ರೀಯ ಸಮಿತಿ) - ಮೈತ್ರಿಕೂಟ ರಚನೆಯೊಂದಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಒಂಟಿಯಾಗಿವೆ. ಕಾಂಗ್ರೆಸ್ ಪ್ರಬಲ ವಿರೋಧ ಎದುರಿಸಬೇಕಾಗಿದೆ. ಆಂಧ್ರ ಪ್ರದೇಶದಲ್ಲಿ ಲೋಕಸಭೆ ಜತೆ ವಿಧಾನ ಸಭೆಗೂ ಚುನಾವಣೆ ನಡೆಯುತ್ತಿದ್ದು ಇದು ಗಮನಾರ್ಹ ಬೆಳವಣಿಗೆ ಆಗಿದೆ. ಬಿಜೆಪಿ ಯಾವುದೇ ಮಿತ್ರಪಕ್ಷಗಳಿಲ್ಲದೆ ರಾಜ್ಯ ಚುನಾವಣೆಗಳಲ್ಲಿ ಅಪ್ರಸ್ತುತವಾಗಿದೆ. ಮಾತುಕತೆಗಳ ನಂತರ ಲೋಕಸಭೆ ಮತ್ತು ವಿಧಾನಸಭೆ ಎಲ್ಲಾ ಸೀಟುಗಳಿಗೆ ಮೈತ್ರಿಕೂಟ ಸ್ಪರ್ಧಿಸುತ್ತಿದ್ದು ಈ ಕೆಳಗಿನಂತೆ ಸೀಟು ಹಂಚಿಕೆ ಆಗಿದೆ.

ಪಕ್ಷ	ಲೋಕ ಸಭೆ	ವಿಧಾನ ಸಭೆ
ತೆಲುಗು ದೇಶಂ	29	219
ಟಿ.ಆರ್.ಎಸ್.	9	44
ಸಿ.ಪಿ.ಐ.(ಎಂ)	2	17
ಸಿ.ಪಿ.ಐ.	2	14

ಸಿ.ಪಿ.ಐ.(ಎಂ) ಸ್ಪರ್ಧಿಸುತ್ತಿರುವ ಲೋಕಸಭಾ ಕ್ಷೇತ್ರಗಳು ಈ ಕೆಳಗಿನಂತಿವೆ

ಭೋಂಗೀರ್‌ನೊಮುಲ ನರಸಿಂಹಯ್ಯ

ಅರಕು (ಮೀಸಲು - ಆದಿವಾಸಿ) ಡಾ. ಎಂ. ಬಾಬ

2004 ರ ಚುನಾವಣೆಗಳಲ್ಲಿ ಪ್ರಮುಖ ಪಕ್ಷಗಳ ಶೇಕಡಾ ಮತಗಳಿಕೆಯ ಹಿನ್ನೆಲೆಯಲ್ಲಿ ಮೈತ್ರಿಕೂಟದ ಮಹತ್ವ ತಿಳಿಯುತ್ತದೆ. ಕಾಂಗ್ರೆಸ್ ತನ್ನ ಮತಗಳಿಕೆ ಉಳಿಸಿಕೊಂಡರೂ ಸೋಲುವುದು ಖಚಿತ. ಅದು ಅಲ್ಲೇ ನಿಲ್ಲಲೂ ಓಡಬೇಕಾಗಿದೆ. ಓಡಿದರೂ ದಡ ಮುಟ್ಟಲಿಕ್ಕಿಲ್ಲ.

	ಕಾಂಗ್ರೆಸ್	ತೆಲುಗುದೇಶಂ	ಟಿ.ಆರ್.ಎಸ್.	ಎಡ ಪಕ್ಷಗಳು	ವಿರೋಧಿ ಮೈತ್ರಿಕೂಟ
2004 ಲೋಕಸಭೆ					
ಶೇ. ಮತದಾನ	41.56	33.12	6.83	4.4	44.35
ಸೀಟುಗಳು	29	5	5	2	
2004 ವಿಧಾನಸಭೆ					
ಶೇ. ಮತದಾನ	38.56	37.59	6.68	4.4	48.67
ಸೀಟುಗಳು	185	47	26	15	

ಸೀಟು ಹೊಂದಾಣಿಕೆ ಮಾಡಿದ್ದು ಮಾತ್ರವಲ್ಲದೆ ಮೈತ್ರಿಕೂಟ ಹೆಚ್ಚು ಕಡಿಮೆ ಪ್ರತೀ ಜಿಲ್ಲೆಯಲ್ಲೂ ಜಂಟಿ ಚುನಾವಣಾ ರ್‍ಯಾಲಿ ಮತ್ತು ಪ್ರಚಾರ ಹಮ್ಮಿಕೊಂಡಿದೆ. ಕಾಂಗ್ರೆಸ್‌ನ ದುರಾಡಳಿತದ ಬಗ್ಗೆ ಟೀಕಾ ಪ್ರಹಾರ ಮಾಡಿದೆ. ಕಳೆದ ಬಾರಿ ಹಲವು ಆಶ್ವಾಸನೆಗಳಿಂದ ಜಯಭೇರಿ ಹೊಡೆದ ಕಾಂಗ್ರೆಸ್ ಅವು ಯಾವನ್ನೂ ಜಾರಿ ಮಾಡದೆ ದುರ್ಬಲ ಪರಿಸ್ಥಿತಿಯಲ್ಲಿದೆ. ವಿಶ್ವಬ್ಯಾಂಕಿನ ಜತೆ ಒಪ್ಪಂದಗಳ ಪುನರ್ವಿಮರ್ಶೆ ಮಾಡುವ ಬದಲು ಕುಡಿಯುವ ನೀರು ಮತ್ತು ನೀರಾವರಿಗೆ ಜನ ಬೆಲೆ ತೆರಬೇಕಾದ ಇನ್ನಷ್ಟು ಅಪಾಯಕಾರಿ ಶರತ್ತುಗಳ ಹೊಸ ಒಪ್ಪಂದಗಳನ್ನು ಮಾಡಿಕೊಂಡಿದೆ. ಕೃಷಿಗೆ ಸತತ ಮತ್ತು ಉಚಿತ ವಿದ್ಯುತ್ ಪೂರೈಕೆ ಜನಪ್ರಿಯ ಭರವಸೆಯಾಗಿ ಉಳಿದಿದೆ. ರೈತರ ಸಂಕಟಗಳು ಮತ್ತು ಆತ್ಮಹತ್ಯೆಗಳು ಮುಂದುವರೆದಿವೆ. ಮುಖ್ಯಮಂತ್ರಿ ಮಗ ಜಗನ್ ಮತ್ತು ಇತರ ಸಂಬಂಧಿಗಳಿಗೆ ಮಿತ್ರರಿಗೆ ದೊಡ್ಡ ಸರ್ಕಾರೀ ಕಾಂಟ್ರಾಕ್ಟುಗಳು ಮತ್ತು ಹಣ ದುರ್ಬಳಕೆ ಮಾಡಿದ ಜಲಯಗ್ನಂ, ಜಗತಿ ಪಬ್ಲಿಕೇಶನ್ಸ್, ಸತ್ಯಂ-ಮೈತಾಸ್ ಮುಂತಾದ ಹಲವು ಕರ್ಮಕಾಂಡಗಳ ಮೂಲಕ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರವನ್ನು ಹೊಸ ಎತ್ತರಗಳಿಗೆ ಒಯ್ದಿದೆ. ವಸತಿ ನಿವೇಶನಗಳ ಬೇಡಿಕೆ ಮುಂತಾದ ಜನರ ಸಮಸ್ಯೆಗಳ ಸುತ್ತ ತೀವ್ರ ಚಳುವಳಿಗಳ ಕ್ರೂರ ದಮನ ಸಹ ಸರ್ಕಾರ ಕುಖ್ಯಾತಿ ಹೆಚ್ಚಿಸಿದೆ. ಕಾಂಗ್ರೆಸ್ ನೀತಿಗಳ ವಿರು ಈ ರಾಜಕೀಯ ಹೋರಾಟ ರಾಜ್ಯದ ಜನತೆ ಗಮನ ಸೆಳೆದಿದೆ. ಕಾಂಗ್ರೆಸ್ ತನ್ನ ಪ್ರಚಾರವ ಬೇಗನೇ ಆರಂಭಿಸಿದ್ದರೂ ಅದರಿಂದ ಏನ ಪ್ರಯೋಜನ ಆಗುತ್ತಿಲ್ಲ. ಕಾಂಗ್ರೆಸ್ ಗೆ ಜನ ಬೆಂಬಲ ಉತ್ಸಾಹ ಕಾಣುತ್ತಿಲ್ಲ. ಆದ್ದರಿಂದ ಅ ತನ್ನ ಎಂದಿನ ಹಣ-ಹೆಂಡದ ಆಮಿಷದ ಪ್ರಸಾರ ತಂತ್ರಕ್ಕೆ ಮೊರೆ ಹೋಗಬೇಕಾಗಿದೆ. ಇತ್ತೀಚ ಸಿ.ಪಿ.ಐ.(ಎಂ) ಸ್ಪರ್ಧಿಸುತ್ತಿರುವ ಖಮ್ಮಂ ಜಿಲ್ಲೆ ಮದಿರಾ ವಿಧಾನಸಭಾ ಕ್ಷೇತ್ರದಲ್ಲಿ ನಡೆ ರ್‍ಯಾಲಿಯಲ್ಲಿ ರೂ. 200 , ಬಿರಿಯಾನಿ ಪ್ಯಾಕೆಟ ಮತ್ತು ಹೆಂಡದ ಬಾಟಲಿಯನ್ನು ಹಂಚಿತ ಹಲವು ಕಡೆ ಮೈತ್ರಿಕೂಟದ ದೃಢ ವಿರೋಧದಿಂ ಸಿಕ್ಕಿ ಹಾಕಿಕೊಂಡಿದೆ.

ಜನಪ್ರಿಯ ನಟ ಚಿರಂಜೀವಿ ಅವರ 'ಪ್ರಜ ರಾಜ್ಯಂ' ಪಕ್ಷ ರಾಜ್ಯದ ಚುನಾವಣೆಯಲ್ಲಿ ಹೊ ಅಂಶ. ಅವರ ಪಕ್ಷ ರಾಜ್ಯ ಮಟ್ಟದಲ್ಲಿ ಒಂದ ಶಕ್ತಿಯಾಗದೆ ಅದರ ಬಲ ಕೆಲವು ಕರಾವ ಜಿಲ್ಲೆಗಳಿಗೆ ಮತ್ತು ಒಂದು ಕೋಮಿ ಸೀಮಿತವಾಗಿದೆ. ಈ ಪಕ್ಷದ ನಾಯಕರ ಹಲವರು ಟಿ.ಡಿ.ಪಿ. ಮತ್ತು ಕಾಂಗ್ರೆಸ ಭಿನ್ನಮತೀಯರಾಗಿದ್ದು ಹೊಸ ನಾಯಕತ್ವದ ದೊರಕಬಹುದಾಗಿದ್ದ ಉತ್ಸಾಹ ಬೆಂಬಲ ಅದ ಸಿಗುವ ಸಾಧ್ಯತೆ ಕಡಿಮೆ. ಚುನಾವಣೆ ಹತ್ತಿ ಹತ್ತಿರ ಬಂದಾಗ ಎಷ್ಟೋ ಜನ ಪ್ರಮುಖ ಮುಖಂಡರು ಪ್ರಜಾರಾಜ್ಯಂ ಪಕ್ಷ ಬಿಟ ಹೋಗಿದ್ದಾರೆ. ಸಾಕಷ್ಟು ಮತಗಳಿಸಿದರೆ 'ಪ್ರಜ ರಾಜ್ಯಂ' ಕಾಂಗ್ರೆಸ್ ಮತಗಳನ್ನು ತಿಂದ ಹಾಕುವ ಸಾಧ್ಯತೆಯೇ ಹೆಚ್ಚು. ಮೈತ್ರಿಕೂಟದ ನಾಲ್ಕು ಪಕ್ಷಗಳ ಒಟ್ಟು ರಾಜಕೀಯ ಬಲದ ಮುಂದೆ ಬಿಜೆಪಿ ಇಡೀ ರಾಜ್ಯದಲ್ಲಿ ಒಂಟಿ ಸ್ಪರ್ಧೆ ಅಥವಾ ಪ್ರಜಾರಾಜ್ಯಂ ಕಾಂಗ್ರೆಸ್-ವಿರೋಧಿ ಮತಗಳನ್ನು ಕಸಿದು ಕೊಳ್ಳದು. ವಿಧಾನಸಭೆ ಚುನಾವಣೆಗಳಲ್ಲಿ ಅಧಿಕಾರ ಮತ್ತು ಹಲವು ಲೋಕಸಭಾ ಸೀಟುಗಳನ್ನು ಕಳೆದು ಕೊಳ್ಳುವುದು ಖಚಿತ.

ಮೇ ದಿನ - 2009.....

ಪುಟ 5 ರಿಂದ

ಮೇದಿನದ ವೇಳೆಗೆ ವಿಯೆಟ್ನಾಮಿನಲ್ಲಿ ಅಮೆರಿಕಾದ ಸೇನೆಯ ಪೂರ್ಣ ಪ್ರಮಾಣದ ಪರಾಭವವಾಗುವಾಗ ಭಾರತದಲ್ಲಿ ಮೇದಿನ ಎಂತಹ ಪ್ರಮಾಣ ತಲುಪಿತ್ತೆಂದರೆ ಏಕಪಕ್ಷ ಆಳ್ವಿಕೆಗೆ ಸವಾಲು ಹಾಕಿ 1977ರಲ್ಲಿ ಏಕಪಕ್ಷ ಆಳ್ವಿಕೆ ಸುಮಾರಾಗಿ ಕೊನೆಗೊಳ್ಳುವಂತಾಯಿತು.

ಕರ್ನಾಟಕದಲ್ಲಿ ಹೋರಾಟ ಪರ್ವ

> ಸಮಾಜದ ಕೆಡುಕುಗಳಿಗೆ ಸಮಾಜವಾದ ಮಾತ್ರವೇ ಪರಿಹಾರ, ಅದು ಸ್ಥಾಪನೆಗೊಂಡಾಗ ನಮ್ಮ ಚರಿತ್ರೆಯಲ್ಲಿ ಅದನ್ನು ರಕ್ಷಿಸುವ ಮತ್ತು ಬೆಳೆಸುವ ಒಂದು ಹೊಸ ಘಟ್ಟ ಆರಂಭವಾಗುತ್ತದೆ. ಇದೇ ಇತಿಹಾಸ, ವರ್ಗ ಹೋರಾಟಗಳ ಇತಿಹಾಸ. ಈ ನಿಟ್ಟಿನಲ್ಲಿ ಮೇದಿನ ಆಂದೋಲನ ಒಂದು ಮಹತ್ವಪೂರ್ಣ ಹೆಜ್ಜೆಯಷ್ಟೇ.

ಇಲ್ಲಿ ಕರ್ನಾಟಕದಲ್ಲಿ, ಬೆಂಗಳೂರು 1971ರಲ್ಲಿ ಅತ್ಯಂತ ಪ್ರಕ್ಷುಬ್ಧ ಮೇದಿನವನ್ನು ಕಂಡಿತು. ನಂತರ ಸುಮಾರಾಗಿ ಪ್ರತಿವರ್ಷ 1983ರಲ್ಲಿ ಇಲ್ಲಿಯೂ ಏಕಪಕ್ಷ ಆಳ್ವಿಕೆ ಕೊನೆಗೊಳ್ಳುವ ವರೆಗೆ ಇದೇ ರೀತಿ ಸಾಗಿತು. 1983ರಲ್ಲಿ ನಾವು ಸಮಾನ ಕನಿಷ್ಟ ಕೂಲಿಗಳ ಪ್ರಶ್ನೆಯನ್ನೆತ್ತಿ ಹೋರಾಟವನ್ನು ಮೇಲಟ್ಟಕ್ಕೆ ಏರಿಸಲು ಪ್ರಯತ್ನಿಸಿದೆವು. ಆದರೂ ಪ್ರತಿವರ್ಷವೂ ಒಂದಿಲ್ಲೊಂದು ಕಾರಣದಿಂದ ನಮಗೆ ಅದರಲ್ಲಿ ಇದುವರೆಗೆ ಯಶಸ್ಸು ಸಿಕ್ಕಿಲ್ಲ. ಮೇದಿನ 2009 ಕೂಡಾ ದುಡಿಯುವ ಜನಗಳ ಸರ್ವಸಾಮಾನ್ಯ ಬೇಡಿಕೆಗಳನ್ನು ಘೋಷಿಸಿ ಹೋರಾಟ ನಡೆಸುವ ದಿನವಾಗದೆ ಆಚರಿಸಲ್ಪಡುತ್ತಿದೆ.

ಈಗ 15ನೇ ಲೋಕಸಭಾ ಚುನಾವಣೆಗಳು ನಡೆಯುತ್ತಿರುವುದರಿಂದ, ನಾವು ಸಪ್ಟೆಂಬರ್ 2009ರಲ್ಲಿ ಅಕುಶಲ ಕಾರ್ಮಿಕರಿಗೆ ಕರ್ನಾಟಕ ರಾಜ್ಯದಾದ್ಯಂತ 6000ರೂ. ಮತ್ತು ಬೆಂಗಳೂರು ಮಹಾಪಾಲಿಕೆ ಪ್ರದೇಶದಲ್ಲಿ 10000ರೂ. ಸಮಾನ ಕನಿಷ್ಟ ಕೂಲಿಗೆ ಒಂದು ಬಲಿಷ್ಟ ಹೋರಾಟವನ್ನು ನಡೆಸಲು ಸಿದ್ಧತೆ ನಡೆಸಬೇಕೆಂದು ನಿರ್ಧರಿಸಿದ್ದೇವೆ. ಅದೇ ವೇಳೆಗೆ ಸಾಮಾಜಿಕ ಭದ್ರತಾ ಹಕ್ಕುಗಳಿಗೆ ಅಂದರೆ ಕೆಲಸ ಕೊಡದಿದ್ದಾಗ ಬದುಕುಳಿಯುವ ಭತ್ಯೆ, ಕಾರ್ಮಿಕ ಕಾಯಿಲೆಯಿಂದ ಕೆಲಸ ಮಾಡದಾದಾಗ ಅನಾರೋಗ್ಯ ಭತ್ಯೆ ಹಾಗೂ ನಿವೃತ್ತನಾದಾಗ ಪೆನ್ಶನ್, ಇವನ್ನೆಲ್ಲಾ ಕೂಲಿದರಗಳ ಅರ್ಧದಷ್ಟು ಕೊಡಬೇಕು ಎಂಬ ಬೇಡಿಕೆಯನ್ನು ಕೂಡ ಮುಂದಿಡುತ್ತಿದ್ದೇವೆ. ಈ ಹೋರಾಟವನ್ನು ಸಾರ್ವತ್ರಿಕ ಪಡಿತರ ಹಾಗೂ ಪುಕ್ಕಟೆ ನಿವೇಶನ/ಸಬ್ಸಿಡಿಹೊಂದಿರುವ ವಸತಿ ವ್ಯವಸ್ಥೆಗಾಗಿ ಹೋರಾಟದೊಂದಿಗೆ ಬೆಸೆಯಲಾಗುವುದು. ಇವನ್ನು ಈಡೇರಿಸಿಕೊಳ್ಳದೆ ಸರಕಾರದೊಂದಿಗೆ ರಾಜಿ ಮಾಡಿಕೊಳ್ಳದ ರೀತಿಯಲ್ಲಿ ಈ ಬೇಡಿಕೆಗಳನ್ನು ಎತ್ತಲಾಗುವುದು.

ಇಪ್ಪತ್ತೊಂದನೇ ಶತಮಾನ ನಮ್ಮಲ್ಲಿ ಹೊಸ ಆಸೆಗಳನ್ನು, ಶೋಷಣೆಯಿಂದ ಮುಕ್ತವಾದ ಒಂದು ಸಮಾಜವನ್ನು ತರುವ ಗುರಿಸಾಧನೆಗೆ ಮತ್ತೆ ನಮ್ಮನ್ನು ಸಮರ್ಪಿಸಿಕೊಳ್ಳುವ, ಹೋರಾಟ ನಡೆಸುವ ಆಸೆಯನ್ನು ಚಿಗುರಿಸಿದೆ. ಆ ನಿಟ್ಟಿನಲ್ಲಿ, ಸಮಾಜವಾದದ ಗುರಿಸಾದನೆಗೆ ನಮ್ಮನ್ನು ಮತ್ತೊಮ್ಮೆ ಸಮರ್ಪಿಸಿಕೊಳ್ಳೋಣ, ನಮ್ಮ ಜನಗಳಿಗಾಗಿ ಇದನ್ನು ಈಡೇರಿಸಿಕೊಳ್ಳಲ ಅವಿಶ್ರಾಂತವಾಗಿ ದುಡಿಯೋಣ.

ಜಗತ್ತಿನಾದ್ಯಂತ ಜನರು ತಮ್ಮ ಜೀ ಪರಿಸ್ಥಿತಿಗಳನ್ನು ನಿರ್ಧರಿಸಿಕೊಳ್ಳಲು ಹೋರಾ ನಡೆಸಲೇಬೇಕಾಗಿ ಬಂದಿದೆ. ಬಂಡವಾಳಶಾ ಇನ್ನು ಮುಂದೆ ನಮ್ಮನ್ನು ಉಳಿಸುವುದಿಲ್ಲ, ಅದ ಸಮಾಜಕ್ಕೆ ಪ್ರಯೋಜನಕಾರಿಯ ಆಗಿರುವುದಿಲ್ಲ ಎಂದು ಜನರು ಖಂಡಿತ ಕಲಿಯುತ್ತಾರೆ.

ಸಮಾಜದ ಕೆಡುಕುಗಳಿಗೆ ಸಮಾಜವಾದ ಮಾತ್ರವೇ ಪರಿಹಾರ, ಅದು ಸ್ಥಾಪನೆಗೊಂಡಾ ನಮ್ಮ ಚರಿತೆಯಲ್ಲಿ ಅದನ್ನು ರಕ್ಷಿಸುವ ಮತ್ತ ಬೆಳೆಸುವ ಒಂದು ಹೊಸ ಘಟ್ಟ ಆರಂಭವಾಗುತ್ತದೆ. ಇದೇ ಇತಿಹಾಸ, ವರ್ಗ ಹೋರಾಟಗಳ ಇತಿಹಾಸ. ಈ ನಿಟ್ಟಿನಲ್ಲಿ ಮೇದಿನ ಆಂದೋಲನ ಒಂದು ಮಹತ್ವಪೂರ್ಣ ಹೆಜ್ಜೆಯಷ್ಟೇ.

ಮೇ ದಿನ ಚಿರಾಯುವಾಗಲಿ! ವಿಶ್ವದ ಕಾರ್ಮಿಕ ವರ್ಗ ಒಂದಾಗಲಿ! ನಿವ ಸಂಕೋಲೆಗಳನ್ನಲ್ಲದೆ ಬೇರೇನನ್ನೂ ನೀವ ಕಳಕೊಳ್ಳುವುದಿಲ್ಲ!



ರಾಜ್ಯಗಳ ಸುತ್ತು

ಒರಿಸ್ಸಾ, ಬಿಹಾರಗಳಲ್ಲಿ ಮೂರನೇ ಪರ್ಯಾಯ

ಕಾಂಗ್ರೆಸ್ ಮತ್ತು ಬಿಜೆಪಿಗಳ 'ರಾಷ್ಟ್ರೀಯ ಕೂಟ'ಗಳು ಒಡೆದು ಹೋದ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದಲ್ಲಿ ಮೂಡಿ ಬಂದ ಮೈತ್ರಿಕೂಟಗಳು, ಹಲವು ಪ್ರಾಂತೀಯ ಪಕ್ಷಗಳು ಈ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಪ್ರತೀ ರಾಜ್ಯದ ವಿಶಿಷ್ಟ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸೇತರ ಜಾತ್ಯತೀತ ಮೈತ್ರಿಕೂಟಗಳು ಮೂಡಿ ಬಂದಿರುವುದು ಈ ಬಾರಿಯ ವಿಶೇಷ. ಕೆಲವು ರಾಜ್ಯಗಳಲ್ಲಿ ಕೆಲವು ಕ್ಷೇತ್ರಗಳನ್ನು ಬಿಟ್ಟರೆ ಬಿಜೆಪಿ ಕಾಂಗ್ರೆಸ್‌ಗಳ ನೇರ 'ದ್ವಿಮುಖ ಸ್ಪರ್ಧೆ' ಅಪರೂಪವಾಗಿರುವುದು ಇನ್ನೊಂದು ವಿಶೇಷ. ಈ ಬಾರಿ ಚುನಾವಣೆ ಚಿತ್ರವನ್ನೇ ಬದಲಾಯಿಸಿದ ಒರಿಸ್ಸಾ ಮತ್ತು ಬಿಹಾರಗಳ ಒಂದು ಸುತ್ತು.

ಒರಿಸ್ಸಾ: ಇನ್ನೊಂದು ರಾಜ್ಯ ಬಿಜೆಪಿ ಕೈಬಿಟ್ಟಿತು

ಬಿಜೆಪಿ ಕೂಟವಾದ ಎನ್.ಡಿ.ಎ.ಗೆ ಬಲವಾದ ಏಟು ಕೊಟ್ಟ ರಾಜ್ಯ ಒರಿಸ್ಸಾ. ಆ ವರೆಗೆ ಎನ್.ಡಿ.ಎ. ಮತ್ತು ಯು.ಪಿ.ಎ. ನಡುವೆ ಬಲವಾದ ಹಣಾಹಣಿ ಇದೆ. ಮೂರನೇ ರಂಗ ಲೆಕ್ಕಕ್ಕಿಲ್ಲ ಎಂದು ಮಾಧ್ಯಮಗಳು ಹೇಳಿದ್ದೇ ಹೇಳಿದ್ದು. ಆದರೆ ಒರಿಸ್ಸಾದಲ್ಲಿ ಬಿಜೆಡಿ (ಬಿಜು ಜನತಾ ದಳ) ಬಿಜೆಪಿ ಮತ್ತು ಅದರ ನಾಯಕತ್ವದ ಕೂಟ ಎನ್.ಡಿ.ಎ. ಜತೆ ಮೈತ್ರಿ ಕಡಿದುಕೊಂಡು ಹೊರ ಬಂದ ಮೇಲೆ ಅವರು ತಮ್ಮ ರಾಗ ಬದಲಾಯಿಸಿದ್ದಾರೆ. ಬಿಜೆಪಿ ಕೂಟ ಎನ್.ಡಿ.ಎ. ಸರ್ಕಾರದ ಸ್ಪರ್ಧೆಯಲ್ಲಿ ಹಿಂದೆ ಬಿದ್ದಿದೆ. ಮೂರನೇ ರಂಗ ಸಹ ಸ್ಪರ್ಧೆಯಲ್ಲಿದೆ. ಎಂದು ಒಪ್ಪಿಕೊಳ್ಳುತ್ತಾರೆ. ಕೆಳೆದ ವರ್ಷ ಜಗತ್ತಿನ ಗಮನ ಸೆಳೆದ ಸಂಘ ಪರಿವಾರ ಕಂದಮಲ್ ಮುಂತಾದ ಕಡೆ ನಡೆಸಿದ ಕುಖ್ಯಾತ ಕ್ರಿಶ್ಚಿಯನ್-ವಿರೋಧಿ ದಂಗೆಗಳ ನಂತರ ಬಿಜೆಡಿ-ಬಿಜೆಪಿ ಸಂಬಂಧಗಳು ಕೆಟ್ಟಿದ್ದು, ಬಿಜೆಡಿಗೆ ಕಸಿವಿಸಿ ಆರಂಭವಾಗಿತ್ತು. ಬಿಜೆಪಿ ಜತೆ ಸಂಬಂಧ ಚುನಾವಣೆಯಲ್ಲಿ ಕುತ್ತು ತಂದು ಗುಜರಾತ್ ತರಹದ ಪರಿಸ್ಥಿತಿ ಸೃಷ್ಟಿಸಿ ಬಿಜೆಪಿ ತಾನೇ ದೊಡ್ಡ ಶಕ್ತಿ ಆಗಲು ಪ್ರಯತ್ನಿಸುತ್ತಿದೆ ಎಂಬ ಅರಿವಾಗ ಹತ್ತಿತು.

ಪಕ್ಷ	ಕಾಂಗ್ರೆಸ್	ಬಿಜು ಜನತಾ ದಳ	ಬಿಜೆಪಿ	ಇತರ	ಒಟ್ಟು
2004 ಲೋಕಸಭೆ					
ಶೇ. ಮತಗಳಿಕೆ	40.43	30.02	19.30	10.25	
ಸೀಟು ಗಳಿಕೆ	2	11	7	1	21
2004 ವಿಧಾನಸಭೆ					
ಶೇ. ಮತಗಳಿಕೆ	34.82	27.36	17.11	20.71	
ಸೀಟು ಗಳಿಕೆ	38	61	32	16	147

ಕೊನೆಗೂ ಬಿಜೆಡಿ ಬಿಜೆಪಿ ಜತೆ ಸಂಬಂಧ ಕಡಿದುಕೊಳ್ಳಲು ನಿರ್ಧರಿಸಿತು. ಎಡ ಪಕ್ಷಗಳು ಮತ್ತು ಎನ್.ಸಿ.ಪಿ. ಜತೆ ಸಂಬಂಧ ಬೆಳೆಸಿ ಒರಿಸ್ಸಾದಲ್ಲಿ ಮೂರನೇ ರಂಗದ ಪತಾಕೆ ಹಾರಿಸಿದ್ದು ಈ ಬಾರಿಯ ಚುನಾವಣೆಗಳ ವಿಶಿಷ್ಟ ಬೆಳವಣಿಗೆ ಆಯ್ತು.

ಬಿಜೆಪಿ ಮತ್ತು ಮಾಧ್ಯಮಗಳು ಬಿಜೆಡಿಯ ಈ ನಿರ್ಧಾರವನ್ನು 'ಸಮಯಸಾಧಕತನ' 'ದ್ರೋಹ' ಎಂದೆಲ್ಲಾ ಕರೆದವು. 2004 ರ ಚುನಾವಣೆಗಳಲ್ಲಿ ಪ್ರಮುಖ ಪಕ್ಷಗಳ ಶೇಕಡಾ ಮತಗಳಿಕೆ ನೋಡಿದರೆ ಈ ಆಪಾದನೆಯಲ್ಲಿ ಹುರುಳಿಲ್ಲ ಎಂದು ತಿಳಿಯುತ್ತದೆ. ಈ ಅಂಕಿಸಂಖ್ಯೆಗಳನ್ನು ನೋಡಿದರೆ ಬಿಜೆಡಿ ಬಿಜೆಪಿ ಜತೆ ತನ್ನ ಮೈತ್ರಿ ಕೊನೆಗೊಳಿಸಿ, ಆರಾಮ ಮೂರನೇ ಜಯದ ಬದಲು ಮೂರನೇ ರಂಗ ಕಟ್ಟುವ 'ರಿಸ್ಕ್' ತೆಗೆದುಕೊಂಡಿದೆ ಎನ್ನಬಹುದು. ಅಲ್ಲದೆ ಬಿಜೆಡಿ ಸೇರಿದಂತೆ ಕಾಂಗ್ರೆಸ್-ಬಿಜೆಪಿಯೇತರ ಮೂರನೇ ಶಕ್ತಿಯ ಬಲ ಗಮನಾರ್ಹವಾಗಿ ಇದೆ. ಲೋಕಸಭೆಯಲ್ಲಿ ಶೇ. 40 ಮತ್ತು ವಿಧಾನಸಭೆಯ ಚುನಾವಣೆಗಳಲ್ಲಿ ಶೇ. 48 ಕ್ಕಿಂತಲೂ ಹೆಚ್ಚು ಮತಗಳಿಸಿ ಕಾಂಗ್ರೆಸ್‌ನಷ್ಟೇ ಅಥವಾ ಅದಕ್ಕಿಂತ ಮುಂದಿದೆ. ಸೀಟು ಗಳಿಕೆಯಲ್ಲೂ ಅದಕ್ಕೆ ನಿಚ್ಚಳ ಬಹುಮತ ಇದೆ. ಬಿಜೆಪಿ ತನ್ನ ಬೆಂಬಲ ವಾಪಸು ತೆಗೆದುಕೊಂಡರೂ ಬಿಜೆಡಿ ಸರ್ಕಾರ ಉಳಿಯಿತು. ಅಂಕಿಸಂಖ್ಯೆಗಳಲ್ಲಿ ಬಿಜೆಪಿಯ ನಿಜವಾದ ಜನಬೆಂಬಲ ಉತ್ಪ್ರೇಕ್ಷಿತವಾಗಿ ಮತ್ತು ಬಿಜೆಡಿಯದ್ದು ಕಡಿಮೆ ಕಾಣುತ್ತದೆ. ಇದಕ್ಕೆ ಕಾರಣ ಬಿಜೆಪಿಗೆ ಅದರ ಬೆಂಬಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಿಜೆಡಿ ಸೀಟು ಬಿಟ್ಟು ಕೊಟ್ಟದ್ದು. ಈ ವಿಕೃತಿ ಸರಿ ಪಡಿಸಿದರೆ ಮತ್ತು ಬಿಜೆಪಿಯು ಸ್ವತಂತ್ರ ಮತಗಳಿಕೆ ಕಡಿಮೆಯಾಗುತ್ತದೆ. ಬಿಜೆಡಿಯದ್ದು ಹೆಚ್ಚಾಗುತ್ತದೆ.

ಲೋಕಸಭೆಯ 21 ಸೀಟುಗಳಲ್ಲಿ ಬಿಜೆಡಿ 18 ಸ್ಥಾನಗಳಲ್ಲಿ ಮತ್ತು ಸಿಪಿಐ, ಸಿಪಿಐ(ಎಂ), ಎನ್.ಸಿ.ಪಿ. ಗಳು ತಲಾ ಒಂದೊಂದು ಸೀಟುಗಳಲ್ಲಿ ಸ್ಪರ್ಧಿಸುತ್ತಿವೆ. ವಿಧಾನಸಭೆಯ 147 ಸೀಟುಗಳಲ್ಲಿ ಬಿಜೆಡಿ 130 ಸ್ಥಾನಗಳಲ್ಲಿ ಮತ್ತು ಸಿಪಿಐ, ಸಿಪಿಐ(ಎಂ), ಎನ್.ಸಿ.ಪಿ. ಗಳು 17 ಸೀಟುಗಳಲ್ಲಿ ಸ್ಪರ್ಧಿಸುತ್ತಿವೆ. ಏಪ್ರಿಲ್ 3 ರಂದು ರಾಜಧಾನಿ ಭುವನೇಶ್ವರ್ ನಲ್ಲಿ ನಡೆದ ಚಾರಿತ್ರಿಕ ಮೂರನೇ ರಂಗದ ರ್‍ಯಾಲಿಯಲ್ಲಿ ಪ್ರಕಾಶ್ ಕಾರಟ್, ಎ ಬಿ ಬರ್ಧನ್, ನವೀನ್ ಪಟ್ನಾಯಕ್ ಭಾಗವಹಿಸಿದ್ದರು. ಎನ್.ಸಿ.ಪಿ. ನಾಯಕ ಶರದ್ ಪವಾರ್ ಸಹ ಭಾಗವಹಿಸಲಿದ್ದು, ವಿಮಾನದ ತಾಂತ್ರಿಕ ತೊಂದರೆಯಿಂದ ಸಾಧ್ಯವಾಗಲಿಲ್ಲ. ಆದರೆ ಆ ಪಕ್ಷದ ಇನ್ನೊಬ್ಬ ನಾಯಕ ಭಾಗವಹಿಸದ್ದಲ್ಲದೆ, ಶರದ್ ಪವಾರ್ ದೂರವಾಣಿ ಮೂಲಕ ರ್‍ಯಾಲಿ ಉದ್ದೇಶಿಸಿ ಮಾತನಾಡಿದರು. ಬಿಜೆಪಿ ಜತೆ ಸಂಬಂಧ ಕಡಿದುಕೊಂಡು ಬಿಜೆಪಿ ಕೋಮುವಾದವನ್ನು ಹಿಮ್ಮೆಟ್ಟಿಸಿದ್ದಕ್ಕೆ ಪ್ರಕಾಶ್ ಕಾರಟ್ ನವೀನ್ ಪಟ್ನಾಯಕ್ ರನ್ನು ಅಭಿನಂದಿಸಿದರು. ಎಲ್ಲಾ ನಾಯಕರು ಮೂರನೇ ರಂಗ ಶಾಂತಿ, ಸಮಗ್ರತೆ ಮತ್ತು ಬೆಳವಣಿಗೆಯ ಹರಿಕಾರ ಎಂದರು. ಕಾಂಗ್ರೆಸ್ ನಾಯಕತ್ವ ಪವಾರ್ ಭಾಗವಹಿಸುವಿಕೆ ತಡೆಯಲು ತನಗೆ ಸಾಧ್ಯವಿದ್ದ ಎಲ್ಲಾ ಒತ್ತಡ ಹಾಕಿದರೂ ವಿಫಲವಾಯಿತು. ಎನ್.ಸಿ.ಪಿ.-ಕಾಂಗ್ರೆಸ್ ಮೈತ್ರಿ ಮಹಾರಾಷ್ಟ್ರ-ಗೋವಾಗಳಿಗೆ ಸೀಮಿತ ಎಂದು ಸ್ಪಷ್ಟ ಪಡಿಸಿತು. ಆ ರ್‍ಯಾಲಿಯಿಂದ ಆರಂಭಿಸಿ ಹಲವು ಜಿಲ್ಲೆಗಳಲ್ಲಿ ನಾಲ್ಕು ಪಕ್ಷಗಳ ಜಂಟಿ ರ್‍ಯಾಲಿಗಳು ಜರುಗಿವೆ. ಮೂರನೇ ರಂಗದ ಜಂಟಿ ಪ್ರಚಾರ ರಾಜ್ಯದ ತುಂಬಾ ಮಿಂಚಿನ ಸಂಚಾರ ಮೂಡಿಸಿದೆ. ನವೀನ್ ಪಟ್ನಾಯಕ್ ರ ಸ್ವಚ್ಛ ಇಮೇಜ್ ಮತ್ತು ಬಿಪಿಎಲ್ ಕುಟುಂಬಗಳಿಗೆ ಮತ್ತು ಹಸಿವು ಉಲ್ಬಣವಾಗಿರುವ ಜಿಲ್ಲೆಗಳಲ್ಲಿ ಎಪಿಎಲ್ ಕುಟುಂಬಗಳಿಗೂ ರೂ. 2 ರಲ್ಲಿ 25 ಕೆಜಿ ಅಕ್ಕಿ ಕೊಡುವ ಕಾರ್ಯಕ್ರಮ ಜನಪ್ರಿಯವಾಗಿದೆ. ಕಾಂಗ್ರೆಸ್, ಬಿಜೆಪಿಗಳೂ ಇಂತಹುದೇ ಕಾರ್ಯಕ್ರಮವನ್ನು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಬೇಕಾಗಿ ಬಂದಿದೆ.

ಬಿಜೆಪಿ ಎಲ್ಲಾ ಸೀಟುಗಳಲ್ಲಿ ಒಂಟಿಯಾಗಿ ಸ್ಪರ್ಧಿಸುತ್ತಿದೆ. ತನ್ನ ಕೋಮುವಾದಿ ಕಾರ್ಯಕ್ರಮವನ್ನು ಭರದಿಂದ ಮುಂದೆ ತೆಗೆದುಕೊಂಡು ಹೋಗುತ್ತಿದೆ. ಕಂದಮಲ್ ಲೋಕಸಭಾ ಕ್ಷೇತ್ರದಲ್ಲಿ ದಂಗೆಗಳಲ್ಲಿ ಆಪಾದಿತ ಬಿಜೆಪಿ ಅಭ್ಯರ್ಥಿ ಆಗಿದ್ದು, ಹಲವು ಇತರ ಆಪಾದಿತರು ಅಭ್ಯರ್ಥಿಗಳಾಗಿದ್ದಾರೆ. ಕಂದಮಲ್ ಬಿಜೆಪಿ ಅಭ್ಯರ್ಥಿ ಚುನಾವಣಾ ನಿಯಮಗಳ ಉಲ್ಲಂಘನೆ ಮಾಡಿದ ಭಾಷಣಕ್ಕಾಗಿ ಗಲಭೆಯ ಅಪಾಯದಿಂದ ಬಂಧಿತನಾಗಿದ್ದಾನೆ. ತ್ರಿಕೋಣ ಸ್ಪರ್ಧೆ ಹೆಚ್ಚಿನ ಕಡೆ ಬಿಜೆಪಿಗೆ ಮುಳುವಾಗಲಿದೆ. ಗೆಲುವಿನ ಸಾಧ್ಯತೆ ಇಲ್ಲದ್ದರಿಂದ ಬಿಜೆಡಿಗೆ ಆದಷ್ಟು ಹಾನಿ ಮಾಡಲು ಭಿನ್ನಮತೀಯ ಬಿಜೆಡಿ ಮತ್ತು ಕಾಂಗ್ರೆಸ್ ನಾಯಕರ ಮೇಲೆ 'ಆಪರೇಶನ್ ಕಮಲ' ಕಾರ್ಯಾಚರಣೆ ನಡೆಸುತ್ತಿದೆ. ಬಿಜೆಡಿ ರಾಜ್ಯದಲ್ಲಿ ಅಧಿಕಾರಕ್ಕೆ ಬರದಂತೆ ಮಾಡಲು ಪಣ ತೊಟ್ಟಿದೆ. ಕಾಂಗ್ರೆಸ್ಸೇತರ ರಾಜಕೀಯ ಜಾಗವನ್ನು ತಾನೇ ತುಂಬುವ ಹಗಲು ಕನಸು ಕಾಣುತ್ತಿದೆ.

ಕಾಂಗ್ರೆಸ್ ಕೆಲವು ಕಡೆಯಾದರೂ ತ್ರಿಕೋಣ ಸ್ಪರ್ಧೆಯ ಪ್ರಯೋಜನ ಪಡೆದು ತನ್ನ ಸ್ಥಾನ ಉತ್ತಮ ಪಡಿಸುವುದರಲ್ಲಿ ತೊಡಗಿದೆ. ಯಾರಾದರೂ ನಿರೀಕ್ಷಿಸಬಹುದಾದಂತೆ ಬಿಜೆಪಿಯ ಕೋಮುವಾದದ ವಿರುದ್ಧ ಸೆಣಸುವ ಬದಲು ಬಿಜೆಡಿಯನ್ನು ರಾಜಕೀಯವಾಗಿ. ಹಲವು ಬಿಜೆಡಿ ಭಿನ್ನಮತೀಯರನ್ನು ಸೆಳೆದುಕೊಳ್ಳುವ ಮೂಲಕ ಅದನ್ನು ಮುಗಿಸಿ ಬಿಡಲು ಹವಣಿಸುತ್ತಿದೆ.

ಆದಿವಾಸಿ ಮೀಸಲು ಲೋಕಸಬಾ ಕೇತ್ರ ಸುಂದರಗಡ್ ನಲ್ಲಿ ಸಿ.ಪಿ.ಐ.(ಎಂ) ಅಭ್ಯರ್ಥಿ ಸಲೋಮಿ ಮಿನ್ಜ ಮಹಿಳೆ ಎಂಬುದು ವಿಶೇಷ.

2004 ಚುನಾವಣೆಯಲ್ಲಿ ಬಿಜೆಪಿ ಕೂಟವಾದ ಎನ್.ಡಿ.ಎ. ಪ್ರಚಂಡ ಜಯ ಗಳಿಸಿತ್ತು. ಈ ಬಾರಿ ಮೂರನೇ ರಂಗ ಜಯಭೇರಿ ಬಾರಿಸಿದರೆ ಆಶ್ಚರ್ಯವಿಲ್ಲ. ಬಹುಮತವಂತೂ ಹೆಚ್ಚು ಕಡಿಮೆ ಖಚಿತ. ಈ ಬದಲಾವಣೆಯಿಂದ ದೊಡ್ಡ ನಷ್ಟ ಬಿಜೆಪಿಗೆ. ಕಾಂಗ್ರೆಸ್ ಸ್ವಲ್ಪ ಮಟ್ಟಿಗೆ ತನ್ನ ಸ್ಥಾನ ಉತ್ತಮಪಡಿಸಬಹುದು. ಒಟ್ಟಾರೆಯಾಗಿ ಕ್ರಿಶ್ಚಿಯನ್-ವಿರೋಧಿ ಕೋಮು ದಂಗೆಗಳನ್ನು ಬಳಸಿ ಗುಜರಾತ್ ನಂತೆ ತನ್ನ ಸ್ಥಾನ ಉತ್ತಮಪಡಿಸಿಕೊಳ್ಳಬಹುದು ಎಂಬ ಬಿಜೆಪಿಯ ಕೋಮುವಾದೀ ಲೆಕ್ಕಾಚಾರ ತಲೆ ಕೆಳಗು ಆಗುವ ಎಲ್ಲಾ ಸಾಧ್ಯತೆ ಇದೆ.

ಬಿಹಾರ –ಸಂಯುಕ್ತ ಎಡ ರಂಗದ ಉದಯ

ಒರಿಸ್ಸಾ ಎನ್.ಡಿ.ಎ. ಗೆ ಶಾಕ್ ಕೊಟ್ಟರೆ ಬಿಹಾರ ಯುಪಿಎಗೆ ಶಾಕ್ ಕೊಟ್ಟಿದೆ. ಲಲ್ಲು ಪ್ರಸಾದ್ ಯಾದವ್ ಅವರ ಆರ್.ಜೆ.ಡಿ. ಮತ್ತು ರಾಂ ವಿಲಾಸ್ ಪಾಸ್ವಾನ್ ಅವರ ಎಲ್.ಜೆ.ಪಿ. ಕಾಂಗ್ರೆಸ್ ಬಿಟ್ಟು ತಮ್ಮೊಳಗೆ ಸೀಟು ಹಂಚಿಕೊಂಡಿವೆ. ಕಾಂಗ್ರೆಸ್ ಜತೆ ಸೀಟು ಹಂಚಿಕೆಯಲ್ಲಿ ಕಾಂಗ್ರೆಸ್ ಹೆಚ್ಚಿನ ಸೀಟುಗಳಿಗೆ ತಕರಾರು ಮಾಡಿದ್ದು ಮೈತ್ರಿಕೂಟ ಮುರಿದು ಬೀಳುವಂತಾಯ್ತು. ಕಾಂಗ್ರೆಸ್ ಒಂಟಿಯಾಗಿ ಸ್ಪರ್ಧಿಸುತ್ತಿದೆ. ಮೂರು ಎಡ ಪಕ್ಷಗಳು - ಸಿಪಿಐ, ಸಿಪಿಐ(ಎಂ), ಸಿಪಿಐ ಲಿಬರೇಶನ್ (ಎಂ.ಎಲ್.) - ಯಾವುದೇ ಆಳುವ ವರ್ಗಗಳ ಪಕ್ಷಗಳ ಜತೆ ಚುನಾವಣಾ ಹೊಂದಾಣಿಕೆ ಮಾಡದೆ ಸ್ವತಂತ್ರವಾಗಿ ಸ್ಪರ್ಧಿಸುತ್ತಿವೆ. ಜೆಡಿ(ಯು)-ಬಿಜೆಪಿ ಕೂಟ 2005 ರ ವಿಧಾನಸಭೆ ಚುನಾವಣೆಯ ಜಯ ರಿಪೀಟ್ ಮಾಡಲು ಹೆಣಗಾಡುತ್ತಿವೆ. ಈ ರೀತಿ ರಾಜ್ಯದಾದ್ಯಂತ ಚತುಷ್ಕೋಣ ಸ್ಪರ್ಧೆ ಏರ್ಪಟ್ಟಿದೆ. ಬಿ.ಎಸ್.ಪಿ. ಬಲ ಬಿಹಾರದಲ್ಲಿ ಹೆಚ್ಚಿಲ್ಲದಿದ್ದರೂ ಸಹ ಸ್ವತಂತ್ರವಾಗಿ ಸ್ಪರ್ಧಿಸುತ್ತಿದೆ.

ಬೇರೆ ರೀತಿಯ ಮೈತ್ರಿಕೂಟಗಳ ಪರಿಸ್ಥಿತಿಯಿಂದಾಗಿ, 2004 ಲೋಕಸಬಾ ಮತ್ತು 2005 ವಿಧಾನಸಭೆ ಚುನಾವಣೆಗಳ ಮತಗಳಿಕೆ ಮತ್ತು ಸೀಟು ಗಳಿಕೆ ಈ ಬಾರಿಯ ಚುನಾವಣಾ ಕಣ ಫಲಿತಾಂಶದ ಬಗ್ಗೆ ಹೆಚ್ಚೇನೂ ಸುಳಿವು ಕೊಡುವುದಿಲ್ಲ. ಎಲ್ಲಾ ಆಳುವ ವರ್ಗದ ಪಕ್ಷಗಳು ಜಾತಿ-ಧರ್ಮದ ಲೆಕ್ಕಾಚಾರದಲ್ಲಿ ಮಗ್ನವಾಗಿದ್ದು ಜಾತಿ-ಧರ್ಮಗಳ ಹೊಸ ಸಾಮಾಜಿಕ ಕೂಟ ರಚಿಸುವ ಎದುರಾಳಿಯ ಕೂಟಗಳನ್ನು ಒಡೆಯುವುದರಲ್ಲಿ ಮಗ್ನವಾಗಿವೆ. ಆಳುವ ವರ್ಗದ ಪಕ್ಷಗಳು ಬಿಹಾರದ ಕೃಷಿ, ಕೈಗಾರಿಕೆ, ಮೂಲ ಸೌಕರ್ಯ, ಜನರ ಸಮಸ್ಯೆ ಇವ್ಯಾವನ್ನು ಎದುರಿಸಿ ಪರಿಹರಿಸುವಲ್ಲಿ ವಿಫಲವಾಗಿವೆ ಎಂದು ಆಪಾದಿಸಿ ಎಡ ಪಕ್ಷಗಳು ಮಾತ್ರ ಬೆಳವಣಿಗೆಯನ್ನು ಚುನಾವಣಾ ವಿಷಯ ಮಾಡಿವೆ. ಎಡ ಪಕ್ಷಗಳು ಈ ಹಿಂದೆ ಮೈತ್ರಿಕೂಟಗಳ ಭಾಗವಾಗಿ ಬಹಳ ಸೀಮಿತ ಕ್ಷೇತ್ರಗಳಲ್ಲಿ ಸ್ಪರ್ಧೆಮಾಡಿರುವುದರಿಂದ ಅದರ ಮತಗಳಿಕೆ ಅದರ ಬೆಂಬಲವನ್ನು ಸರಿಯಾಗಿ ಪ್ರತಿನಿಧಿಸುವುದಿಲ್ಲ. ರಾಜ್ಯದಾದ್ಯಂತ ಎಡ ರಂಗದ ಸ್ಪರ್ಧೆ ಆಳುವ ವರ್ಗಗಳ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಲಿದೆ.


ಪಕ್ಷ	ಜೆಡಿ(ಯು)	ಬಿಜೆಪಿ	ಆರ್.ಜೆ.ಡಿ.	ಎಲ್.ಜೆ.ಪಿ.	ಕಾಂಗ್ರೆಸ್	ಎಡರಂಗ
2004 ಲೋಕಸಭೆ						
ಶೇ. ಮತಗಳಿಕೆ	22.36	14.57	30.67	8.19	4.49	2.0
ಸೀಟು ಗಳಿಕೆ	6	5	22	4	3	0
2005 ವಿಧಾನಸಭೆ						
ಶೇ. ಮತಗಳಿಕೆ	20.32	15.49	23.24	12	4	2

ಜೆಡಿ(ಯು)-ಬಿಜೆಪಿ ಮತ್ತು ಆರ್.ಜೆ.ಡಿ.-ಎಲ್.ಜೆ.ಪಿ. ಕೂಟಗಳ ಮತಗಳಿಕೆ ಸುಮಾರು ಶೇ. 35 ಇದ್ದು ಕಾಂಗ್ರೆಸ್ ಮತ್ತು ಎಡ ಪಕ್ಷಗಳ ಸ್ವತಂತ್ರ ಸ್ಪರ್ಧೆಯಿಂದ ಯಾವ ಕೂಟಕ್ಕೆ ಪ್ರಯೋಜನ ಆಗಬಹುದು ಎಂಬುದರ ಮೇಲೆ ಫಲಿತಾಂಶ ಅವಲಂಬಿಸಿದೆ. ಕಾಂಗ್ರೆಸ್ ನ ನೆಲ ರಾಜ್ಯದ ತುಂಬಾ ಚದುರಿ ಹೋಗಿದ್ದು ಯಾವುದೇ ಕೂಟದ ಭಾಗವಾಗಿರದಿರುವುದು ಅದಕ್ಕೆ ಹೆಚ್ಚಿನ ನಷ್ಟ ತರಬಹುದು. ಎಡ ಪಕ್ಷಗಳು ಹಲವು ಕ್ಷೇತ್ರಗಳಲ್ಲಿ ಸ್ವತಂತ್ರ ಪ್ರಬಲ ನೆಲೆ ಹೊಂದಿದ್ದು ಇದರ ಪ್ರಯೋಜನ ಪಡೆಯಬಹುದು. ಸಿಪಿಐ(ಎಂ) 5 ಕೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಅದರ ವಿವರಗಳು ಇಂತಿವೆ.

ಕ್ಷೇತ್ರ	ಅಭ್ಯರ್ಥಿ
ನವಾಡ	ಗಣೇಶ ಶಂಕರ ವಿದ್ಯಾರ್ಥಿ
ಉಜೆಯಾರ್ ಪುರ	ರಾಮದೇವ್ ವರ್ಮಾ
ಭಾಗಲ್ಪುರ	ಸುಭೋಧ್ ರಾಯ್
ಸುಪಾವಲ್	ಬಲರಾಂ ಸಿಂಗ್ ಯಾದವ್
ಪಶ್ಚಿಮ ಚಂಪಾರನ್	ರಾಮಾಶ್ರಯ್ ಸಿಂಗ್

ಜೆಡಿ(ಯು)-ಬಿಜೆಪಿ ಕೂಟದಲ್ಲೂ ಎಲ್ಲವೂ ಚೆನ್ನಾಗಿಲ್ಲ. ನಿತಿಶ್ ಕುಮಾರ್ ಚುನಾವಣೆಯ ನಂತರ ಜೆಡಿ(ಯು) ಯಾವ ಕೂಟವನ್ನು ಸರ್ಕಾರ ರಚಿಸಲು ಬೆಂಬಲಿಸುವುದು ಎಂದು ನಿರ್ಧರಿಸುವುದು ಎಂದು ಹೇಳುವ ಮೂಲಕ ಬಿಜೆಪಿಗೆ ನಡುಕ ತಂದಿದ್ದಾರೆ. ಅಲ್ಲದೆ ಮೋದಿ ಬಿಹಾರಕ್ಕೆ ಚುನಾವಣೆ ಪ್ರಚಾರಕ್ಕೆ ಬರುವುದು ಬೇಡ. ಬಂದರೂ ಮೋದಿ ಜತೆ ಜಂಟಿ ಸಭೆ ನಡೆಸುವುದಿಲ್ಲ ಎಂದು ಹೇಳಿದ್ದಾರೆ. ಕಾಂಗ್ರೆಸ್ ಆರ್.ಜೆ.ಡಿ. ನಷ್ಟ ತುಂಬಿಕೊಳ್ಳಲು ನಿತಿಶ್ ಜತೆ ಗುಪ್ತ ಮಾತುಕತೆ ನಡೆಸುತ್ತಿದೆ ಎಂಬ ವದಂತಿ ಇದೆ.

ಆರ್.ಜೆ.ಡಿ.-ಎಲ್.ಜೆ.ಪಿ. ಮುಲಾಯಂ ಸಿಂಗ್ ಯಾದವ್ ಅವರು ಎಸ್.ಪಿ. ಜತೆ ಸೇರಿ 'ನಾಲ್ಕನೇ ರಂಗ' ರಚಿಸಿಕೊಂಡಿರುವುದು ದೇಶದ ಮಾತ್ರವಲ್ಲ, ರಾಜ್ಯದ ಚುನಾವಣೆಯಲ್ಲೂ ಪರಿಣಾಮ ಬೀರಬಹುದು. ಕಾಂಗ್ರೆಸ್-ಬಿಜೆಪಿಯೇತರ ಶಕ್ತಿಗಳೇ ಕೇಂದ್ರದಲ್ಲಿ ಸರ್ಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ ಎಂಬ ಭಾವನೆ ಕಾಂಗ್ರೆಸ್-ಬಿಜೆಪಿ ಮತಗಳಿಕೆ ಮೇಲೆ ಪ್ರಭಾವ ಬೀರಬಹುದು. ಈಗಿನ ರಾಜಕೀಯ ಶಕ್ತಿಗಳ ಬಲಾಬಲದಲ್ಲಿ ಪ್ರಮುಖ ಬದಲಾವಣೆ ತರಬಹುದು.



ದೇಶ ಸ್ವಾತಂತ್ರ್ಯಗಳಿಸಿ ಆರು ದಶಕಗಳೇ ಕಳೆದುಹೋದರೂ ದಲಿತರ ಬದುಕಿನಲ್ಲಿ ಮೂಲಭೂತ ಬದಲಾವಣೆ ಬರಲಿಲ್ಲ. ಅಮಾನವೀಯ ಶೋಷಣೆ ತಪ್ಪಲಿಲ್ಲ ಎಂಬುದಕ್ಕೆ ಸಾಕ್ಷಿಯಾದ ಮಾಹಿತಿಗಳು ಇಲ್ಲಿವೆ. ಇಂತಹ ಸಂದರ್ಭದಲ್ಲಿ ಲೋಕಸಭಾ ಚುನಾವಣೆಗಳು ಬಂದಿವೆ. ದಲಿತರು ಏನು ಮಾಡಬೇಕು ?

ದಲಿತ ಮತದಾರರ ದಾರಿ ಯಾವುದು?

ಕೆ. ಮಹಾಂತೇಶ್

ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಹೇಳಲಾಗುವ ಭಾರತದಲ್ಲಿ 15ನೇ ಲೋಕಸಭೆಯ ಅಸ್ತಿತ್ವಕ್ಕೆ ಈಗಾಗಲೇ ಎರಡು ಹಂತದ ಮತದಾನ(ಏಪ್ರಿಲ್-16 ಮತ್ತು 23) ಮುಗಿದಿವೆ.

ಇದೇ ಅವಧಿಯಲ್ಲೇ ಏಪ್ರಿಲ್-14 ರಂದು ದೇಶದ ತುಂಬೆಲ್ಲಾ ಸಂವಿಧಾನ ಶಿಲ್ಪಿ ಜಾತಿ ಅಸ್ಪೃಶ್ಯತೆಯ ವಿರುದ್ಧ ಜೀವನಪೂರ್ತಿ ಹೋರಾಟಗೈದ ಮಹಾನ್‌ನಾಯಕ ಡಾ||ಬಿ.ಆರ್.ಅಂಬೇಡ್ಕರ್‌ರವರ 118ರ ಜಯಂತಿಯನ್ನು ಆಚರಿಸಲಾಗಿದೆ. ಎಂದಿನಂತೆ ಆಳುವವರು ದಲಿತೋದ್ಧಾರಗಳ ಬಗ್ಗೆ ಭಾಷಣಗಳ ಹೊಳೆಯನ್ನೇ ಹರಿಸಿದ್ದಾರೆ.

ದೇಶವನ್ನು ಐದು ವರ್ಷಗಳ ಕಾಲ ಆಳಿದ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಈ ಹಿಂದೆ ಅಧಿಕಾರ ನಡೆಸಿದ್ದ ಬಿಜೆಪಿ ನೇತೃತ್ವದ ಎನ್.ಡಿ.ಎ.ಗಳು ತಾವೇ ಅಧಿಕಾರಕ್ಕೇರುವುದಾಗಿ ಘೋಷಿಸಿಕೊಂಡಿವೆ! ಈ ಎರಡೂ ರಾಷ್ಟ್ರೀಯ ಪಕ್ಷಗಳು ತಮ್ಮೊಂದಿಗಿರುವ ಮಿತ್ರಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ತಮ್ಮಷ್ಟಕ್ಕೆ ತಾವೇ ಕ್ರಮವಾಗಿ ಡಾ|| ಮನಮೋಹನಸಿಂಗ್ ಹಾಗೂ ಎಲ್.ಕೆ.ಅಡ್ವಾಣಿಯವರನ್ನು ಪ್ರಧಾನಿ ಅಭ್ಯರ್ಥಿಗಳೆಂದು ಸ್ವಯಂ ಘೋಷಿಸಿಕೊಂಡು ಬಿಟ್ಟಿವೆ! (ಅಮೇರಿಕಾ ಅಧ್ಯಕ್ಷ ಮಾದರಿಯಲ್ಲಿ) ದುರಂತದ ಸಂಗತಿ ಯೆಂದರೆ ನಮ್ಮ ದೇಶದ ಆಳುವ ವರ್ಗದ ಕೈಗೊಂಬೆಗಳಾಗಿರುವ ಮಾಧ್ಯಮಗಳು, ಅವರನ್ ಬಿಟ್, ಇವರನ್ ಬಿಟ್, ಇನ್ಯಾರು..? ಎನ್ನುವಂತೆ ಪ್ರಧಾನಿ ಆಯ್ಕೆಯ ಪ್ರಶ್ನೆಯನ್ನು ಬಹುದೊಡ್ಡ ವಿಷಯವನ್ನಾಗಿ ಉಳಿದ ಎಲ್ಲಾ ಜನಸಮುದಾಯದ ಪ್ರಶ್ನೆಗಳನ್ನು ಮೂಲೆ ಗುಂಪು ಮಾಡಿವೆ ಮಾತ್ರವಲ್ಲ 10 ರಿಂದ 12 ರಾಷ್ಟ್ರೀಯ ಪ್ರಾದೇಶಿಕ ಪಕ್ಷಗಳನ್ನು ಒಳಗೊಂಡ ತೃತೀಯರಂಗ ಕೂಡ ಇವರ ಲೆಕ್ಕದಲ್ಲಿ ಪರ್ಯಾಯವೇ ಅಲ್ಲ ಎನ್ನುವಂತೆ ಅವು ಬಿಂಬಿಸುತ್ತಿವೆ.

ಜಾಗತಿಕ ಆರ್ಥಿಕ ಕುಸಿತ ಈಗಾಗಲೇ ಭಾರತದಲ್ಲಿ 1 ಕೋಟಿ ಉದ್ಯೋಗಗಳಿಗೆ ಸಂಚಕಾರ ತಂದಿವೆ. ಸಾವಿರಾರು ಕೈಗಾರಿಕೆಗಳು ನೆಲಕಚ್ಚಿವೆ. ಕುಸಿತದಿಂದ ಕೃಷಿ ಬಿಕ್ಕಟ್ಟು ಮತ್ತಷ್ಟು ತೀವ್ರಗೊಳ್ಳುತ್ತಿವೆ. ರೈತರ ಆತ್ಮಹತ್ಯೆ ಸಾಲಿಗೆ ಈಗ ಸಾಫ್ಟ್‌ವೇರ್ ಕ್ಷೇತ್ರದ ನೌಕರರು ಸೇರುತ್ತಿದ್ದಾರೆ. ಆದರೆ ಇದ್ಯಾವುದೂ ಚುನಾವಣಾ ವಿಷಯಗಳಾಗಿಲ್ಲ. ಇನ್ನೂ ಈ ಚುನಾವಣೆಯಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೊಳಗಾಗಿರುವ ಮತ್ತೊಂದು ವರ್ಗ 'ದಲಿತ ವಿಭಾಗ'.

2001ರ ಜನಸಂಖ್ಯಾ ವರದಿ ಪ್ರಕಾರ ಭಾರತದಲ್ಲಿ 25 ಕೋಟಿ ದಲಿತರಿದ್ದಾರೆ. (ಶೇ.24.4) ಜಗತ್ತಿನಲ್ಲಿಯೇ ವರ್ಣ ಮತ್ತು ಜಾತಿ ವ್ಯವಸ್ಥೆ ಮೂಲಕ ಅಸ್ಪೃಶ್ಯತೆ ಎಂಬ ಮನುಷ್ಯ ವಿರೋಧಿ ಪಿಡುಗು ಆಚರಣೆಯಲ್ಲಿರುವುದು ಮುಖ್ಯವಾಗಿ ಭಾರತ ಉಪಖಂಡದಲ್ಲಿ ಮಾತ್ರ. ದೇಶಕ್ಕೆ ಸ್ವಾತಂತ್ರ್ಯ ಬಂದು 60 ವರ್ಷ ಕಳೆದರೂ, ಸಂವಿಧಾನದಲ್ಲಿ 'ಮೀಸಲಾತಿಯಂತಹ' ಉರುಗೋಲಿನ ಸಹಾಯವನ್ನು ನೀಡಿದ್ದೇವೆಂದು ಬಡಾಯಿ ಕೊಚ್ಚಿಕೊಂಡಿದ್ದರೂ ವಾಸ್ತವವಾಗಿ ಆ ವಿಭಾಗವನ್ನು ಅತ್ಯಂತ ಕಷ್ಟದ ಅಮಾನವೀಯ ಬದುಕಿನಿಂದ ಹೊರ ಬಂದಿಲ್ಲ.

ಸುಮಾರು 45 ವರ್ಷಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ಮತ್ತು ಆರುವರೆ ವರ್ಷ ಅಧಿಕಾರ ಮಾಡಿದ ಬಿಜೆಪಿ ಈ ದಲಿತ ಮಾರ್ಗವನ್ನು ಕೇವಲ ತಮ್ಮ ಅಧಿಕಾರದ ದಾಳವನ್ನಾಗಿ ಮಾಡಿಕೊಂಡಿದ್ದವೇ ಹೊರತು, ದಲಿತರ ಅಭಿವೃದ್ಧಿ ಸಮರ್ಪಕ ಮೀಸಲಾತಿ ಜಾರಿ, ಶಿಕ್ಷಣದ ಅವಕಾಶ, ವಸತಿ, ಆರೋಗ್ಯದಂತಹ ಎಲ್ಲಾ ಸೌಲಭ್ಯಗಳನ್ನು ನೀಡಲಿಲ್ಲ.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಆರು ದಶಕಗಳ ನಂತರವೂ ದಲಿತರ-ಸಾಮಾಜಿಕ-ಆರ್ಥಿಕ ಸ್ಥಾನಮಾನಗಳು ಸುಧಾರಿಸಿಲ್ಲ ಎನ್ನುವುದಕ್ಕೆ ಇಲ್ಲವೇ ಕೆಲವು ಅಂಕಿ-ಅಂಶಗಳು.

● **ಭೂಮಿ ಪ್ರಶ್ನೆ:**

1. 1991 ಅಂಕಿ ಅಂಶಗಳ ಪ್ರಕಾರ ಶೇ.13 ರಷ್ಟು ಗ್ರಾಮೀಣ (ಎಸ್‌ಸಿ) ದಲಿತರಿಗೆ ಭೂಮಿಯೆಂಬುದು ಇಲ್ಲವೇ ಇಲ್ಲ.

2. ಶೇ.87ರಷ್ಟು ದಲಿತರು ಅತ್ಯಂತ ಕಡಿಮೆ (1 ಎಕರೆಗಿಂತಲೂ) ಭೂಮಿ ಹೊಂದಿದ್ದಾರೆ.2000ರಲ್ಲಿ ಶೇ.10 ರಷ್ಟು ಎಸ್‌ಸಿ ಜನರು ಭೂ ಹೀನರು ಉಳಿದ ಶೇ.90 ರಷ್ಟು ಜನ ಸ್ವಲ್ಪ ಭೂಮಿ ಹೊಂದಿದ್ದರು.

3. 1995-96ರ ಕೃಷಿ ಅಂಕಿ ಸಂಖ್ಯೆ ಪ್ರಕಾರ, ಭಾರತದ ಶೇ.61.6 ರಷ್ಟು ಭೂಮಿ ಶೇ.17.2 ಜನರ ಕೈಯಲ್ಲಿ ಕೇಂದ್ರೀಕೃತವಾಗಿದೆ. ಅದರಲ್ಲೂ ಶೇ.7.3 ಜನರು ಶೇ.40.1ರ ಭೂಮಿಯನ್ನು (ಕೆಲವೇ ಜನರು) ತಮ್ಮ ಕೈಯಲ್ಲಿ ಹೊಂದಿದ್ದಾರೆ.

● **ನಿರ್ದಿಷ್ಟ ಬಂಡವಾಳದ ಆಸ್ತಿ:**

1. 2000ರಲ್ಲಿ ಶೇ.28 ಎಸ್‌ಸಿಗಳು ಮಾತ್ರ ನಿರ್ದಿಷ್ಟವಾದ ಬಂಡವಾಳ ಹೊಂದಿದ್ದಾರೆ(ಕೃಷಿ ಭೂಮಿ-ಕೃಷಿಯೇತರ)

2. ಎಸ್.ಸಿ/ಎಸ್‌ಟಿ ಹೊರತುಪಡಿಸಿ ಇತರೆ ಜಾತಿವಾರು ಹೊಂದಿರುವ ಪ್ರಮಾಣ ಶೇ.50 ಇದು ನಗರ ಪ್ರದೇಶದಲ್ಲಿ ಶೇ.27ರಷ್ಟು,.... ಶೇ.35.1 ರಷ್ಟಿದೆ.

● **ಕೃಷಿ ಕಾರ್ಮಿಕರಲ್ಲಿ ದಲಿತರೇ ಮೇಲುಗೈ:**

2000 ಅಂಕಿ ಅಂಶದ ಪ್ರಕಾರ ಪರಿಶಿಷ್ಟ ಜಾತಿಯವರು ಶೇ.49.06, ಪರಿಶಿಷ್ಟ ಪಂಗಡ ಶೇ.36.69 ಮತ್ತು ಇತರೆಯವರು ಶೇ.19.66 ಕೃಷಿ ಕಾರ್ಮಿಕರಿದ್ದಾರೆ.

1991-2001 ನಡುವೆ ಭಾರತದಲ್ಲಿ ಕೃಷಿ ಕೂಲಿಕಾರರ ಸಂಖ್ಯೆ 7.46 ಕೋಟಿಯಿಂದ 10.74ಕೋಟಿಗೇರಿದೆ. ಇದರಲ್ಲಿ ಬಹುಪಾಲು ದಲಿತರೇ ಹೆಚ್ಚು. ಮತ್ತು ಇವರಿಗೆ ಕೂಲಿ ಸಿಗುವ ದಿವಸದ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗಿದೆ.

1981ರಲ್ಲಿ 123 ಇದ್ದ ಕೂಲಿ ದಿವಸಗಳು 1991 ರಲ್ಲಿ 100ಕ್ಕೆ 2001 ರಲ್ಲಿ 78ಕ್ಕೆ, 2005 ರಲ್ಲಿ 70ಕ್ಕೆ ಇಳಿದಿವೆ.

● **ಬಾಲ ಕಾರ್ಮಿಕರು ದಲಿತರೇ!:**

ಭಾರತದಲ್ಲಿನ 60 ಲಕ್ಷ ಜನ ಬಾಲ ಕಾರ್ಮಿಕರಲ್ಲಿ ಶೇ.40 ರಷ್ಟು ಎಸ್‌ಸಿಗೆ ಸೇರಿದ ಬಾಲ ಕಾರ್ಮಿಕರಿದ್ದಾರೆ. ಇದರಲ್ಲಿ ಶೇ.80 ರಷ್ಟು ಮಕ್ಕಳು ಅತ್ಯಂತ ಅಪಾಯಕಾರಿ ನೆಲಹಾಸು ಬೆಂಕಿ ಪೊಟ್ಟಣ, ಪಟಾಕಿ ಮೊದಲಾ ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲ ಮಾಡುತ್ತಿದ್ದಾರೆ. ಮಾತ್ರವಲ್ಲ ಶೌಚಾಲ ಸ್ವಚ್ಛತೆ, ಸತ್ತ ಪ್ರಾಣಿಗಳನ್ನು ಎತ್ತುವುದು ಮತ್ತಿತ ಅಮಾನವೀಯ ಕೆಲಸಗಳನ್ ಮಾಡಿಕೊಂಡಿದ್ದಾರೆ.

● **ತಲಾ ಆದಾಯದಲ್ಲಿ ಮಾತ್ರ ಹಿಂದೆ!**

ಕೃಷಿ ಕಾರ್ಮಿಕರಲ್ಲಿ, ಬಾಲಕಾರ್ಮಿಕರ ಎಲ್ಲರಿಗಿಂತ ಮುಂದಿದ್ದ ದಲಿತರು (ಎಸ್‌ಸಿ) ತಲ ಆದಾಯದ ವಿಚಾರದಲ್ಲಿ ಮಾತ್ರ ಎಲ್ಲರಿಗಿಂ ಹೇಗೆ ಹಿಂದಿದ್ದಾರೆ ನೋಡಿ!

ಭಾರತದಲ್ಲಿ 2000ರ ಅಂಕಿ ಅಂಶ ಪ್ರಕಾರ(ರಾಷ್ಟ್ರೀಯ ಸರಾಸರಿ) ಪರಿಶಿಷ್ಟ ಜಾ ಜನರ ತಲಾ ಆದಾಯ ರೂ.3237, ಪರಿಶಿ ಪಂಗಡ(ಎಸ್‌ಟಿ) ತಲಾ ಆದಾಯ ರೂ.350 ಇತರೆ ಜಾತಿ ವರ್ಗದವರದ್ದು ರೂ.4,485 ಪ್ರತಿವಾರ ಪರಿಶಿಷ್ಟ ಜಾತಿಯವರ ವೇತ ರೂ.174.50, ವಾರದ ಎಸ್‌ಟಿ ಮತ್ತು ಇತ ಜಾತಿಯವರ ವೇತನ ರೂ.197.05ರಷ್ಟ ಎಸ್‌ಸಿ/ಎಸ್‌ಟಿ ಗಳಿದ್ದರೂ ದಲಿತರಾದರ ಎಸ್‌ಸಿಗಳು ಹೇಗೆ ಈಗಲೂ ತಲಾ ಆದಾಯದ ತಾರತಮ್ಯ ಅನುಭವಿಸುತ್ತಿದ್ದಾರೆ ಎಂಬುದಕ್ಕೆ ಈ ಅಂಕಿ ಸಂಖ್ಯೆಗಳು ಇಂಬು ನೀಡುತ್ತಿವೆ.

● **ಬಡತನದಲ್ಲಿ ಸದಾ ಮುಂದೆ :**

2000ರ ಅಂಕಿ ಅಂಶಗಳ ಪ್ರಕಾ ಶೇ.35.4ರಷ್ಟು ಪರಿಶಿಷ್ಟ ಜಾತಿಯುವರ ಗ್ರಾಮೀಣ ಪ್ರದೇಶದಲ್ಲಿ ಬಿಪಿಎಲ್ ವ್ಯಾಪ್ತಿ ಬರುತ್ತಾರೆ. ಶೇ.21 ಇತರೆ ಜನ ವಿಬಾ ಬಿಪಿಎಲ್ ವ್ಯಾಪ್ತಿಗೆ ಬರುತ್ತಾರೆ.

ನಗರ ಪ್ರದೇಶದಲ್ಲಿ ಇವರ ಪ್ರಮಾಣ ಇನ್ನೂ ಜಾಸ್ತಿಇದೆ. ಅಲ್ಲಿ ಶೇ.39ರಷ್ಟು ಎಸ್‌ಸಿಗಳ ಬಿಪಿಎಲ್ ವ್ಯಾಪ್ತಿಗೆ ಬಂದರೆ, ಇತರೆಯವರು ಶೇ.15 ಬಿಪಿಎಲ್ ವ್ಯಾಪ್ತಿಗೆ ಬರುತ್ತಾರೆ.

● **ಉದ್ಯೋಗದಲ್ಲಿ ಹಿಂದೆಯೇ?:**

2000ರ ಅಂಕಿ ಸಂಖ್ಯೆ ಪ್ರಕಾರ ನಿರುದ್ಯೋಗಿಗಳಲ್ಲಿ ಎಸ್‌ಸಿಗಳ ಪ್ರಮಾ ಶೇ.5ರಷ್ಟಿದ್ದರೆ, ಎಸ್‌ಟಿ ಮಾತ್ರ ಇತರ ವಿಭಾಗದಲ್ಲಿ ಅದು ಶೇ.3.5ರಷ್ಟಿದೆ. ಇದು ನಗ ಮತ್ತು ಗ್ರಾಮೀಣ ಎರಡರಲ್ಲೂ

● **ಶಿಕ್ಷಣದಲ್ಲೂ ಹಿಂದೆ!**

2001ರಲ್ಲಿ ಎಸ್‌ಸಿ ಸಾಕ್ಷರತಾ ಪ್ರಮಾಣ ಶೇ.54.7 ರಷ್ಟಿದೆ

ಎಸ್‌ಟಿ ಸಾಕ್ಷರತಾ ಪ್ರಮಾಣ ಶೇ.47.1 ರಷ್ಟಿದೆ. ಅಲ್ಲದೆ ಸಾಮಾಜಿಕ ಧಾರ್ಮಿಕ ದಬ್ಬಾಳಿಕೆಗೆ ಬಲಿಯಾಗಿ ದೇವದಾಸಿ ಎಂಬ ಕೂಪದಲ್ಲಿ ಸಿಲುಕಿದ್ದಾಳೆ.

● **ದೌರ್ಜನ್ಯ, ಅಸ್ಪೃಶ್ಯತೆ, ತಾರತಮ್ಯಕ್ಕೆ ಬಲಿಯಾದವರು:**

1981-2000 ನಡುವಿನ 16 ವರ್ಷಗಳ ಅಂಕಿ ಸಂಖ್ಯೆ ಪ್ರಕಾರ

ದೇಶದಲ್ಲಿ ಪರಿಶಿಷ್ಟ ಜಾತಿ ಜನರ ವಿರುದ್ಧ ದಾಖಲಾದ ದೌರ್ಜನ್ಯಗಳ ಸಂಖ್ಯೆ-3,57,945

ಆದರೆ ಈ ಅವಧಿಯಲ್ಲಿ ಪ್ರತಿವರ್ಷ ಸರಾಸರಿ 22,371 ದೌರ್ಜನ್ಯ ಪ್ರಕರಣಗಳು ದಲಿತರ ವಿರುದ್ಧ ದಾಖಲಾಗಿವೆ. ಇತರೆ ಜಾತಿಯ ಸಾಕ್ಷರತಾ ಪ್ರಮಾಣ ಶೇ.68.8 ರಷ್ಟಿತ್ತು. ಮಹಿ ಸಾಕ್ಷರತೆಯಲ್ಲಿ ಎಸ್‌ಸಿ ಮಹಿಳೆಯರೂ ಶೇ.41. ಎಸ್‌ಟಿ ಮಹಿಳೆಯರಲ್ಲಿ ಶೇ.34.8 ಮತ್ತು ಇತರೆ ಮಹಿಳೆಯರಲ್ಲಿ ಶೇ.58.2 ಪ್ರಮಾಣವಿದೆ. ಶಾಲೆ

ದಲಿತ ಮತದಾರರ ದಾರಿ ಯಾವುದು?

ಪುಟ 12 ರಿಂದ

...ಡುವವರ ಪ್ರಮಾಣದಲ್ಲಿ ಎಸ್‌ಸಿ-ಎಸ್‌ಟಿಗಳದ್ದು ಮೇಲುಗೈ ಪಡೆದಿದೆ.

● ದಲಿತ ಮಹಿಳಾ ಪರಿಸ್ಥಿತಿ ಚಿಂತಾಜನಕ:

ಜಾತಿ, ವರ್ಗ ಮತ್ತು ಲಿಂಗ ತಾರತಮ್ಯ ಈ ಮೂರು ತಾರತಮ್ಯಗಳನ್ನು 'ದಲಿತ ಮಹಿಳೆ' ಎದುರಿಸುತ್ತಿದ್ದಾಳೆ. ಅನಕ್ಷರತೆ, ವೇತನ ತಾರತಮ್ಯ, ಮತ್ತು ಲೈಂಗಿಕ ಕಿರುಕುಳಕ್ಕೆ ಬಲಿಯಾಗಿದ್ದಾಳೆ. 2000 ಒಂದರಲ್ಲೇ 486 ಕೊಲೆ ಮೊಕದ್ದಮೆಗಳು ಸೇರಿದಂತೆ 18,664 ಪ್ರಕರಣಗಳು ದಲಿತರ ವಿರುದ್ಧ ದಾಖಲಾಗಿವೆ. ದೇಶದಲ್ಲಿ ಪ್ರತಿ 20 ನಿಮಿಷಕ್ಕೊಂದು ಜಾತಿ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ಪ್ರತಿ ಎರಡು ದಿನದಲ್ಲಿ ಮೂವರು ದಲಿತರು ಕೊಲೆಗಳು ನಡೆಯುತ್ತಿವೆ. ದಲಿತ ಮಹಿಳೆಯರ ಮೇಲೆ ಪ್ರತಿ ಅರ್ಧಗಂಟೆಗೊಮ್ಮೆ ಅತ್ಯಾಚಾರಗಳು ನಡೆಯುತ್ತಿವೆ. ಇವು ಕೇವಲ ದಾಖಲಾದ ಪ್ರಕರಣಗಳಷ್ಟೇ!

ಇನ್ನೂ ದೇಶದುದ್ದಗಲಕ್ಕೂ ಪ್ರತಿ ವರ್ಷ ಮಳೆಗೆ, ಚಳಿಗಾಳಿಗೆ, ವಿಪರೀತ ಬಿಸಿಲಿಗೆ ಸಾವಿರಾರು ಜನರು ಸಾಯುತ್ತಾರೆ. ಅದರಲ್ಲಿ ಶೇ.70 ರಷ್ಟು ಜನ ದಲಿತರು!

ಕಮ್ಯುನಿಸ್ಟರ ನಾಡಲ್ಲಿ ದಲಿತು ಹೇಗಿದ್ದಾರೆ?

ಕಳೆದ ಹಲವು ದಶಕಗಳಿಂದಲೂ ಸಿಪಿಐ(ಎಂ) ನೇತೃತ್ವದಲ್ಲಿ ಎಡರಂಗ ಸರ್ಕಾರಗಳು ಪಶ್ಚಿಮಬಂಗಾಳ, ತ್ರಿಪುರಾ ಹಾಗೂ ಕೇರಳಗಳಲ್ಲಿ ಅಧಿಕಾರ ನಡೆಸುತ್ತಿವೆ. ಈ ಮೂರು ರಾಜ್ಯಗಳು ಸೇರಿದಂತೆ ತಮಿಳುನಾಡು ಹಾಗೂ ಆಂಧ್ರಪ್ರದೇಶಗಳಲ್ಲೂ, ಮಹಾರಾಷ್ಟ್ರ ಗಳಲ್ಲೂ, ಕಮ್ಯುನಿಸ್ಟರು ಸ್ವಾತಂತ್ರ್ಯ ಪೂರ್ವದಿಂದಲೇ ಜಾತಿ, ಅಸ್ಪೃಶ್ಯತೆ, ತಾರತಮ್ಯಗಳ ವಿರುದ್ಧ ನಿರಂತರ ಹೋರಾಡುತ್ತಾ ಬಂದಿದ್ದಾರೆ. ಅಲ್ಲದೆ, ಈ ಎಲ್ಲಾ ರಾಜ್ಯಗಳಲ್ಲಿ ಜಾತಿ ವ್ಯವಸ್ಥೆಯ ವಿರುದ್ಧದ ಹೋರಾಟ ಮತ್ತು ವರ್ಗ ಹೋರಾಟಗಳನ್ನು ಒಂದಕ್ಕೊಂದು ಬೆಸೆದುಕೊಂಡೇ ಸಾಗಿವೆ. ಅಲ್ಲದೆ ಸಿಪಿಐ(ಎಂ) ನೇತೃತ್ವದ ಸರ್ಕಾರಗಳು ಕಾಂಗ್ರೆಸ್ ಹಾಗೂ ಬಿಜೆಪಿ ನೀತಿಗಳಿಗೆ ವಿರುದ್ಧವಾಗಿ ಮತ್ತು ಉದಾರೀಕರಣ-ಜಾಗತೀಕರಣ ಹಾಗೂ ಖಾಸಗೀಕರಣಕ್ಕೆ ಬದಲಿ ಪರ್ಯಾಯ ಮಾರ್ಗ ಅನುಸರಿಸಿಯೇ ಆಡಳಿತ ನಡೆಸಿದ ಪರಿಣಾಮವಾಗಿ ಬೇರೆ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗಿಂತ ದಲಿತರ ಪರಿಸ್ಥಿತಿ ಕಮ್ಯುನಿಸ್ಟರ ನಾಡಲ್ಲಿ ಸುಧಾರಣೆ ಕಂಡಿದೆ. ಅದಕ್ಕಿಂತಲೂ ಮುಖ್ಯವಾಗಿ ಪಶ್ಚಿಮಬಂಗಾಳ, ತ್ರಿಪುರಾ ಹಾಗೂ ಕೇರಳದಲ್ಲಿ ಜಾತಿ ತಾರತಮ್ಯ, ಅಸ್ಪೃಶ್ಯತೆ ಹಾಗೂ ದಲಿತರ ಮೇಲಿನ ದೌರ್ಜನ್ಯಗಳು ಬೇರೆ ರಾಜ್ಯಗಳಿಗೆ ಹೋಲಿಸಿದಲ್ಲಿ ತೀರ ಕಡಿಮೆ.

ದಲಿತರಿಗೆ ಭೂಮಿ:

ಕಳೆದ 34 ವರ್ಷಗಳಿಂದ ಸಿಪಿಐ(ಎಂ) ನೇತೃತ್ವದ ಎಡರಂಗ ಪಶ್ಚಿಮಬಂಗಾಳದ ಅಧಿಕಾರದಲ್ಲಿದೆ. ಅಲ್ಲಿನ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮೊದಲ ಹಂತದಲ್ಲಿ 10.69 ಲಕ್ಷ ಭೂಮಿಯನ್ನು 26.43 ಲಕ್ಷ ಜನರಿಗೆ ವಿತರಿಸಿತು. ಅದರಲ್ಲಿ ಶೇ.56 ರಷ್ಟು ಫಲಾನುಭವಿಗಳು ಎಸ್‌ಸಿ/ಎಸ್‌ಟಿಗೆ ಸೇರಿದವರು.

ಪಶ್ಚಿಮಬಂಗಾಳದಲ್ಲಿ 5.44 ಕುಟುಂಬಗಳಿಗೆ ಮನೆ ನಿರ್ಮಾಣಕ್ಕಾಗಿ ಭೂಮಿ ನೀಡಲಾಗಿದೆ. ಅದರಲ್ಲಿ ಶೇ.42 ರಷ್ಟು ಜನರು ಎಸ್‌ಸಿ/ಎಸ್‌ಟಿಗೆ ಸೇರಿದವರು.

ಪಶ್ಚಿಮಬಂಗಾಳದಲ್ಲಿ ಇವತ್ತು ಶೇ.72 ಭೂಮಿಯ ಮೇಲೆ ಬಡವರು ಮತ್ತು ಅತಿ ಸಣ್ಣ ರೈತರು ಒಡೆತನ ಹೊಂದಿದ್ದಾರೆ.

ಪಶ್ಚಿಮಬಂಗಾಳ ತ್ರಿಪುರಾಗಳಲ್ಲಿ ಜಾರಿಯಲ್ಲಿನ ಮೂರು ಹಂತದ ಪಂಚಾಯತ್ ವ್ಯವಸ್ಥೆಯಲ್ಲಿ ಎಸ್‌ಸಿ/ಎಸ್‌ಟಿಗಳು ಅತಿ ಹೆಚ್ಚಿನ ಲಾಭ ಪಡೆದಿದ್ದಾರೆ.

ಪಶ್ಚಿಮಬಂಗಾಳ ಸರ್ಕಾರ ದಲಿತರು ಮತ್ತು ಆದಿವಾಸಿಗಳಿಗಾಗಿಯೇ ಹಲವು ವಿಶೇಷ ಯೋಜನೆಗಳನ್ನು ಜಾರಿಗೊಳಿಸಿದೆ.

1.1 ಲಕ್ಷ ದಲಿತ ವಿದ್ಯಾರ್ಥಿಗಳಿಗೆ 80 ಲಕ್ಷ ಆದಿವಾಸಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

ಈ ವಿದ್ಯಾರ್ಥಿಗಳಿಗಾಗಿಯೇ 240 ಹಾಸ್ಟೆಲ್‌ಗಳನ್ನು ತಡೆಮಾಡಿದೆ.

32 ಸಾವಿರ ದಲಿತಮತ್ತು 28 ಸಾವಿರ ಆದಿವಾಸಿ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ಹಾಸ್ಟೆಲ್ ಖರ್ಚನ್ನು ಭರಿಸಲಾಗುತ್ತಿದೆ.

ಎಸ್‌ಸಿ/ಎಸ್‌ಟಿ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಮೂಲಕ ಸ್ವಯಂ ಉದ್ಯೋಗಕ್ಕೆ ಹಣಕಾಸು ನೆರವು ನೀಡಲಾಗುತ್ತಿದೆ.

ಪಶ್ಚಿಮಬಂಗಾಳ ಪ್ರಾಥಮಿಕ- ಪ್ರೌಢಶಾಲಾ ಶಿಕ್ಷಕರಲ್ಲಿ ಕ್ರಮವಾಗಿ ಶೇ.26 ಮತ್ತು ಶೇ.29 ರಷ್ಟು ಎಸ್‌ಸಿ/ಎಸ್‌ಟಿ ಗಳಿದ್ದಾರೆ.

ತ್ರಿಪುರಾ ಎಡರಂಗ ನಿರ್ದಿಷ್ಟವಂತೂ ಎಸ್‌ಸಿ/ಎಸ್‌ಟಿಗಳ ಅಭಿವೃದ್ಧಿಗಾಗಿ ಹಲವು ಗಮನಾರ್ಹ ಕ್ರಮ ಕೈಗೊಂಡಿದೆ. (ಇದು 1991ರ ಅಂಕಿ-ಅಂಶ) ರಾಜ್ಯದ ಒಟ್ಟು ಸಾಕ್ಷರತಾ ಪ್ರಮಾಣ 64.44 ರಷ್ಟಾದರೆ ಅದರಲ್ಲಿ ಎಸ್‌ಸಿಗಳ ಸಾಕ್ಷರತಾ ಪ್ರಮಾಣ ಶೇ.56.66 ರಷ್ಟು. ಇದು 2001 ರಲ್ಲಿ ಇನ್ನು ಜಾಸ್ತಿಯಿದೆ. ಎಸ್‌ಸಿ ಮಹಿಳೆಯರ ಸಾಕ್ಷರತಾ 1981ರಲ್ಲಿ 23.24 ರಿಂದ 1991 ರಲ್ಲಿ 45.45 ರಷ್ಟಾಗಿದೆ.

ತ್ರಿಪುರಾದಲ್ಲಿ ಎಸ್‌ಸಿಗಳಲ್ಲಿ ಯಾವುದೇ ಜೀತದಾಳುಗಳಿಲ್ಲ. ಅಲ್ಲದೆ ಇತರೆ ರಾಜ್ಯಗಳಲ್ಲಿರುವಂತೆ ಪ್ರತ್ಯೇಕ ದಲಿತ ಕಾಲೋನಿಗಳಿಲ್ಲ.

ಕೂಲಿ ಕಾರ್ಮಿಕರಲ್ಲಿ ಬಹುಸಂಖ್ಯಾತರಾಗಿರುವ 'ದಲಿತರಿಗೆ ಕನಿಷ್ಠ ಕೂಲಿ ಕಡ್ಡಾಯವಾಗಿ ಖಾತ್ರಿಗೊಳಿಸಲಾಗಿದೆ.

ಬಡ್ಡಿ ಲೇವಾದಾರರಿಂದ ದಲಿತ ಕುಟುಂಬಗಳಿಗೂ ಸೂಕ್ತ ರಕ್ಷಣೆ ನೀಡಲಾಗಿದೆ.

ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಲಾಗಿದೆ.

ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿ ಆ ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸಲಾಗಿದೆ.

ಸಣ್ಣ ರಾಜ್ಯ ತ್ರಿಪುರಾದಲ್ಲಿ 40 ಸಾವಿರ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಪ್ರತಿ ವರ್ಷ 2000 ಮೆಟ್ರಿಕ್ಯೂಲೇಶನ್ ವಿದ್ಯಾರ್ಥಿಗಳಿಗೆ ಡಾ|| ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪದಕ ನೀಡಲಾಗುತ್ತಿದೆ.

ಜಾತಿ ವ್ಯವಸ್ಥೆ ಮತ್ತು ದೌರ್ಜನ್ಯದ ವಿರುದ್ಧ ಅಲ್ಲಿನ ಎಡಶಕ್ತಿಗಳು ಸೈದ್ಧಾಂತಿಕ ಸಂಘರ್ಷ ನಡೆಸುತ್ತಿವೆ. ಅದಕ್ಕೆ ನಡೆಸಿದರೂ ಬೆಂಬಲ ನೀಡುತ್ತಿದೆ. ಇದರ ಪರಿಣಾಮ ಪಶ್ಚಿಮಬಂಗಾಳ, ತ್ರಿಪುರಾಗಳಲ್ಲಿ ದಲಿತರು ಆದಿವಾಸಿಗಳ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆ ದೌರ್ಜನ್ಯಗಳಲ್ಲಿ ಭಾರೀ ಇಳಿಕೆ ಕಂಡು ಬಂದಿದೆ.

2001ರ ಅಂಕಿ ಅಂಶದ ಪ್ರಕಾರ ದೇಶದಲ್ಲಿ ಪರಿಶಿಷ್ಟ ಜಾತಿಯ ಜನರ ವಿರುದ್ಧದ 33,503 ಪ್ರಕರಣಗಳು ದಾಖಲಾಗಿವೆ. ಅದರಲ್ಲಿ 716 ಕೊಲೆ, 1316 ಅತ್ಯಾಚಾರ, 400 ಅಪಹರಣ ಪ್ರಕರಣಗಳು. ಆದರೆ ಆ ವರ್ಷ, ಪಶ್ಚಿಮಬಂಗಾಳದಲ್ಲಿ ಕೇವಲ 10 ಮತ್ತು ತ್ರಿಪುರಾದಲ್ಲಿ ಕೇವಲ 2 ಪ್ರಕರಣಗಳು ದಾಖಲಾಗಿವೆ.

ಇದೇ ವರ್ಷ ಅಖಿಲ ಭಾರತ ಮಟ್ಟದಲ್ಲಿ ಪರಿಶಿಷ್ಟ ಪಂಗಡ(ಎಸ್‌ಟಿ) ಜನರ ವಿರುದ್ಧದ 6217 ಪ್ರಕರಣಗಳು ದಾಖಲಾಗಿವೆ. ಅದರಲ್ಲಿ 167 ಕೊಲೆ, 573 ಅತ್ಯಾಚಾರ, 67 ಅಪಹರಣ ಪ್ರಕರಣಗಳು ಸೇರಿವೆ.

ಆದರೆ ಪಶ್ಚಿಮಬಂಗಾಳದಲ್ಲಿ ಕೇವಲ 2 ಮತ್ತು ತ್ರಿಪುರಾದಲ್ಲಿ ಒಂದೇ ಒಂದು ಪ್ರಕರಣ ದಾಖಲಾಗಿಲ್ಲ ಎನ್ನುವುದು ಗಮನಾರ್ಹ.

ಈ ಎಲ್ಲಾ ಅಂಕಿ-ಅಂಶಗಳು ಸೃಷ್ಟಿಪಡಿಸುವುದೇನೆಂದರೆ ಬೇರೆಲ್ಲಾ ರಾಜಕೀಯ ಪಕ್ಷಗಳಿಗಿಂತ, ಎಡಶಕ್ತಿಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮಾತ್ರ ದಲಿತರ ಪರಿಸ್ಥಿತಿ ಸುಧಾರಣೆಯತ್ತ ಸಾಗಿದೆ ಎನ್ನುವುದು. ಅಸ್ಪೃಶ್ಯತೆ, ಜಾತಿ ತಾರತಮ್ಯ, ದೌರ್ಜನ್ಯಗಳಿಗೆ ತಡೆಗಟ್ಟಲು ಸಾಧ್ಯವಾಗಿದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಹೀಗಾಗಿ ಕಾಂಗ್ರೆಸ್, ಬಿಜೆಪಿ, ಮತ್ತಿತರೆ ಬೂರ್ಜ್ವಾ ರಾಜಕೀಯ ಪಕ್ಷಗಳು ದಲಿತರ ಬಗ್ಗೆ ಬಿಡುವುದು ಕೇವಲ ಬೊಗಳೆ ಮಾತುಗಳು. ನಿಜವಾಗಿಯೂ 'ದಲಿತರ' ಪ್ರಶ್ನೆಗಳನ್ನು ಬಗೆಹರಿಸುವಲ್ಲಿ ಕಮ್ಯುನಿಸ್ಟರು ಎಲ್ಲರಿಗಿಂತಲೂ ಒಂದು ಹೆಜ್ಜೆ ಮುಂದು...ಹಾಗಾಗೀ ಈ ದೇಶದ ಕೋಟ್ಯಾಂತರ ದಲಿತರ ವಿಮೋಚನೆಯಾಗಬೇಕಾದರೆ, ಅವರು ಈಗ ನಡೆಸುತ್ತಿರುವ ಸಾಮಾಜಿಕ ಸಂಘರ್ಷದ ಜೊತೆ-ವರ್ಗ-ಸಂಘರ್ಷವನ್ನು ಮೈಗೂಡಿಸಿಕೊಂಡು ಸಾಗುವುದು ಇವತ್ತಿನ ಅನಿವಾರ್ಯತೆ ಯಾಗಿದೆ.

ಕಾರಣವೇನು?

ಕಾಂಗ್ರೆಸ್-ಬಿಜೆಪಿ ಮತ್ತಿತರೆ ರಾಜಕೀಯ ಪಕ್ಷಗಳು ವಿವಿಧ ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿವೆ. ಅಲ್ಲದೇ ಕೇಂದ್ರದಲ್ಲೂ ಅಧಿಕಾರ ನಡೆಸಿವೆ. ಆದರೂ ಕಮ್ಯೂನಿಸ್ಟರು (ಎಡರಂಗ) ಅಧಿಕಾರ ನಡೆಸುತ್ತಿರುವ ರಾಜ್ಯಗಳಲ್ಲಿ ಮಾತ್ರ ದಲಿತರ ಪರಿಸ್ಥಿತಿ ಸುಧಾರಿಸಲು ಕಾರಣಗಳೇನು? ಗೊತ್ತೇ?

- ಮೊದಲಿನಿಂದಲೂ ಕಮ್ಯುನಿಸ್ಟರು ಪ್ರಬಲವಾಗಿರುವ ತ್ರಿಪುರಾ, ಕೇರಳ, ಪಶ್ಚಿಮಬಂಗಾಳ, ಆಂಧ್ರ, ತಮಿಳುನಾಡುಗಳಲ್ಲಿ ವರ್ಗ ಚಳುವಳಿ ಮತ್ತು ಸಾಮಾಜಿಕ ಚಳುವಳಿಗಳು ಒಟ್ಟಿಗೆ ಕೊಂಡೊಯ್ಯಿರುವುದು.

ಪುಟ 14 ನೋಡಿ

ಕರ್ನಾಟಕದಲ್ಲಿ ದಲಿತರ ಪರಿಸ್ಥಿತಿ ಹೇಗಿದೆ? :

2001ರ ಜನಸಂಖ್ಯೆ ಅಂಕಿ ಅಂಶದ ಪ್ರಕಾರ ಎಸ್‌ಸಿ/ಎಸ್‌ಟಿ ಪ್ರಮಾಣ ಶೇ.23 ರಷ್ಟು ಅದರಲ್ಲಿ ಶೇ.80 ಭಾಗ ವಾಸ ಗ್ರಾಮೀಣ ಪ್ರದೇಶದಲ್ಲಿ.

12ನೇ ಶತಮಾನದಲ್ಲಿಯೇ ಜಾತಿ ಅಸ್ಪೃಶ್ಯತೆ ವಿರುದ್ಧ ಹೋರಾಡಿದ ವೀರಶೈವ ಚಳುವಳಿ ಪರಂಪರೆ ಇದ್ದರೂ ಈಗಲೂ ಜಾತಿ-ತಾರತಮ್ಯ, ಅಸ್ಪೃಶ್ಯತಾ ಆಚರಣೆಗಳು ನಿರಂತರವಾಗಿ ಮುಂದುವರೆದಿದೆ.

ಇಡೀ ಕುಟುಂಬವನ್ನು ಜೀವಂತವಾಗಿ ಸುಟ್ಟ ಕಂಬಾಲಪಲ್ಲಿ ಘಟನೆ, ಬೀದರ್ ಜಿಲ್ಲೆಯ ಚಿಟ್ವಾ, ಬಿಜಾಪುರ ಜಿಲ್ಲೆಯ ಕಡಕೋಳ, ಕೊಪ್ಪಳ ಜಿಲ್ಲೆಯ ಡಣಾಪುರ, ಹೊಸ್ಕೇರಾ, ರಾಯಚೂರು ಜಿಲ್ಲೆಯ ಗಬ್ಬೂರು, ಬಳ್ಳಾರಿ ಜಿಲ್ಲೆಯ ಕಮಲಾಪುರ, ವಣೆನೂರು, ಬೆಂಗಳೂರು ಜಿಲ್ಲೆಯ ಮಾಗಡಿ, ಹೀಗೆ ಹತ್ತಾರು ಸ್ಥಳಗಳಲ್ಲಿ ಎಚ್ಚೆತ್ತ ದಲಿತರ ಮೇಲೆ ತೀವ್ರತೆರವಾದ ದೌರ್ಜನ್ಯ, ಹಲ್ಲೆ, ಸಾಮಾಜಿಕ ಬಹಿಷ್ಕಾರಗಳು ನಡೆದು ಹಲವು ಜೀವಗಳು ಬಲಿಯಾಗಿವೆ. ರಾಜ್ಯದಲ್ಲಿನ ಭೂ ಮಾಲೀಕ ಶಕ್ತಿಗಳು ದಲಿತರಲ್ಲೇ ಒಡಕುಂಟು ಮಾಡಿ ಅಧಿಕಾರಕ್ಕೆ ಬಂದ ನಂತರವಂತೂ ತೀವ್ರಗೊಂಡಿದೆ. ಗೋಪೂಜೆಯ ಹೆಸರಲ್ಲಿ ನಡೆಸುವ ಜಾತ್ರೆಗೆ ಹತ್ತಾರು ಕೋಟಿ ನೀಡಿರುವ ಸರ್ಕಾರ, ದಲಿತರ ಆಹಾರದ ಹಕ್ಕಾದ ದನದ ಮಾಂಸದ ಮೇಲೆ ದಾಳಿ ನಡೆಸಿದೆ.

ಕರ್ನಾಟಕದಲ್ಲಿರುವ ಬಹುಪಾಲು ದಲಿತರು ಆಸ್ತಿವಂಚಿತರು. ಭೂ ಸುಧಾರಣೆ ಹೆಸರಲ್ಲಿ ಅಲ್ಪಸ್ವಲ್ಪ ಭೂಮಿ ನೀಡಿದರೂ ಅವೆಲ್ಲಾ ಇನ್ನೂ ಭೂ ಮಾಲೀಕರ ಅಥವಾ ಸರ್ಕಾರದ ಅಧೀನದಲ್ಲಿಯೇ ಇವೆ. ಈಗಲೂ ಪರಿಶಿಷ್ಟ ಜಾತಿಯ ಶೇ.73.83 ರಷ್ಟು ಜನ, ಪರಿಶಿಷ್ಟ ಪಂಗಡದ ಶೇ.76.04 ಜನ ಕೃಷಿಯನ್ನು ಅವಲಂಬಿಸಿ ಜೀವನ ಮಾಡುತ್ತಿದ್ದಾರೆ. ಇನ್ನು ಭೂ ಹಿಡುವಳಿ ಹೊಂದಿರುವ ದಲಿತರ ಪ್ರಮಾಣ ಬಾರೀ ಕಡಿಮೆ. ಹೊಂದಿದ್ದರೂ ಅದರಲ್ಲಿ ಬಹುಪಾಲು ನೀರಾವರಿ ವಂಚಿತ ಭೂಮಿಯಾಗಿದೆ.

ದಲಿತ ದಾರಿ ಯಾವುದು ?

ಪುಟ 13 ರಿಂದ

- ದಲಿತರೆಂದರೆ ಬಹುಪಾಲು ಕಾರ್ಮಿಕರು, ಬಡರೈತರು, ಕೂಲಿಕಾರರು, ಕೃಷಿ ಕಾರ್ಮಿಕರು, ಅವರಿಗೆ ಅಗತ್ಯವಿರುವ ಕನಿಷ್ಠ ಕೂಲಿ, ಜೀವನ ಭದ್ರತೆ, ಮತ್ತು ಪಡಿತರ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೊಳಿಸಿರುವುದು.
- ಅಸ್ಪೃಶ್ಯತೆ, ಜಾತಿ ದೌರ್ಜನ್ಯ, ದಬ್ಬಾಳಿಕೆ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವುದು.
- ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ದಲಿತರು, ಆದಿವಾಸಿಗಳು ಹಾಗೂ ಮಹಿಳೆಯರಿಗೆ ನಿರ್ಣಾಯಕ ಬೆಂಬಲ ನೀಡಿರುವುದು.
- ಅದಕ್ಕಿಂತಲೂ ಮುಖ್ಯವಾಗಿ ದಲಿತರನ್ನು ಬೀದಿಪಾಲು ಮಾಡುತ್ತಿರುವ ಸಾಮ್ರಾಜ್ಯಶಾಹಿ ಪ್ರೇರಿತ ಆರ್ಥಿಕ-ಉದಾರೀಕರಣ ನೀತಿಗಳಿಗೆ ಬದಲಾಗಿ ಪರ್ಯಾಯ ಆರ್ಥಿಕ ನೀತಿಗಳನ್ನು ತಮ್ಮ ಆಡಳಿತವಿರುವ ರಾಜ್ಯಗಳಲ್ಲಿ ಅಳವಡಿಸಿಕೊಂಡು ಜಾರಿ ಮಾಡುತ್ತಿರುವುದು.

ಈಗ ಹೇಳಿ ಭಾರತದ ದಲಿತರ ದಾರಿ ಯಾವುದಿರಬೇಕು?

ಗುಲಬರ್ಗಾ : ಜರ್ಜರಿತ ಜನರ ಬದುಕು

ಪುಟ 4 ರಿಂದ

ನಗರಾಭಿವೃದ್ಧಿ ಪ್ರಾಧಿಕಾರ ರಿಯಲ್ ಎಸ್ಟೇಟ್ ದಂಧೆ ಮಾಡುವವರ ಏಜೆಂಟ್‌ನಂತೆ ಕಾರ್ಯ ನಿರ್ವಹಿಸುತ್ತಿವೆ.

ಇರಲು ಮನೆಯಿಲ್ಲ. ಊಟಕ್ಕೆ ಧಾನ್ಯವಿಲ್ಲ. ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯ ರಿಯಾಯಿತಿ ದರದಲ್ಲಿ ಸಿಗುತ್ತಿಲ್ಲ. ಸೀಮೆಎಣ್ಣೆ -ಸುಲಭವಾಗಿ ಕೈಗೆಟುಕುವ ದರದಲ್ಲಿ ನೀಡುತ್ತಿಲ್ಲ. ಆಹಾರ ಧಾನ್ಯಗಳ ಬೆಲೆ ಗಗನಕ್ಕೇರಿದ್ದು, ಜನ ಸಾಮಾನ್ಯರು ಸಂಸಾರ ನಡೆಸುವುದು ದುಸ್ತರವಾಗಿದೆ. ದುಡಿತಕ್ಕೆ ತಕ್ಕಂತೆ ವರಮಾನ ಸಿಗುತ್ತಿಲ್ಲ. ಇದಕ್ಕೆಲ್ಲ ಯಾರು ಹೊಣೆ?

'ಆಡು ಮುಟ್ಟದ ಗಿಡವಿಲ್ಲ' ಎಂಬ ನಾಣ್ನುಡಿಯಂತೆ ಜಾಗತೀಕರಣ-ಉದಾರೀಕರಣ-ಖಾಸಗೀಕರಣದ ಪೆಡಂಭೂತ ಎಲ್ಲ ಕ್ಷೇತ್ರಗಳಲ್ಲಿ ಪ್ರವೇಶಿಸಿ ದುಷ್ಪರಿಣಾಮ ಬೀರುತ್ತಿದೆ. ಇದರಿಂದಾಗಿ ಗುಲಬರ್ಗಾ ಜಿಲ್ಲೆಯ ಕೈಗಾರಿಕೆ-ಕೃಷಿ-ಉದ್ಯೋಗ-ಶಿಕ್ಷಣ-ವ್ಯಾಪಾರ-ಗುಡಿ ಕೈಗಾರಿಕೆಗಳು ಅಧೋಗತಿಗೆ ಇಳಿದಿವೆ. ಇಷ್ಟೆಲ್ಲಾ ಅವಾಂತರ ನಡೆಯುತ್ತಿದ್ದರೂ ಕೇಂದ್ರ-ರಾಜ್ಯ ಸರ್ಕಾರಗಳು ಇದಕ್ಕೆ ಪರ್ಯಾಯವಾದ ಜನಪರವಾದ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುತ್ತಿಲ್ಲ. ಹಿಂದೆ ಆರು ವರ್ಷ ದೇಶದಲ್ಲಿ ಆಳ್ವಿಕೆ ನಡೆಸಿದ ಎನ್.ಡಿ.ಎ ಇದೀಗ 5 ವರ್ಷ ಪೂರೈಸುತ್ತಿರುವ ಯುಪಿಎ ಎರಡೂ ಸರ್ಕಾರಗಳೂ ಜಾಗತೀಕರಣದ ಧೋರಣೆಗೆ ಜೋತುಬಿದ್ದಿವೆ. ರಾಜ್ಯ ಬಿಜೆಪಿ ಸರ್ಕಾರದ ದುರಾಡಳಿತದಿಂದ ಜನರ ನೋವಿನ ಗಾಯಕ್ಕೆ ಉಪ್ಪು ಸವರಿದಂತಾಗಿದೆ.

ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಜನ ಈ ಎಲ್ಲವನ್ನು ಪರಿಗಣಿಸಿ ತೃತೀಯ ರಂಗದ ಅಭ್ಯರ್ಥಿಯನ್ನು ಬೆಂಬಲಿಸಬೇಕಾದ ಅಗತ್ಯವಿದೆ.

○ ಸತ್ಯಬೋಧ ಕಾಗಲಕರ್

ಎತ್ತ ಸಾಗುತ್ತಿದ್ದಾರೆ ಕರಾವಳಿಯ ಅಲ್ಪಸಂಖ್ಯಾತರು

ಪುಟ 8 ರಿಂದ

ತನ್ನ ಮತವನ್ನು ಬಿಟ್ಟು ಬೇರೊಂದು ಮತಕ್ಕೆ ಸೇರಿಸಿಕೊಳ್ಳಬಹುದು. ಪ್ರತಿಯೊಬ್ಬರಿಗೂ ತಮ್ಮ ಮತವನ್ನು ಕುರಿತು ಪ್ರಚಾರ ಮಾಡುವ ಹಕ್ಕಿದೆ. ಹಿಂದೂಗಳಿಗೂ ಆ ಹಕ್ಕಿದೆ. ವಿದೇಶಗಳಲ್ಲಿ ಇಂದು ಅನೇಕ ಹಿಂದು ಧರ್ಮ ಪ್ರಚಾರ ಸಂಸ್ಥೆಗಳು ಹಿಂದು ಮತ ಪ್ರಚಾರದಲ್ಲಿ ತೊಡಗಿವೆ. ಅನೇಕ ವಿದೇಶಿಯರು ತಮ್ಮ ಕ್ರೈಸ್ತ ಧರ್ಮವನ್ನು ತ್ಯಜಿಸಿ ಹಿಂದೂ ಧರ್ಮವನ್ನು ಅಂಗೀಕರಿಸಿದ್ದನ್ನು ಮಾಧ್ಯಮಗಳು ವರದಿ ಮಾಡುತ್ತಿರುವುದನ್ನು ನಾವು ನೋಡುತ್ತಿರುತ್ತೇವೆ. ಮತಧರ್ಮ ಎಂಬುದು ವ್ಯಕ್ತಿಗತವಾದ ವಿಷಯವಾಗಿರುವುದರಿಂದ ಮತಾಂತರ ಮಾಡುವ, ಮತಾಂತರಗೊಳ್ಳುವ ಹಕ್ಕನ್ನು ಆಧುನಿಕ ಸಮಾಜ ಮಾನ್ಯ ಮಾಡಲೇಬೇಕು.

ಹಾಗೆಯೇ ಎಲ್ಲಾ ಮುಸಲ್ಮಾನರು ಭಯೋತ್ಪಾದಕರು ಎಂಬುದನ್ನು ಬಿಂಬಿಸಲು ಮತ್ತು ಆ ಮೂಲಕ ಮುಸಲ್ಮಾನರ ವಿರುದ್ಧ ಇತರ ಕೋಮಿನವರನ್ನು ಎತ್ತಿಕಟ್ಟಲು ಹಿಂದುತ್ವ ಸಂಘಟನೆಗಳು ಭಾರೀ ಪ್ರಯತ್ನ ಮಾಡುತ್ತಿವೆ. ಆದರೆ ಈ ದೇಶದಲ್ಲಿ ಭಯೋತ್ಪಾದನೆಯ ಮೂಲವನ್ನು ಹುಡುಕುತ್ತಾ ಹೋದಾಗ ಕೋಮುವಾದವೇ ಭಯೋತ್ಪಾದನೆಯ ಮೂಲ ಎಂಬುದು ಸಾಬೀತಾಗುತ್ತದೆ. ಬಾಬ್ರಿ ಮಸೀದಿ ಧ್ವಂಸವಾದ ನಂತರವೇ ದೇಶದಲ್ಲಿ ಭಯೋತ್ಪಾದನೆ ಹೆಚ್ಚಾಗಿದೆ. ಅಲ್ಪಸಂಖ್ಯಾತ ಮುಸಲ್ಮಾನ ಸಮಾಜದ ಮೇಲೆ ನಿರಂತರವಾಗಿ ನಡೆಸಲಾಗುತ್ತಿರುವ ದಾಳಿ ದೌರ್ಜನ್ಯಗಳಿಂದ ಅವರೊಳಗೆ ಹತಾಶ ಭಾವನೆಗಳು ಬೆಳೆಯತೊಡಗಿವೆ. ತಮಗೆ ಈ ದೇಶದಲ್ಲಿ ರಕ್ಷಣೆ ಇಲ್ಲ ಎಂಬ ಆತಂಕ ಅವರನ್ನು ಕಾಡಲಾರಂಭಿಸಿದೆ. ಅವರಲ್ಲಿ ಕೆಲವು ಬಿಸಿ ರಕ್ತದ ಯುವಕರು ಸೇಡಿಗಾಗಿ ಪರಿತಪಿಸುವಂತಾಗಿದೆ. ಗಡಿಯಾಚೆಗಿನ ಕುಮ್ಮಕ್ಕು ಅವರನ್ನು ಭಯೋತ್ಪಾದಕರನ್ನಾಗಿಸಲು ನೆರವಾಗುತ್ತಿದೆ.

ಮುಸಲ್ಮಾನರ ಮೇಲೆ ದಾಳಿ ದೌರ್ಜನ್ಯ ಹೆಚ್ಚಿಸುವುದರಿಂದ ಭಯೋತ್ಪಾದನೆಯ ನಿಗ್ರಹ ಸಾಧ್ಯವಿಲ್ಲ. ಹಿಂದುತ್ವ ಸಂಘಟನೆಗಳ ಆಕ್ರಮಣಕಾರಿ ಸಿದ್ಧಾಂತವನ್ನು ಕೈಬಿಡದೆ ಹೋದರೆ ಭಯೋತ್ಪಾದನೆ ಹೆಚ್ಚುತ್ತಾ ಹೋಗುತ್ತದೆ. ಹಿಂದು ಭಯೋತ್ಪಾದಕ ಸಂಘಟನೆಗಳ ಮಾದರಿಯಲ್ಲೇ ಮುಸಲ್ಮಾನರು ಸಹ ಪ್ರತ್ಯೇಕ ಸಂಘಟನೆಗಳನ್ನು ಕಟ್ಟುವ ಪ್ರಯತ್ನ ಮಾಡುತ್ತಾರೆ. ಕರಾವಳಿ ಜಿಲ್ಲೆಗಳಲ್ಲಿ ಇಂದು ಕೆ.ಎಫ್.ಡಿ, ಪಾಪ್ಯುಲರ್ ಫ್ರಂಟ್ ಮೊದಲಾದ ಸಂಘಟನೆಗಳು ಮುಸಲ್ಮಾನ ಯುವಕರನ್ನು ಆಕರ್ಷಿಸುತ್ತಿವೆ. ಈ ಬೆಳವಣಿಗೆಗಳು ಸಮಾಜವನ್ನು ಹೆಚ್ಚೆಚ್ಚು ವಿನಾಶದತ್ತ ತಳ್ಳುತ್ತಿದೆ.

ಕರಾವಳಿ ಅಲ್ಪಸಂಖ್ಯಾತರಿಗೊಂದು ಅವಕಾಶ :

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅಲ್ಪಸಂಖ್ಯಾತರಿಗೆ ಮೊಟ್ಟಮೊದಲ ಬಾರಿಗೆ ಒಂದು ಅವಕಾಶ ಬಂದೊದಗಿದೆ. ಈ ಎರಡೂ ಲೋಕಸಭಾ ಕ್ಷೇತ್ರಗಳಲ್ಲಿ ಈ ಸಲ ಎರಡೂ ಕಮ್ಯೂನಿಸ್ಟ್ ಪಕ್ಷಗಳ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ದಕ್ಷಿಣಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ ಸ್ಪರ್ಧಿಸುತ್ತಿದ್ದರೆ ಉಡುಪಿ, ಚಿಕ್ಕಮಗಳೂರು ಕ್ಷೇತ್ರದಲ್ಲಿ ಸಿಪಿಐ ಅಭ್ಯರ್ಥಿ ಕಣದಲ್ಲಿದ್ದಾರೆ.

ದೇಶದಲ್ಲಿ ಎಲ್ಲ ವಿಧದ ಕೋಮುವಾದವನ್ನು ಮತ್ತು ಭಯೋತ್ಪಾದನೆಯನ್ನು ಎಡಪಕ್ಷಗಳು ಮಾತ್ರ ದೃಢವಾಗಿ ವಿರೋಧಿಸುತ್ತಾ ಬಂದಿವೆ. ಎಡಪಕ್ಷಗಳು ಬಲಿಷ್ಠವಾಗಿರುವ ರಾಜ್ಯಗಳಲ್ಲಿ (ಪಶ್ಚಿಮ ಬಂಗಾಳ, ಕೇರಳ, ತ್ರಿಪುರ) ಕೋಮುಗಲಭೆಗಳಿಲ್ಲ. ಕೋಮುವಾದಿ ಬಿಜೆಪಿಗೆ ಅಲ್ಲಿ ನೆಲೆಯಿಲ್ಲ. ಕಮ್ಯೂನಿಸ್ಟ್ ಪಕ್ಷಗಳು ಮತಾಂತರದ ಹಕ್ಕನ್ನು ಪ್ರತಿಪಾದಿಸುತ್ತಾ ಬಂದಿವೆ. ಸಾಚಾರ್ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸಿ ಅಲ್ಪಸಂಖ್ಯಾತ ಮುಸಲ್ಮಾನರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಎಡಪಕ್ಷಗಳು ಒತ್ತಾಯಿಸುತ್ತಿವೆ. ದಲಿತ ಕ್ರೈಸ್ತ ಹಾಗೂ ದಲಿತ ಮುಸಲ್ಮಾನರಿಗೂ ಮೀಸಲಾತಿ ಸೌಲಭ್ಯವನ್ನು ವಿಸ್ತರಿಸಬೇಕೆಂದು ಅವು ಆಗ್ರಹಿಸುತ್ತಾ ಬಂದಿವೆ. ಕೋಮುವಾದವನ್ನು ತಡೆಯಲು, ಕೋಮುಗಲಭೆಗಳನ್ನು ತಡೆಗಟ್ಟಲು ಒಂದು ಸಮಗ್ರವಾದ ಕಾನೂನನ್ನು ರೂಪಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತಾ ಇದೆ.

ಇದೆಲ್ಲ ಅಲ್ಪಸಂಖ್ಯಾತರನ್ನು ಓಲೈಸುವದಕ್ಕಾಗಿ ಅಲ್ಲ. ಕಮ್ಯೂನಿಸ್ಟ್ ಪಕ್ಷಗಳು ಮತದ ಆಧಾರದಲ್ಲಿ ಜನರನ್ನು ಸಂಘಟಿಸುವುದನ್ನಾಗಲಿ, ಓಟುಗಳನ್ನು ಕೇಳುವುದನ್ನಾಗಲಿ ಮಾಡುವುದಿಲ್ಲ. ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗ ಬೇಕಾದರೆ ದಲಿತರಿಗೆ, ಅಲ್ಪಸಂಖ್ಯಾತರಿಗೆ ಅವರ ಹಕ್ಕುಗಳನ್ನು ಅನುಭವಿಸಲು ಅವಕಾಶ ದೊರಕಿಸುವುದು ಅತ್ಯಗತ್ಯವಾಗಿದೆ ಎಂಬ ಉದ್ದೇಶದಿಂದ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ದಲಿತರ ಮತ್ತು ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಹೋರಾಟ ನಡೆಸುವುದಕ್ಕೆ ಆದ[illegible] ನೀಡುತ್ತವೆ. ಕರಾವಳಿ ಜಿಲ್ಲೆಗಳಲ್ಲಿ [illegible] ಅವಧಿಯಲ್ಲಿ ಅಲ್ಪಸಂಖ್ಯಾತ ಮುಸಲ್ಮಾ[illegible] ಮೇಲೆ ಹಾಗೂ ಕ್ರೈಸ್ತರ ಮೇಲೆ ದಾಳಿಗ[illegible] ನಡೆದಾಗ ಸಿಪಿಐ(ಎಂ) ಬೀದಿಗಿಳಿದು ಹೋರಾ[illegible] ಮಾಡಿತ್ತು. ಎಡಶಕ್ತಿಗಳೇ ದೇಶ[illegible] ಆಶಾಕಿರಣವಾಗಿದ್ದು ಈ ಲೋಕಸ[illegible] ಚುನಾವಣೆಯಲ್ಲಿ ಕರಾವಳಿ ಜಿಲ್ಲೆಗ[illegible] ಅಲ್ಪಸಂಖ್ಯಾತರು ತಮ್ಮ ನಿಜವಾದ ಮಿತ್ರ[illegible] ಯಾರು ಎಂಬುದನ್ನು ಕಂಡುಕೊಳ್ಳಲು ಸಿಕ್ಕಿರು[illegible] ಈ ಅವಕಾಶವನ್ನು ಕಳೆದುಕೊಳ್ಳುವು[illegible] ಉಚಿತವಾಗದು.

ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಪಕ್ಷಗ[illegible] ಒಂದು ಚಿಕ್ಕ ಶಕ್ತಿ ಹೌದು. ಆದರೆ ದೇಶಮಟ್ಟದ[illegible] ಎಡಪಕ್ಷಗಳು ಒಂದು ನಿರ್ಣಾಯ ಶಕ್ತಿ. ಮುಂದಿ[illegible] ಸರ್ಕಾರ ರಚನೆಯಲ್ಲಿ ಎಡಪಕ್ಷಗಳ ಪಾ[illegible] ನಿರ್ಣಾಯಕವಾಗಿದೆ. ಕೋಮುವಾದದ ವಿ[illegible] ದೃಢವಾದ ಹೋರಾಟ ನಡೆಸಲು ಹಾ[illegible] ಜನಗಳಿಗೆ ಒಂದು ಪರ್ಯಾಯ ಆಥಿ[illegible] ದೋರಣೆಗಳುಳ್ಳಆಡಳಿತವನ್ನು ಒದಗಿಸ[illegible] ಬದ್ಧವಾಗಿರುವ ಎಡಪಕ್ಷಗಳು ಕಾಂಗ್ರೆಸ್ಸೇತ[illegible] ಬಿಜೆಪಿಯೇತರ ಪಕ್ಷಗಳನ್ನು ಒಂದುಗೂಡಿ[illegible] ಒಂದು ಪರ್ಯಾಯ ಜಾತ್ಯಾತೀತ ಸರ್ಕಾರವ[illegible] ಅಸ್ತಿತ್ವಕ್ಕೆ ತರಲು ಗಂಭೀರ ಪ್ರಯತ್ನ ಮಾಡುತ್ತಿ[illegible] ಈ ಪ್ರಯತ್ನವನ್ನು ಸಫಲಗೊಳಿಸುವ ಅಂಗವಾ[illegible] ಕರಾವಳಿಯಲ್ಲಿ ಸ್ಪರ್ಧಿಸಿರುವ ಎಡಪಕ್ಷಗ[illegible] ಅಭ್ಯರ್ಥಿಗಳನ್ನು ಹಾಗೂ ಇತರ ಕ[illegible] ಎಡಪಕ್ಷಗಳೊಂದಿಗೆ ಕೈಜೋಡಿಸಿರು[illegible] ಜೆಡಿ(ಎಸ್) ಅಭ್ಯರ್ಥಿಗಳನ್ನು ಗೆಲ್ಲಿಸುವು[illegible] ಆಗಬೇಕಾಗಿದೆ.

ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರ ರಕ್ಷಣೆ ಅಸಾಧ್ಯ

ಹಿಂದುತ್ವ ಸಂಘಟನೆಗಳ ಯೋಜನಾಬದ್ಧ ದಾಳಿಗಳಿಗೆ ಬಲಿಯಾಗಿ ನಲುಗಿದ ಅಲ್ಪಸಂಖ್ಯಾತ ಮುಸಲ್ಮಾನರು ಮತ್ತು ಕ್ರೈಸ್ತರ ನೆರವಿಗೆ ಧಾವಿಸುವಲ್ಲಿ ಕಾಂಗ್ರೆಸ್ ಪಕ್ಷ ಸಂಪೂರ್ಣ ವಿಫಲವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಮುಸಲ್ಮಾನ ಮತ್ತು ಕ್ರೈಸ್ತ ಸಮುದಾಯಗಳಿಗೆ ಸೇರಿದ ಅನೇಕ ಜನ ನಾಯಕರಿದ್ದಾರೆ. ಕರಾವಳಿ ಜಿಲ್ಲೆಗಳಲ್ಲಿ ಕೋಮುಗಲಭೆಗಳು ನಡೆದಾಗ ಕಾಂಗ್ರೆಸ್ ಪಕ್ಷ ಅವುಗಳನ್ನು ಬಲವಾಗಿ ಖಂಡಿಸಲಿಲ್ಲ. ಬದಲಾಗಿ ಹಿಂದುತ್ವ ಸಂಘಟನೆಗಳು ಹಮ್ಮಿಕೊಂಡ ಹಿಂದೂ ಸಮಾಜೋತ್ಸವಗಳಲ್ಲಿ ಕಾಂಗ್ರೆಸ್ ಮುಖಂಡರೂ ಭಾಗವಹಿಸುವ ಮೂಲಕ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುವ ಶಕ್ತಿಗಳಿಗೆ ಬೆಂಬಲ ನೀಡಿದ್ದಾರೆ. ರಾಜ್ಯ ಬಿಜೆಪಿ ಸರ್ಕಾರ ರಾಜ್ಯದ ಅಲ್ಪಸಂಖ್ಯಾತರನ್ನು ಬೆದರಿಸಿ, ಅವರ ಪ್ರಾರ್ಥನಾಲಯಗಳಿಗೆ ಹಾನಿಯುಂಟು ಮಾಡಿ, ಅವರ ಮೇಲೆ ಮಾರಣಾಂತಿಕ ಹಲ್ಲೆಗಳನ್ನು ಮಾಡುತ್ತಿರುವಾಗ ಕಾಂಗ್ರೆಸ್ ಪಕ್ಷ ಮೂಕಪ್ರೇಕ್ಷಕನಂತೆ ವರ್ತಿಸಿತು. ಆದ್ದರಿಂ[illegible] ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಪಕ್ಷದ ಮೇಲ[illegible] ಯಾವುದೇ ವಿಶ್ವಾಸ ಉಳಿಯದಂತಾಗಿದೆ.

ದೇಶದ ವಿವಿಧ ರಾಜ್ಯಗಳಲ್ಲಿ ಹಿಂದುತ್ವ ಶಕ್ತಿಗಳ ಬಗ್ಗೆ, ಅವುಗಳ ಆಕ್ರಮಣಕಾರಿ ನೀತಿಯ ಬಗ್ಗೆ ಕಾಂಗ್ರೆಸ್ ಮೃದು ಧೋರಣೆಯನ್ನು ಅನುಸರಿಸುತ್ತಾ ಬಂದದ್ದರಿಂದಾಗಿ ಆ ರಾಜ್ಯಗಳಲ್ಲಿ ಬಿಜೆಪಿ ಅಪಾಯಕಾರಿಯಾಗಿ ಬೆಳೆದಿದೆ. ಕೆಲವು ಕಾಂಗ್ರೆಸ್ ಸರ್ಕಾರಗಳೇ ಗೋಹತ್ಯೆ ನಿಷೇದ ಕಾನೂನು, ಮತಾಂತರ ನಿಷೇದ ಕಾನೂನುಗಳನ್ನು ಪಾಸು ಮಾಡಿ ಹಿಂದುತ್ವ ಶಕ್ತಿಗಳ ಬೆಳವಣಿಗೆಗೆ ಸಹಕಾರಿಯಾಗಿವೆ. ಡಿ.ಬಿ.ಚಂದ್ರೇಗೌಡ ರಂತಹ ಕಾಂಗ್ರೆಸ್ ನಾಯಕರು ಯಾವುದೇ ಅಳುಕಿಲ್ಲದೆ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರುತ್ತಿರುವುದನ್ನು ನೋಡಿದರೆ ಕಾಂಗ್ರೆಸ್ ಪಕ್ಷವು ಸಂಪೂರ್ಣವಾಗಿ ಸೈದ್ಧಾಂತಿಕ ಅಧೋಗತಿಗೆ ತಲುಪಿದೆ ಎಂಬುದು ಸ್ಪಷ್ಟವಾಗುತ್ತದೆ.

○

ಹೀಗೊಂದು 'ಸರಳ ಮದುವೆ' ಸಂಭ್ರಮ


ತಲೆಯ ಮೇಲೆ ಉರಿ ಬಿಸಿಲು, ಅಲ್ಲಲ್ಲಿ ಮೆಕ್ಕೆಜೋಳದ ತೆನೆಗಳ ರಾಶಿ, ಬೇವಿನ ಕಟ್ಟೆಯ ನೆರಳಲ್ಲಿ ಒಂದಿಷ್ಟು ಜನ, ಮದುವೆ ಸಮಾರಂಭಕ್ಕೆ ಸಜ್ಜಾಗಿದ್ದ ಪೆಂಡಾಲ್‌ನಲ್ಲಿ ಜನರೇ ಇರಲಿಲ್ಲ. ನಾನು ಹಾಗೂ ಕಾಂ. ನಿತ್ಯಾನಂದ ಸ್ವಾಮಿ, ಕವಿಯತ್ರಿ ಮಾಧವಿ ಭಂಡಾರಿ, ಕಾಂ.ಜಗನ್ನಾಥ, ಕಾಂ.ಭಾಸ್ಕರ ರೆಡ್ಡಿ ಬಾಚಿಗೊಂಡನ ಹಳ್ಳಿಗೆ ಮುಟ್ಟಿದಾಗ ಕಂಡ ದೃಶ್ಯವಿದು.

ಆಗಲೇ ಕಾಂ.ಯು.ಬಸವರಾಜ, ಕಾಂ.ರಂಗಪ್ಪ ದಾಸರ್, ಕಾಂ.ಮಾಳಮ್ಮ ಹಾಗೂ ಬಾಚಿಗೊಂಡನಹಳ್ಳಿಯವರೇ ಆಗಿರುವ ಪ್ರಗತಿಪರ ಲೇಖಕ ಹುರುಕಡ್ಲಿ ಶಿವಕುಮಾರ್ ಮರದ ನೆರಳಲ್ಲಿ ಇದ್ದರು. ಮದುವೆಯಾಗುವ ವೀರಣ್ಣ ಕಲ್ಮನಿ ಹಾಗೂ ವಿಜಯಲಕ್ಷ್ಮಿ ಎಸ್ಎಫ್ಐ-ಡಿವೈಎಫ್ಐ ಸಂಗಾತಿಗಳ ಜೊತೆ ಹರಟೆ ಹೊಡೆಯುತ್ತಾ ಓಡಾಡುತ್ತಿದ್ದರು.

ಇನ್ನೇನೂ ಕಾರ್ಯಕ್ರಮ ಶುರು ಮಾಡೋಣ ಎಂದು ಯು.ಬಸವರಾಜ ಹೇಳಿದಾಗ ಎಸ್.ಎಫ್.ಐ. ಸಂಗಾತಿಗಳು ಕ್ರಾಂತಿಗೀತೆಗಳನ್ನು ಹಾಡತೊಡಗಿದರು. ಆಗ ನಿಧಾನಕ್ಕೆ ಪೆಂಡಾಲ್ ಎನ್ನುವುದು ಭರ್ತಿಯಾಯಿತು.

ಸಂಗಾತಿಗಳಾದ ವೀರಣ್ಣ ಕಲ್ಮನಿ ಹಾಗೂ ವಿಜಯಲಕ್ಷ್ಮಿ ಈ ಸರಳ ಮದುವೆಗೆ ಪಟ್ಟು ಹಿಡಿದು ಎರಡು ಮನೆಯವರನ್ನು ಒಪ್ಪಿಸಿದ್ದು, ಅವರೆಲ್ಲಾ ಈ ಮದುವೆ ಸಮಾರಂಭದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಎರಡು ಹೂವಿನ ಹಾರಗಳ ವಿನಿಮಯದ ಮೂಲಕ ಈ ಮದುವೆ ನೆರವೇರಿತು. ಉದ್ಘಾಟನೆ ಎನ್ನುವ ಹೆಸರಲ್ಲಿ ಮೊದಲು ಮಾತನಾಡಿದ್ದು, ಕವಿಯತ್ರಿ ಮಾಧವಿ ಭಂಡಾರಿ.

ಅವರು ಪ್ರಸ್ತಾಪಿಸಿದ್ದು, ವರದಕ್ಷಿಣೆ ಹಾಗೂ ಹೆಣ್ಣು ಭ್ರೂಣ ಹತ್ಯೆಯಂತಹ ಜ್ವಲಂತ ಸಮಸ್ಯೆಗಳ ಬಗ್ಗೆ. ವಿವರವಾಗಿ ಮಾತನಾಡಿದ ಅವರು, ಸರಳ ಮದುವೆಗಳು ಹಾಗೂ ಹೆಣ್ಣು ಗಂಡು ಪರಸ್ಪರ ಪ್ರೀತಿಸಿ ಮದುವೆಯಾಗುವಂತಹ ವಾತವರಣ ನಿರ್ಮಾಣವಾದರೆ, ಇಂತಹ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ ಎಂದರು. ಪ್ರೀತಿಸಿ ಮದುವೆಯಾದ ಈ ನವ ಜೋಡಿಗಳಿಗೆ ಶುಭಾಷಯ ಹೇಳಲು ದೂರದಿಂದ ಕಷ್ಟಪಟ್ಟು ಬಂದರೂ ನನಗೆ ಅತೀವ ಸಂತೋಷವಾಗಿದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಿಪಿ.ಐ.ಎಂ. ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದ ಸ್ವಾಮಿ ಅವರಂತೂ ಮದುವೆಯನ್ನು ಅದ್ದೂರಿ ಮದುವೆಗಳ ಜನ್ಮ ಜಾಲಾಡಿದರು. ಈ ಮದುವೆಗಳ ಹಿಂದೆ ರೈತರನ್ನು, ದುಡಿಯುವ ವರ್ಗಗಳನ್ನು ಸಾಲಗಾರರನ್ನಾಗಿ ಮಾಡಿ, ಶೋಷಣೆ ನಡೆಸಲು ಅದ್ದೂರಿ ಮದುವೆ ಎನ್ನುವ ಸಂಪ್ರದಾಯ ಯಾವ ರೀತಿ ಕೆಲಸ ಮಾಡುತ್ತಿದೆ ಎಂದು ವಿಶ್ಲೇಷಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿ.ಪಿ.ಐ.ಎಂ. ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜ ಅವರದ್ದೂ ಇದೇ ಅಭಿಪ್ರಾಯವಾಗಿದ್ದರೂ ಅವರು ಉದಾಹರಣೆಗಳ ಮೂಲಕ ಅದ್ದೂರಿ ಮದುವೆಯ ಶೋಷಣೆಯನ್ನು ಬಿಚ್ಚಿಟ್ಟರು. ಗ್ರಾಮೀಣ ಪ್ರದೇಶದಲ್ಲಿ ರೈತರು ತಮ್ಮ ಹೊಲಗಳನ್ನು, ಮನೆಗಳನ್ನು ಮಾರಿಕೊಂಡು, ಮಕ್ಕಳ ಮದುವೆ ಮಾಡಿ, ಸಂಕಷ್ಟಗಳಿಗೆ ಸಿಲುಕಿ ಬಿಡುವುದನ್ನು ಮನಮಟ್ಟುವಂತೆ ವಿವರಿಸಿದರು. ಪ್ರಗತಿಪರ ಲೇಖಕ ಹುರಕಡ್ಲಿ ಶಿವಕುಮಾರ್ ಅವರಂತೂ ಇಂತಹ ಸರಳ ಮದುವೆಗೆ ಒಪ್ಪಿಗೆ ನೀಡಿರುವ ಪೋಷಕರ ಮೇಲೆ ಅಂತಃಕರಣದ ಮಳೆ ಹರಿಸಿದರು. ಬಾಚಿಗೊಂಡನ ಹಳ್ಳಿಯಂತಹ ಊರಲ್ಲಿ ಈ ಮದುವೆ ನಡೆಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದ ಅವರು, ಮದುವೆ ಎನ್ನುವುದು ಒಂದು ಗಂಡು, ಹೆಣ್ಣು ಪರಸ್ಪರ ಪ್ರೀತಿಸಿ, ಸಮಾಜದಲ್ಲಿ ಸಾಮರಸ್ಯದಿಂದ ಬಾಳುವುದಾಗಿದೆ. ಮದುವೆ ಸಂಪ್ರದಾಯದ ಹೆಸರಲ್ಲಿ ಈಗ ವ್ಯವಹಾರವಾಗಿ ಹೋಗಿದೆ. ಇದನ್ನು ಅರ್ಥ ಮಾಡಿಕೊಂಡು ಮುಖ್ಯವಾಗಿ ಯುವಜನರು ಸರಳ ಮದುವೆಗಳ ಬಗ್ಗೆ ಯೋಚಿಸಬೇಕು ಎಂದರು. ಪತ್ರಕರ್ತ ಪರುಶುರಾಮ ಕಲಾಲ್ ಅವರಂತೂ ಮದುವೆ ಎನ್ನುವುದೇ ಒಂದು ಸಂಪ್ರದಾಯ. ಬಡವರ ಮದುವೆಗಳು ಅತ್ಯಂತ ಸರಳವಿರುತ್ತವೆ. ರೈತರು ಇಂತಹ ಮದುವೆಗಳ ಕಡೆ ಮನಸ್ಸು ಮಾಡದೇ ಅದ್ದೂರಿ ಮದುವೆಗಳ ಕಡೆ ಹೋಗುವ ಮೂಲಕ ವರದಕ್ಷಿಣೆಯಂತಹ ಸಮಸ್ಯೆಗಳು ಈಗ ಗ್ರಾಮೀಣ ಪ್ರದೇಶಕ್ಕೂ ಹರಡಿ, ಬದುಕು ನರಕವಾಗುತ್ತಿದೆ. ಸರಳ ಮದುವೆಗಳು ಇಂತಹವುಗಳಿಗೆ ಉತ್ತರವಾಗುತ್ತವೆ ಎಂದರು. ಡಿ.ವೈ.ಎಫ್.ಐ. ಮುಖಂಡ ರಂಗಪ್ಪ ದಾಸರ್ ಹಾಗೂ ಮತ್ತಿತರರು ಶುಭ ಹಾರೈಸಿ ಮಾತನಾಡಿದರು. ಪೋಷಕರು ಮಾತನಾಡಿ ಸರಳ ಮದುವೆ ಸಮರ್ಥಿಸಿದ್ದು ಈ ಸಮಾರಂಭದ ವೈಶಿಷ್ಟವಾಗಿತ್ತು. ಡಿ.ವೈ.ಎಫ್.ಐ. ಮುಖಂಡ ಹುಳ್ಳಿಪ್ರಕಾಶ್ ಸ್ವಾಗತಿಸಿ, ನಿರೂಪಿಸಿದರು. ಡಿವೈಎಫ್ಐ ಮುಖಂಡ ಓಲೆಂದಪ್ಪ ವಂದಿಸಿದರು. ಈ ಸರಳ ಮದುವೆಯಲ್ಲಿ ಗ್ರಾಮದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶುಭ ಹಾರೈಸಿ, ಸರಳ ಮದುವೆಯ ಬಗ್ಗೆ ಒಲವು ತೋರಿಸಿದ್ದು ವಿಶೇಷವಾಗಿತ್ತು. ಅಂದ ಹಾಗೆ ವೀರಣ್ಣ ಕಲ್ಮನಿ, ವಿಜಯಲಕ್ಷ್ಮಿ ಇಬ್ಬರೂ ಬಳ್ಳಾರಿ ಜಿಲ್ಲೆಯಲ್ಲಿ ಎಸ್ಎಫ್ಐ ಮುಖಂಡರಾಗಿದ್ದವರು. ಈಗ ವೀರಣ್ಣ ಕಲ್ಮನಿ 'ಜನಶಕ್ತಿ'ಯಲ್ಲಿ ದುಡಿಯುತ್ತಿದ್ದಾರೆ. ವಿಜಯಲಕ್ಷ್ಮಿಯುವರು ಚಳುವಳಿಯೊಂದಿಗೆ ಗುರುತಿಸಿ ಕೊಂಡವರಾಗಿದ್ದಾರೆ.



ತೃತೀಯ ಪರ್ಯಾಯ ಗೆಲ್ಲಲಿ...

ಪುಟ 6 ರಿಂದ

ಬಾಬಾಬುಡನ್‌ಗಿರಿ-ದತ್ತ ಪೀಠದ ಸಮಸ್ಯೆಯನ್ನು ಮುಂದುಮಾಡಿ ಲೋಕಸಭೆ ಹಾಗೂ ವಿಧಾನಸಭೆಯ ಬಹುತೇಕ ಎಲ್ಲಾ ಕ್ಷೇತ್ರಗಳನ್ನು ತನ್ನದಾಗಿಸಿ ಕೊಂಡ ಬಿಜೆಪಿ ಕೋಮು ಸೌಹಾರ್ದವನ್ನು ಕೆಡಿಸಿ ಸಾಮಾಜಿಕ ಅಶಾಂತಿಯನ್ನು ಸೃಷ್ಟಿಸಿ ರಾಜಕೀಯ ಲಾಭಮಾಡಿಕೊಳ್ಳುವತ್ತವೇ ತನ್ನ ಚಿತ್ತ ನೆಟ್ಟಿದೆ. ಹೀಗೆ ಹತ್ತಾರು ಜ್ವಲಂತ ಸಮಸ್ಯೆಗಳ ಆಗರವಾಗಿರುವ ಈ ಕ್ಷೇತ್ರದಲ್ಲಿ ರಾಜಕೀಯ ಜಿದ್ದಾ- ಜಿದ್ದಿಯು ಪ್ರಭಾವವಾಗಿಯೇ ನಡೆಯುತ್ತಿದೆ.

ಕಣದಲ್ಲಿರುವ ಕಾಂಗ್ರೆಸ್-ಬಿಜೆಪಿ ಅಭ್ಯರ್ಥಿಗಳು ಹಣ ಮತ್ತು ಜಾತಿ ಆಧಾರದಲ್ಲಿಯೇ ಮತಗಳಿಕೆಗಾಗಿ ಹಾತೊರೆಯುತ್ತಿದ್ದಾರೆ. ಈಗಾಗಲೇ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳ ಪೈಕಿ 7 ರಲ್ಲಿ ಜಯಗಳಿಸಿರುವ ಬಿಜೆಪಿ ಶಾಸಕರ ಆಡಳಿತ ವೈಖರಿ ಜನತೆಗೆ ಬೇಸರ ತರಿಸಿದೆ. ಅಭಿವೃದ್ಧಿ ಆಡಳಿತಕ್ಕೆ ಎಳ್ಳುನೀರು ಬಿಟ್ಟಿರುವ ಬಿಜೆಪಿ ಶಾಸಕರುಗಳು ವ್ಯಾಪಕ ಭ್ರಷ್ಟಾಚಾರದಲ್ಲಿ ನಿರತರಾಗಿರುವುದು. ಮತದಾರರಲ್ಲಿ ಬಿಜೆಪಿಯ ಬಗ್ಗೆ ಅಸಮಾಧಾನವಿದೆ. ಕಾಂಗ್ರೆಸ್ ಪಕ್ಷವು ಸಹ ಅಧಿಕಾರದಲ್ಲಿದ್ದಾಗ ದೇಶದ ಹಿತವನ್ನು ಬಲಿಕೊಟ್ಟು ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿರುವುದರಿಂದ ಕಾಂಗ್ರೆ-ಬಿಜೆಪಿಗಿಂತ ಹೋರಾಟದ ಪಕ್ಷ ಸಿಪಿಐ ಉತ್ತಮವೆಂಬ ಅಭಿಪ್ರಾಯವಿದೆ.

ಜನತಾದಳ, ಸಿಪಿಐ(ಎಂ)ಗಳನ್ನೊಳಗೊಂಡ ತೃತೀಯ ಪರ್ಯಾಯ ಅಭ್ಯರ್ಥಿ ರಾಧಾಸುಂದರೇಶ್ ಕೂಡಾ ಜನಪರ ಕಾಳಜಿ, ದುಡಿಯುವ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಹೋರಾಟದ ರಾಜಕಾರಣದಲ್ಲಿ ಸಕ್ರಿಯವಾಗಿರುವುದರಿಂದ ಕಾಂಗ್ರೆ-ಬಿಜೆಪಿಗೆ ಅವರು ಪ್ರಬಲ ಪೈಪೋಟಿಯಾಗಿದ್ದಾರೆ.

ರಾಧಾಸುಂದರೇಶ್‌ರವರ ಗೆಲುವು ತೃತೀಯರಂಗ ಅಧಿಕಾರ ಹಿಡಿಯಲು ಸಹಕಾರಿಯಾಗಲಿದ್ದು, ಇದರಿಂದ ಎಡಪಕ್ಷಗಳ ಬಲ ವೃದ್ಧಿಯಾಗಲಿದೆ. ಕ್ಷೇತ್ರದ ಸಮಸ್ಯೆಗಳ ಪರಿಹಾರಕ್ಕೆ ತೃತೀಯರಂಗದ ಅಭ್ಯರ್ಥಿಗಳ ಗೆಲುವು ಇಂದಿನ ರಾಜಕೀಯ ಅನಿವಾರ್ಯತೆ ಯಾಗಿದ್ದು, ಈ ದಿಸೆಯಲ್ಲಿ ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಮತದಾರರು ತೃತೀಯ ರಂಗವನ್ನು ಬೆಂಬಲಿಸುವುದು ಸೂಕ್ತವಾಗಿದೆ.

ಕವಿತೆ

ರಿಯಾಯಿತಿ

ಬೆಚ್ಚಗೆ ಅಮ್ಮನ ಒಡಲಲ್ಲಿದ್ದು
ಪೊರೆ ಕಳಚಿ ಬೆಳಕಿನ ಕಪ್ಪು ಲೋಕಕ್ಕೆ
ಬಂದಾಗ
ಕಿಟಾರನೆ ಕಿರುಚಿ ಗೋಳಿಡಬೇಡ ಮಗುವೆ!
ನಿನ್ನ ಅಳು ದುಃಖದುಮ್ಮಾನ
ಇನ್ನು ಮೇಲೆ ಇದ್ದದ್ದೇ!

ಆದರೂ
ನಿನ್ನೆಲ್ಲ ನೋವುಗಳಿಗೆ
ಇಲ್ಲಿ ಎಲ್ಲಕ್ಕು ಇರುವಂತೆ ಇದೆ
ಶೇಕಡ ಅರವತ್ತು ಭಾರಿ ರಿಯಾಯಿತಿ
ಗಂಡುಕುಲದವ ನೀನಾಗಿದ್ದರೆ

ಸತಿ ವರದಕ್ಷಿಣೆ ಮುಟ್ಟು ಗೃಹಬಂಧನ
ಅದುಮಿಟ್ಟ ಬಯಕೆಗಳು
ನಿನ್ನನ್ನು ಕಾಡುವುದಿಲ್ಲ

ಉಸಿರಾಡಬಹುದು
ಮತ್ತೆ ಶೇಕಡ ಇಪ್ಪತ್ತು
ರಿಯಾಯಿತಿಯುಂಟು
ನಿನ್ನ ಹೆತ್ತವರು ಮೇಲುಜಾತಿ
ಯವರಾಗಿದ್ದರೆ

ಅಸ್ಪೃಶ್ಯತೆ ಅವಹೇಳನ ಕೀಳರಿಮೆ
ಮೀಸಲಾತಿಯ ಆರೋಪ
ನಿನ್ನನ್ನು ಬಾಧಿಸುವುದಿಲ್ಲ
ಬದುಕಬಹುದು

ಇನ್ನೂ ಶೇಕಡ ಹತ್ತು ರಿಯಾಯಿತಿ-
ನಿನ್ನ ತೊಗಲಿನ ಬಣ್ಣಕ್ಕೆ;
ಅದು ಬಿಳಿಯದಾಗಿದ್ದರೆ

ವರ್ಣಭೇದ ಬಿಳಿಯ ಕಪ್ಪು ನೀತಿ
ನಿನ್ನನ್ನು ಕೆಣಕುವುದಿಲ್ಲ
ಇತರರ ತುಳಿಯಲೂಬಹುದು
ಉಳಿದ ಶೇಕಡ ಹತ್ತು ರಿಯಾಯಿತಿಗೆ

ನೀನು ಸ್ಥಿತಿವಂತನಾಗಿದ್ದಲ್ಲಿ
ನಿರ್ದಯ ನಿರ್ದೋಷ ನಿರ್ದಾಕ್ಷಿಣ್ಯ
ನಿರ್ಲಜ್ಜ
ನೀನಾಗಬಹುದು
ದಾನವನ ಮತ್ತೊಂದು ರೂಪ
ತಾಳಬಹುದು

ಆದರೆ ಖಂಡಿತಾ!
ಶೇಕಡ ನೂರು ರಿಯಾಯಿತಿ ಪಡೆದ
ನಿನಗೆ ಬದುಕಿನ ಮನುಷ್ಯತ್ವದ ಹಸಿಹಸಿ
ಅನುಭವ ಸಾಧ್ಯವಿಲ್ಲ!

■ ಶ್ರೀ ಚಂದ್ರಪ್ರಭ ಕಠಾರಿ

ತುಳು ಸಂಸ್ಕೃತಿ ನುಂಗುವ ಪುರೋಹಿತಶಾಹಿ ಯ

ತುಳು ಸಂಸ್ಕೃತಿಯ ಅನನ್ಯತೆಯ ಬಗ್ಗೆ ಅಧ್ಯಯನ ತಳೆದ ಹಲವಾರು ವರ್ಷಗಳಿಂದ ವಿಶ್ವ ವಿದ್ಯಾಲಯಗಳಲ್ಲಿ ಸಾಗಿಬರುತ್ತಿದೆ. ಉಡುಪಿಯ ಎಂ.ಜಿ.ಎಂ. ಕಾಲೇಜಿನ ಗೋವಿಂದ ಪೈ ಸಂಶೋಧನ ಕೇಂದ್ರ ಹಾಗೂ ಪ್ರಾದೇಶಿಕ ಸಂಶೋಧನ ಕೇಂದ್ರ ಮತ್ತು ಮಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆಸಿರುವ ಅಧ್ಯಯನಗಳು ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿವೆ. ಡಾ.ಅಮೃತ ಸೋಮೇಶ್ವರ ಅವರಿಂದ ತೊಡಗಿದ ತುಳುವ ಸಂಸ್ಕೃತಿಯ ಹಾಗೂ ಜಾನಪದದ ವಿಸ್ತೃತ ಅಧ್ಯಯನಗಳು ಡಾ.ವಿವೇಕ ರೈ, ಡಾ. ಎ.ವಿ.ನಾವಡ, ಡಾ. ಕೆ.ಚಿನ್ನಪ್ಪ ಗೌಡ, ಡಾ. ಪುರುಷೋತ್ತಮ ಬಿಳಿಮಲೆ, ಡಾ. ವಾಮನ ನಂದಾವರ, ಡಾ. ಬಿ.ಶಿವರಾಮ ಶೆಟ್ಟಿ, ಡಾ. ಕೆ.ಅಭಯಕುಮಾರ್, ಡಾ. ಗಣನಾಥ ಶೆಟ್ಟಿ ಎಕ್ಕಾರು, ಬನ್ನಂಜೆ ಬಾಬು ಅಮೀನ್ ಮೊದಲಾದವರಿಂದ ಮುಂದುವರಿದುಕೊಂಡು ಬಂದಿದೆ. ತುಳು ಸಾಹಿತ್ಯ ಅಕಾಡೆಮಿ ಮತ್ತು ಜಾನಪದ ಯಕ್ಷಗಾನ ಅಕಾಡೆಮಿಯಿಂದಲೂ ಈ ನಿಟ್ಟಿನಲ್ಲಿ ಒಂದಿಷ್ಟು ಪ್ರೋತ್ಸಾಹ ಇಂಥ ಅಧ್ಯಯನಗಳಿಗೆ ದೊರೆತಿವೆ. ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಬೇಕೆಂಬ ಹೋರಾಟಗಳೂ ಈ ನಿಟ್ಟಿನಲ್ಲಿ ಪೂರಕ ಪ್ರಯತ್ನಗಳೇ ಆಗಿವೆ.

ತುಳು ಜಾನಪದ ಮತ್ತು ತುಳುವ ಆಚರಣೆಗಳು ನಂಬಿಕೆಗಳು ವೈದಿಕ ಆಚರಣೆಗಳಿಗಿಂತ ಭಿನ್ನವಾಗಿದ್ದು, ಅವು ಅನನ್ಯವಾದವು ಎಂಬುದು ವಿದ್ವಾಂಸರ ಅಧ್ಯಯನಗಳಿಂದ ತಿಳಿದುಬರುವ ವಿಚಾರ; ತುಳುವರ ಭೂತಾರಾಧನೆ ಪಾಡ್ದನಗಳು, ಪ್ರಾಚೀನರ ಆರಾಧನೆ, ಹಬ್ಬ ಹರಿದಿನಗಳು, ಕೋಲ ನೇಮ- ತಂಬಿಲ- ಗಡಿಯಾರಗಳು ವೈದಿಕಾಂಶ ವಿರಹಿತವಾದ, ಖಚಿತವಾಗಿಯೂ ಶೂದ್ರಮೂಲವಾದ ಸಂಸ್ಕೃತಿ ಎಂಬುದು ಬಹುಜನ ವಿದ್ವಾಂಸರ ಗ್ರಹಿಕೆ.

ಬ್ರಾಹ್ಮಣೀಕರಣ:

ಇತ್ತೀಚಿನ ವರ್ಷಗಳಲ್ಲಿ ತುಳುವರ ಆಚರಣೆಗಳಲ್ಲಿ ಬ್ರಾಹ್ಮಣರ ಹಾಗೂ ಬ್ರಾಹ್ಮಣ್ಯದ ಪ್ರಭಾವ ಹೆಚ್ಚಾಗುತ್ತಿದೆ. ಸಂಘ ಪರಿವಾರ ಇದರ ಬೆನ್ನ ಹಿಂದೆ ನಿಂತು ವ್ಯವಸ್ಥಿತವಾಗಿ ಯೋಜಿಸುತ್ತಿದೆ. ಇದರಿಂದಾಗಿ ತುಳುವ ಸಂಸ್ಕೃತಿಯ ವೈಶಿಷ್ಟ್ಯ ನಷ್ಟವಾಗುತ್ತಿದ್ದು, ಇಡೀ ತುಳುವ ಸಂಸ್ಕೃತಿಯು ಬ್ರಾಹ್ಮಣ ಮೂಲದ್ದೇನೋ ಎಂಬ ಭ್ರಮೆಯನ್ನು ಸಾಮಾನ್ಯ ತುಳುವ ಜನಗಣದಲ್ಲಿ ಮೂಡಿಸುತ್ತಿದೆ. ನೇಮ, ಕೋಲಗಳು, ನೇಮೋತ್ಸವ, ಕೋಲೋತ್ಸವ ಅನಿಸಿಕೊಳ್ಳುತ್ತಿದೆ. ದೈವಸ್ಥಾನ, ಆಲಡೆಗಳಲ್ಲಿ ಬ್ರಹ್ಮ ಕಲಶೋತ್ಸವ, ಜೀರ್ಣೋದ್ಧಾರಗಳು ಪದೇ ಪದೇ ನಡೆಯುತ್ತಿವೆ. ದೈವಸ್ಥಾನದಲ್ಲಿ 'ಅಶುದ್ಧಿ'ಯ ಕಾರಣಕ್ಕಾಗಿ ಶುದ್ಧೀಕರಣದ ಪ್ರಕ್ರಿಯೆಯ ಭಾಗವಾಗಿ ಈ ಬ್ರಹ್ಮಕಲಶಗಳನ್ನು ನಡೆಸಬೇಕೆಂದು ಬ್ರಾಹ್ಮಣ ವರ್ಗ ದೈವಸ್ಥಾನಗಳ ಮೂಲಾರಾಧಕರಾದ ಶೂದ್ರ ತುಳುವರಿಗೆ ತಾಕೀತು ಮಾಡುತ್ತಿದ್ದಾರೆ. ಬಹಳ

ತುಳು ನಾಡಿನ ಜನರ ಜಾನಪದ, ಶೂದ್ರ ಆಚರಣೆಗಳನ್ನು ವ್ಯವಸ್ಥಿತವಾಗಿ ಬ್ರಾಹ್ಮಣೀಕರಿಸುವ ಪ್ರಯತ್ನಗಳು ನಡೆಯುತ್ತಿವೆ. ಇದರ ಬೆನ್ನ ಹಿಂದೆ ಸಮಾಜದ ಮೇಲೆ ಮೇಲು-ಕೀಳು ಎನ್ನುವ ವರ್ಣ ವ್ಯವಸ್ಥೆ ಹೇರುವ ವ್ಯವಸ್ಥಿತ ಯೋಜನೆ ಇದೆ. ಇಷ್ಟು ಮಾತ್ರವಲ್ಲ ಕೃಷಿಕ ಸಮುದಾಯದ ಜನರ ಈ ಆಚರಣೆಗಳನ್ನು ಕೋಮುವಾದೀಕರಿಸುವ ತೀವ್ರ ಯತ್ನವೂ ನಡೆದಿದೆ. ಬಿಜೆಪಿ-ಆರೆಸ್ಸೆಸ್‌ಗಳು ಈ ಎಲ್ಲದರ ಬೆನ್ನ ಹಿಂದೆ ನಿಂತು ಕೆಲಸ ಮಾಡುತ್ತಿವೆ ಎಂಬುದು ವಿಶೇಷವಾಗಿ ಗಮನಿಸಬೇಕಾದ ವಿಚಾರವಾಗಿದೆ.

ವಾಸುದೇವ ಉಚ್ಚಿಲ

ಅಪರೂಪವಾಗಿ ನಡೆಯುತ್ತಿದ್ದ ನಾಗಮಂಡಲಗಳು ಈಗ ಎಲ್ಲಾ ಊರುಗಳಿಗೂ ವ್ಯಾಪಿಸಿರುವುದು ಬ್ರಾಹ್ಮಣ ಅಧಿಪತ್ಯದ ಹಾಗೂ ತುಳು ಸಂಸ್ಕೃತಿಯ ನಾಶದ ಸಂಕೇತವಾಗಿ ಗೋಚರವಾಗುತ್ತಿದೆ. ಈ ಬಗ್ಗೆ ಆತಂಕವನ್ನು ಇಬ್ಬರು ಹಿರಿಯ ವಿದ್ವಾಂಸರಾದ ಡಾ.ಅಮೃತ ಸೋಮೇಶ್ವರ ಹಾಗೂ ಕೆ. ಚಿನ್ನಪ್ಪ ಗೌಡ ವ್ಯಕ್ತಪಡಿಸಿದ್ದಾರೆ. ಡಾ.ಅಮೃತ ಸೋಮೇಶ್ವರ ಅವರು ತುಳು ಅನನ್ಯತೆಯ ಮೇಲೆ ನಡೆಯುತ್ತಿರುವ ಧಾಳಿಯ ಬಗ್ಗೆ ಸಾಕಷ್ಟು ಬರೆದೂ ಇದ್ದಾರೆ. ಭೂತ, ದೈವಸ್ಥಾನಗಳ ಜೀರ್ಣೋದ್ಧಾರಕ್ಕೆ ಹೊರಟ ಮುಂಬಯಿ ಹೋಟೆಲಿಗರು, ಉದ್ಯಮಿಗಳು ಈ ಸಂಬಂಧ ತಮ್ಮಲ್ಲಿ ಅಭಿಪ್ರಾಯ ಕೇಳುತ್ತಾರಾದರೂ ಕೊನೆಯಲ್ಲಿ ಅವರು ಅನುಷ್ಠಾನಕ್ಕೆ ತರುವುದು ಬ್ರಾಹ್ಮಣರು, ತಂತ್ರಿಗಳು, ಜ್ಯೋತಿಷಿಗಳು ನೀಡುವ ಸೂಚನೆಗಳನ್ನು ಮಾತ್ರ. ಕಳೆದ ಹತ್ತು ವರ್ಷಗಳಿಂದ ಈ ವೈದಿಕೀರಣ ಹೆಚ್ಚಾಗಿದೆ ಎಂಬುದು ಡಾ.ಚಿನ್ನಪ್ಪ ಗೌಡರ ಅಭಿಪ್ರಾಯ.

ಸಂಘ ಪರಿವಾರವು ಕರಾವಳಿ ಜಿಲ್ಲೆಗಳಲ್ಲಿ ತನ್ನ ಬೇರನ್ನು ಭದ್ರಪಡಿಸಿಕೊಳ್ಳುವ ತನ್ನ ಯೋಜನೆಯ ಭಾಗವಾಗಿ ಕರಾವಳಿಯ ಸಾಂಸ್ಕೃತಿಕ ನೆಲೆಗಳನ್ನು ನಾಶಪಡಿಸತೊಡಗಿದೆ. ಅದರ ಭಾಗವಾಗಿಯೇ ಕಳೆದ 50 ವರ್ಷಗಳ ಹಿಂದೆಯೇ ತುಳು ಸಂಸ್ಕೃತಿಯ ವೈದಿಕೀಕರಣ ಪ್ರಾರಂಭವಾಗಿದೆ. ದೇವಸ್ಥಾನ, ದೈವಸ್ಥಾನಗಳ ವಾರ್ಷಿಕ ಜಾತ್ರೆಗಳಲ್ಲಿ ಕೇಸರಿ ಬಾವುಟ ಹಾಗೂ ಕೇಸರಿ ತೋರಣಗಳ ಅಲಂಕಾರ ಮೊದಲುಗೊಂಡು, ಇದೀಗ ಯಾವ ನೇಮ, ಕೋಲ, ಜಾತ್ರೆಗಳಲ್ಲೂ ಸಂಘ ಪರಿವಾರದವರು ಸಂಬಂಧಿಸಿದವರು ಕೇಳದೇ ಇದ್ದರೂ ತಾವೇ ಮೊದಲು ಆಗಮಿಸಿ ಈ ಕೇಸರಿ ಅಲಂಕರಣ ಪೂರ್ಣ ಮಾಡಿ ಹೋಗುತ್ತಾರೆ. ದೈವಸ್ಥಾನ ಆಡಳಿತ ಮಂಡಳಿಯ ಒಳಗಿನವರಾಗಿ ಹೋದ ಸಂಘ ಪರಿವಾರಿಗಳು ತಂತ್ರಿಗಳು, ಜ್ಯೋತಿಷಿಗಳು, ಬ್ರಾಹ್ಮಣರನ್ನು ಜಾತ್ರೆ, ಉತ್ಸವಗಳಲ್ಲಿ ಸಲಹೆ ನೀಡುವವರಾಗಿ ಆಹ್ವಾನಿಸುತ್ತಾರೆ. ಬಹಳ ಹಿಂದೆ ಕೆಲವೇ ಕೆಲವು ಭೂತಸ್ಥಾನಗಳಲ್ಲಿ ಬ್ರಾಹ್ಮಣರಿಗೆ ಜಾತ್ರೆ ನೇಮಗಳಲ್ಲಿ ಪಾತ್ರವಿರುತ್ತಿತ್ತು. ಈಗ ಎಲ್ಲಾ ಭೂತ ಸ್ಥಾನಗಳಲ್ಲೂ ಬ್ರಹ್ಮಕಲಶಾದಿಗಳನ್ನು ಪ್ರತಿ 12 ವರ್ಷಗಳಿಗೊಮ್ಮೆ ನಡೆಸಲೇಬೇಕೆಂದು ತಂತ್ರಿಗಳು ನಿರ್ದೇಶನ ನೀಡುತ್ತಾರೆ. ಬ್ರಾಹ್ಮಣೇತರ ತುಳುವರ ಮದುವೆಗಳಲ್ಲಿ ವೈದಿಕ ಸಂಪ್ರದಾಯದ ಸಪ್ತಪದಿ ಇತ್ಯಾದಿ ಯಾವ ವಿಧಿಗಳೂ ಇರಲಿಲ್ಲ. ಅಂದರೆ ಬ್ರಾಹ್ಮಣರ ಪ್ರವೇಶವೇ ಇರಲಿಲ್ಲವೆನ್ನಬಹುದು. ಆದರೆ ಈಗ ಶೂದ್ರ ತುಳುವರ ಮದುವೆ, ಮರಣ, ಸೀಮಂತಗಳಲ್ಲೂ ಬ್ರಾಹ್ಮಣರು ಪ್ರವೇಶಿಸಿದ್ದಾರೆ. ವೈದಿಕವಲ್ಲದಿದ್ದ ಮನೆ ಒಕ್ಕಲು ಸಮಾರಂಭಗಳು ಈಗ ಹೋಮ (ಗಣಹೋಮ, ವಾಸ್ತುಹೋಮ) ಇತ್ಯಾದಿಗಳಿಂದ ಕೂಡಿರುತ್ತವೆ. ನಮ್ಮ ಮೂಲ ರಿವಾಜುಗಳು ಯಾವುವೆಂದು ತುಳುವರಿಗೇ ಮರೆತುಹೋಗಿದೆ.

ಮೂಲದ ತುಳುವ ಆಚರಣೆ, ವಿಧಿ, ನಂಬಿಕೆಗಳಲ್ಲಿ ಊಳಿಗಮಾನ್ಯ ಸಮಾಜದ ವರ್ಗ ನೆಲೆಗಳನ್ನು ನಾವು ಗುರುತಿಸಬಹುದಾಗಿದೆ. ಕೋಟಿ ಚೆನ್ನಯ, ಕೋಡ್ದಬ್ಬು, ತನ್ನಿಮಾನಿಗ, ಸಿರಿ, ಮುಗೇರ್ಕುಳು, ಕಾನದ ಕಾಟದ ಮೊದಲಾದ ಜಾನಪದ ಕಥಾನಕ (ಪಾಡ್ದನ) ಒಂದೋ



ಕೆಳಜಾತಿಯ ವೀರರು ಮೇಲುಜಾತಿ ಭೂಮಾಲಕರ ಶೋಷಣೆಯ ವಿರುದ್ಧ ಹೋರಾಡಿದ ಕಥೆಗಳಾಗಿರುತ್ತವೆ. ಇಲ್ಲವೇ ಮಾತೃಪ್ರಧಾನತೆಯನ್ನು ದಮನಿಸಿದ ಭೂಮಾಲಕರ ಪುರುಷರ ವಿರುದ್ಧ ಮಹಿಳೆ ಹೋರಾಟ ಮಾಡಿದ ಕಥೆಯಾಗಿರುತ್ತದೆ. ಈ ಪಾಡ್ದನಗಳು ಹೇಳುವ ವೃತ್ತಾಂತಗಳು ಐದಾರು ಶತಮಾನಗಳಿಗೂ ಮೊದಲೇ ನಡೆದುವೆಂಬುದು ತಿಳಿದುಬರುತ್ತದೆ. ಆದರೆ ಲಾಗಾಯ್ತಿನಿಂದಲೂ ಊರ ಜಾತ್ರೆಯ ಪ್ರಧಾನ ದೈವಗಳಾಗಿ ಈ ಪ್ರತಿಭಟನಾಕಾರರು ಆರಾಧಿಸಲ್ಪಡುವ ಕ್ಷೇತ್ರಗಳಲ್ಲಿ ಮೇಲುಜಾತಿ ಭೂಮಾಲಕರಾದ ಜೈನ, ಬಂಟ, ಬ್ರಾಹ್ಮಣರೇ ಅಲ್ಲಿನ ಆಡಳಿತಗಾರರಾಗಿದ್ದಾರೆ. ತೀರಾ ಇತ್ತೀಚಿನ ಐವತ್ತು ವರ್ಷಗಳ ಅವಧಿಯಲ್ಲಿ ಮಾಂಸಹಾರಿಗಳಲ್ಲದ ಬ್ರಾಹ್ಮಣರೂ ಈ ದೈವಸ್ಥಾನಗಳ ಆಚರಣೆ, ಉತ್ಸವಗಳ ನಿಯಂತ್ರಕರಾಗಿದ್ದಾರೆ. ಈ ಬ್ರಾಹ್ಮಣ ಪ್ರಾಧಾನ್ಯ ಬರುವ ಮೊದಲು ಭೂತಾರಾಧನೆಗಳು ಊಳಿಗಮಾನ್ಯ ವ್ಯವಸ್ಥೆಯ ಮೌಲ್ಯಗಳನ್ನು ಪ್ರತಿಪಾದಿಸುತ್ತಿದ್ದರೂ, ಅವಕ್ಕೊಂದು ತುಳುವ

ಅನನ್ಯತೆ ಇದ್ದಿತ್ತು. ಇತ್ತೀಚಿನ ಬೆಳವಣ
ತುಳುವ ಅನನ್ಯತೆ ಅವಸಾನದತ್ತ ಸಾಗುತ್ತಿದ
ಖೇದ ಡಾ. ಚಿನ್ನಪ್ಪ ಗೌಡರದ್ದು.

ತುಳು ಸಂಸ್ಕೃತಿ, ಸಾಂಸ್ಕೃತಿಕ
ವಿಪರೀತ ಬೆಳಕಿನ ಬಳಕೆಯಿಂದ
ಕಲಾವಿದರ ಮೈಮೇಲೆ ಮೊದಲು ಇಲ್ಲದಿದ್ದ
ಬೆಳ್ಳಿ ಮುಂತಾದ ಒಡವೆಗಳ ಹೇರುವಿಕೆ
ಸಾಂಸ್ಕೃತಿಕ ಅನನ್ಯತೆಗೆ ಧಕ್ಕೆ ಬಂದಿದೆ
ಆತಂಕ ಅವರದ್ದು.

ತುಳು ಸಂಸ್ಕೃತಿಯಲ್ಲಿ ಪುನರ್ಜ
ಪರಿಕಲ್ಪನೆ ಇರುವುದಿಲ್ಲ ಎಂಬುದು ಡಾ.
ಗೌಡರ ವಿವರಣೆ. ಮರಣ ಹೊಂದಿದವ
ಲೋಕ ತೊರೆದು ಮಾಯ
ಲೋಕದಲ್ಲಿರುವರೆಂದೂ ಅವರನ್ನು
ಬದುಕಿರುವ ಬಂಧುಗಳು ಆಹ್ವಾನಿಸಿ ಎಡೆ
(ಉಳಯಿ ಲೆಪ್ಪುನ) ಅವರು ಬಂದು
ಸ್ವೀಕರಿಸಿ ಹೋಗುವರೆಂದು ತುಳುವರ ನ
ಈ ಸಂದರ್ಭದಲ್ಲಿ ಹನ್ನೊಂದೋ ಹದಿನ
ಬಾಳೆಯೆಲೆಗಳಲ್ಲಿ ಆಹಾರ ಬಡಿ
ಸಂಪ್ರದಾಯವಿದೆ. ಈ ಸಂಖ್ಯೆಗಳು ತೀರಿಕ
ಅಷ್ಟು ತಲೆಮಾರುಗಳನ್ನು ಪ್ರತಿನಿಧಿಸು
ಹೊಸದಾಗಿ ಒಬ್ಬರು ತೀರಿಕೊಂ
ಮೊದಲಲ್ಲ 16 ರಲ್ಲಿ (ಅಥವಾ 11
ಒಂದನ್ನು ಕಳೆದು ತೆಗೆದು ಮತ್ತೆ ಒ
ಹೊಸತಾಗಿ ಸೇರಿಸಿ ಆಹಾರ ಬಡಿಸ
ಮೂಲಕ ಸತ್ತವರನ್ನು ಗತಿಸಿದ
ಮಾಯಾಲೋಕಕ್ಕೆ ಕಳುಹಿಸಿ ಕೊ
ಸಂಪ್ರದಾಯವಿದೆ. ಈ ತು
ಸಂಪ್ರದಾಯದಂತೆ ಸತ್ತವರು ನಿಜ
ಸತ್ತಿರುವುದಿಲ್ಲವೆಂದೂ ಅವರು ಇನ್ನೂ
ಲೋಕದಲ್ಲಿ ಇರುವರೆಂದೂ ಗ್ರಹಿಕೆ ಇರು
ಪುನರ್ಜನ್ಮದ ಪರಿಕಲ್ಪನೆ ಇಲ್ಲಿ ಇಲ್ಲವೇ
ಆದರೆ ತುಳುವರಲ್ಲದ ಬ್ರಾ
ಪುನರ್ಜನ್ಮದ ಪರಿಕಲ್ಪನೆಯನ್ನು ಇ
ವರ್ಷಗಳಲ್ಲಿ ಚಲಾವಣೆಗೆ ತರಲಾಗ
ಎಂಬುದು ಡಾ.ಚಿನ್ನಪ್ಪಗೌಡರ ಕಳವಳ.

ತುಳು ಸಂಸ್ಕೃತಿಯ ಈ ಹಿ
ಆಚರಣೆಗಳಿಗೇ ಬದ್ಧವಾಗಿ ನಡೆಯುವ
ಪ್ರಯತ್ನದಿಂದ ವೈದಿಕ ಸಾಂಸ್ಕೃತಿಕ ಧಾಳಿ
ತುಳು ಸಂಸ್ಕೃತಿಯನ್ನು ಉಳಿಸಿ ಕೊಳ್ಳಬ
ಎಂಬ ಅಭಿಪ್ರಾಯಗಳಿವೆ. ಆದರೆ ಸಂಸ್ಕ
ಅನನ್ಯತೆಯ ಪ್ರಶ್ನೆಯನ್ನು ಇಷ್ಟು ಸರ
ನಿರ್ವಹಿಸಲಾಗದು. ಸಂಘ ಪರಿವ
ಸಾಂಸ್ಕೃತಿಕ ಧಾಳಿಯು ಫ್ಯಾಸಿಸ್ಟ್ ಮನೋಬ
ಯೋಜಿತ ದಾಳಿಯ ಭಾಗವಾಗಿದೆ. ಕೋ
ವಾದವನ್ನು ರಾಜಕೀಯವಾಗಿ ಎದು
ಪ್ರಶ್ನೆಯೊಂದಿಗೆ ಸಾಂಸ್ಕೃತಿಕ ಅನನ್ಯತೆ
ಜನಸಂಸ್ಕೃತಿಯ ನಿರೂಪಣೆಯ ಪ್ರ
ತಳುಕು ಹಾಕಿಕೊಂಡಿವೆ. ಪ್ರಗತಿಪರ ಶ
ಸಾಂಸ್ಕೃತಿಕವಾಗಿಯೂ ರಾಜಕೀಯ ವಾ
ಸಂಘಟನಾತ್ಮಕವಾಗಿಯೂ ಕೋಮು
ಶಕ್ತಿಗಳ ಈ ಸವಾಲನ್ನು ಎದುರಿಸಬೇಕಿದೆ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH